

ಮತ್ತೀಕೆರೆ ಶಾಖೆ ಸ್ವಂತ ಕಟ್ಟಡ



ಯಲಹಂಕ ಶಾಖೆ ಸ್ವಂತ ಕಟ್ಟಡ

## ಶಾಖೆಗಳ ವಿಳಾಸ

**1. ಪ್ರಧಾನ ಕಛೇರಿ / ಜಯನಗರ ಶಾಖೆ**
ನಂ.30, 15ನೇ ಕ್ರಾಸ್, ಜಯನಗರ 3ನೇ ಬ್ಲಾಕ್,
ಬೆಂಗಳೂರು – 560 011

**2. ಮತ್ತೀಕೆರೆ ಶಾಖೆ**
ನಂ.1047, ತ್ರಿವೇಣಿ ರಸ್ತೆ, ಮತ್ತೀಕೆರೆ,
ಬೆಂಗಳೂರು – 560 054, ದೂರವಾಣಿ : 23374010

**3. ವಿಜಯನಗರ ಶಾಖೆ**
ನಂ.58, 15ನೇ ಮುಖ್ಯ ರಸ್ತೆ, ಆರ್. .ಸಿ.ಲೇಔಟ್, ವಿಜಯನಗರ,
ಬೆಂಗಳೂರು – 560 040. ದೂರವಾಣಿ : 23403063

**4. ಇಂದಿರಾನಗರ ಶಾಖೆ**
ನಂ.34, 2ನೇ ಮುಖ್ಯ ರಸ್ತೆ, ಬಿ.ಡಿ.ಎ. ಕಾಂಪ್ಲೆಕ್ಸ್ ಹತ್ತಿರ,
ಇಂದಿರಾನಗರ 1ನೇ ಹಂತ, ಬೆಂಗಳೂರು–560 038.
ದೂರವಾಣಿ : 25264063

**5. ಕೆಂಗೇರಿ ಶಾಖೆ**
ನಂ.40, ಎಸ್ ಎಲ್ ಎನ್ ಕಾಂಪ್ಲೆಕ್ಸ್, ಮೈಸೂರು ರಸ್ತೆ,
ಕೆಂಗೇರಿ ಟೌನ್, ಬೆಂಗಳೂರು – 560 060. ದೂರವಾಣಿ : 28482256

**6. ಯಲಹಂಕ ಶಾಖೆ**
ನಂ. 981, 12ನೇ 'ಎ' ಮುಖ್ಯ ರಸ್ತೆ, ಎ ಸೆಕ್ಟಾರ್, 3ನೇ ಹಂತ,
ಯಲಹಂಕ ಉಪನಗರ, ಬೆಂಗಳೂರು–560 064.
ದೂರವಾಣಿ : 28562074

**7. ಬಿ.ಇ.ಎಸ್. ಕಾಲೇಜು ಶಾಖೆ**
ಭಾರತ್ ವಿದ್ಯಾಸಂಸ್ಥೆ ಆವರಣ, 16ನೇ ಮುಖ್ಯ ರಸ್ತೆ, 4ನೇ ವಿಭಾಗ,
ಜಯನಗರ, ಬೆಂಗಳೂರು – 560 011. ದೂರವಾಣಿ : 22443973

**8. ಬೇಗೂರು ಶಾಖೆ**
ನಂ.250, ವಿಶ್ವ್ರಯ ಲೇಔಟ್, ಬೇಗೂರು,
ಬೆಂಗಳೂರು – 560 068. ದೂರವಾಣಿ : 25740777

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿ.


ಆಡಳಿತ ಕಛೇರಿ :
ನಂ. 30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು – 560 011
ದೂರವಾಣಿ : 26632783, 26633566





## 46ನೇ ವಾರ್ಷಿಕ ವರದಿ
## ಮತ್ತು
## ಲೆಕ್ಕಪರಿಶೋಧನಾ ವರದಿ
## 2019–2020

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ನಂ. 30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು - 560 011

ಸ್ಥಾಪನೆ : 21-08-1974
ರಿ.ಸಂ.ಸಿ.ಎ.ಆರ್.ಸಿ.ಎಸ್. : 2764 : 74-75

ರಿಸರ್ವ್ ಬ್ಯಾಂಕ್ ಲೈಸೆನ್ಸ್ ಸಂ.ಎ.ಸಿ.ಡಿ.ಎಂ.ವೈ.50 .
ದಿನಾಂಕ : 03-01-1975



ಸಹಕಾರ ರತ್ನ
ಶ್ರೀ ಬಿ. ಎಲ್. ಲಕ್ಕೇಗೌಡ
ಸಂಸ್ಥಾಪಕರು



ಡಾ: ಎಂ. ಸಿ. ಜಗತ್
ಅಧ್ಯಕ್ಷರು



ಡಾ: ಎಂ. ವೀರಪ್ಪ
ಉಪಾಧ್ಯಕ್ಷರು



ಶ್ರೀ ಕೆ.ಎಲ್. ಗಂಗಾಧರಗೌಡ
ನಿರ್ದೇಶಕರು



ಶ್ರೀ ಜೆ.ಎಂ. ಜಯಪ್ರಕಾಶ್(ಜೆ. .)
ನಿರ್ದೇಶಕರು



ಶ್ರೀ . ನರಸಿಂಹಮೂರ್ತಿ
ನಿರ್ದೇಶಕರು



ಶ್ರೀ ಜಿ.ಎನ್.ಆರ್. ಮೋಹನ
ನಿರ್ದೇಶಕರು



ಶ್ರೀ ಎಂ. ರಾಮಕೃಷ್ಣ
ನಿರ್ದೇಶಕರು



ಶ್ರೀ ಹೆಚ್. ಳ್ಯಾಂಜನಪ್ಪ
ನಿರ್ದೇಶಕರು



ಶ್ರೀ ಟಿ. ರವಿಶಂಕರ್
ನಿರ್ದೇಶಕರು



ಶ್ರೀ ಬಿ.ಎನ್. ಲೋಕೇಶ್
ನಿರ್ದೇಶಕರು



ಶ್ರೀ ಎಂ. ರಾಜಶೇಖರರೆಡ್ಡಿ
ನಿರ್ದೇಶಕರು



ಶ್ರೀ ಕೆ.ಎಸ್. ಸುಧಾಕರ್
ನಿರ್ದೇಶಕರು



ಶ್ರೀ ಎಸ್. ಬಸವರಾಜಪ್ಪ
ನಿರ್ದೇಶಕರು



ಶ್ರೀ ಕೆ.ಎಸ್. ನಂಜುಂಡೇಗೌಡ
ನಿರ್ದೇಶಕರು



ಶ್ರೀ ವಿ. ಶ್ರೀನಿವಾಸಯ್ಯ
ನಿರ್ದೇಶಕರು



ಡಾ. ಮಹೇಶ್ ಅರವಿಂದ್
ನಿರ್ದೇಶಕರು



ಶ್ರೀಮತಿ ಬಿ.ಎಲ್. ನಂದಿನಿ
ನಿರ್ದೇಶಕರು



ಶ್ರೀಮತಿ ಡಿ. ಎ. ಅಮೃತ
ಕಾರ್ಯದರ್ಶಿ

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿ.

1. ಸಾಲದ ಉಪಸಮಿತಿ

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಶ್ರೀ ಎಂ. ರಾಮಕೃಷ್ಣ – ಸದಸ್ಯರು
ಶ್ರೀ ಕೆ. ಎಲ್. ಗಂಗಾಧರಗೌಡ – ಸದಸ್ಯರು
ಶ್ರೀ . ನರಸಿಂಹಮೂರ್ತಿ – ಸದಸ್ಯರು
ಶ್ರೀ ಕೆ. ಎಸ್. ನಂಜುಂಡೇಗೌಡ – ಸದಸ್ಯರು

2. ಲೆಕ್ಕ, ಕಂಪ್ಯೂಟರೀಕರಣ ಮತ್ತು ಲೆಕ್ಕಪರಿಶೋಧನೆ ಉಪಸಮಿತಿ :

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಡಾ: ಎಂ. ವೀರಪ್ಪ – ಸದಸ್ಯರು
ಶ್ರೀ . ನರಸಿಂಹಮೂರ್ತಿ – ಸದಸ್ಯರು
ಶ್ರೀ ಎಂ. ರಾಜಶೇಖರರೆಡ್ಡಿ – ಸದಸ್ಯರು
ಶ್ರೀ ಜಿ. ಎನ್. ಆರ್. ಮೋಹನ – ಸದಸ್ಯರು

3. ಕಾಯಿದೆ, ವಸೂಲಾತಿ, ನೇಮಕಾತಿ ಮತ್ತು ಶಿಸ್ತಿನ ಕ್ರಮ ಉಪಸಮಿತಿ:

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಶ್ರೀ ಜೆ. ಎಂ. ಜಯಪ್ರಕಾಶ್ (ಜೆ. .) – ಸದಸ್ಯರು
ಶ್ರೀ ಬಿ. ಎನ್. ಲೋಕೇಶ್ – ಸದಸ್ಯರು
ಶ್ರೀ ವಿ. ಶ್ರೀನಿವಾಸಯ್ಯ – ಸದಸ್ಯರು
ಶ್ರೀ ಕೆ. ಎಸ್. ಸುಧಾಕರ್ – ಸದಸ್ಯರು

4. ಅಭಿವೃದ್ಧಿ, ರಿಸೋರ್ಸಸ್, ಎಸ್ಟೇಟ್ ಮತ್ತು ಸದಸ್ಯತ್ವ ಉಪಸಮಿತಿ :

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಶ್ರೀ ಎಂ. ರಾಜಶೇಖರರೆಡ್ಡಿ – ಸದಸ್ಯರು
ಶ್ರೀಮತಿ ಬಿ. ಎಲ್. ನಂದಿನಿ – ಸದಸ್ಯರು
ಶ್ರೀ ಎಸ್. ಬಸವರಾಜಪ್ಪ – ಸದಸ್ಯರು

5. ದೂರು, ಕುಂದುಕೊರತೆ ಪರಿಶೀಲನೆ ಮತ್ತು ನಿವಾರಣಾ ಉಪಸಮಿತಿ

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಶ್ರೀ ಜಿ. ಎನ್. ಆರ್. ಮೋಹನ – ಸದಸ್ಯರು
ಶ್ರೀ ಕೆ. ಎಸ್. ಸುಧಾಕರ್ – ಸದಸ್ಯರು
ಶ್ರೀ ಹೆಚ್. ಳ್ಯಾಂಜನಪ್ಪ – ಸದಸ್ಯರು

6. ಶಾಖಾ ಉಪಸಮಿತಿ

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಶ್ರೀ ಜೆ. ಎಂ. ಜಯಪ್ರಕಾಶ್ (ಜೆ. .) – ಸದಸ್ಯರು
ಶ್ರೀ ಬಿ. ಎನ್. ಲೋಕೇಶ್ – ಸದಸ್ಯರು
ಶ್ರೀ ವಿ. ಶ್ರೀನಿವಾಸಯ್ಯ – ಸದಸ್ಯರು

7. ಹೂಡಿಕೆಗಳ ಉಪಸಮಿತಿ

ಡಾ: ಎಂ. ಸಿ. ಜಗತ್ – ಅಧ್ಯಕ್ಷರು
ಡಾ: ಎಂ. ವೀರಪ್ಪ – ಸದಸ್ಯರು
ಶ್ರೀ ಹೆಚ್. ಳ್ಯಾಂಜನಪ್ಪ – ಸದಸ್ಯರು
ಶ್ರೀ ಟಿ. ರವಿಶಂಕರ್ – ಸದಸ್ಯರು
ಡಾ. ಮಹೇಶ್ ಅರವಿಂದ್ – ಸದಸ್ಯರು

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು–560 011

## 46ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್‌ನ 2019–2020ನೇ ಸಾಲಿನ 46ನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು **ದಿನಾಂಕ 20–12–2020ನೇ ಭಾನುವಾರ ಬೆಳಿಗ್ಗೆ 11 ಘಂಟೆಗೆ ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್,** ನಂ. 30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು – 560 011. ಇಲ್ಲಿ ಬ್ಯಾಂಕಿನ ಅಧ್ಯಕ್ಷರಾದ **ಡಾ॥ ಎಂ. ಸಿ. ಜಗತ್** ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರದ ಆದೇಶದಂತೆ ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ಕೆಳಕಂಡ ಕಾರ್ಯಸೂಚಿಯನ್ನು ಪರಿಶೀಲಿಸಿ ಅಂಗೀಕರಿಸಲು ಕರೆಯಲಾಗಿದೆ.

### ಕಾರ್ಯಸೂಚಿ

| | | ಪುಟ ಸಂಖ್ಯೆ |
|---|---|---|
| **1.** | **ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು.** | 1 |
| **2.** | **ದಿನಾಂಕ 22–09–2019ರಂದು ನಡೆದ ಬ್ಯಾಂಕಿನ 45ನೇ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡುವುದು.** | 5–17 |
| **3.** | **2019–20ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ.** | 18–32 |
| **4.** | **2019–20ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.** | 45–208 |
| **5.** | **2019–20ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.** | 28–29 |
| **6.** | **2019–20ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.** | 33–35 |
| **7.** | **2021–22ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು.** | 33–36 |
| **8.** | **2020–21ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.** | |
| **9.** | **ಕರ್ನಾಟಕ ಸಹಕಾರ ಕಾಯ್ದೆ ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾ ತಿದ್ದುಪಡಿಗಳನ್ನು ಅನುಮೋದಿಸುವುದು.** | 37–44 |
| **10.** | **2020–21ನೇ ಸಾಲಿನ ಕಾರ್ಯಕ್ರಮದ ಪರಿಗಣನೆ.** | 32 |
| **11.** | **ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ.** | |
| **12.** | **ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ.** | 24 |
| **13.** | **ಅಧ್ಯಕ್ಷರ ಅಪ್ಪಣೆ ಮೇರೆಗೆ– ಇತರೆ ವಿಷಯಗಳು** | |

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸ್ಥಳ : ಬೆಂಗಳೂರು

ದಿನಾಂಕ : 1–12–2020

**ಅಮೃತ ಡಿ. ಎ.**

ಕಾರ್ಯದರ್ಶಿ

## ಸೂಚನೆಗಳು

1. ಕೋವಿಡ್ – 19 ಹರಡುವಿಕೆ ತಡೆಗಟ್ಟಲು ಕರ್ನಾಟಕ ಸರ್ಕಾರವು ಆಗಿಂದಾಗ್ಗೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಕೆಲವು ಸಮಯದವರೆಗೆ ಎಲ್ಲಾ ಸಂಘ–ಸಂಸ್ಥೆಗಳು ವಹಿವಾಟುಗಳನ್ನು ಮತ್ತು ಸಾರ್ವಜನಿಕ ಚಟುವಟಿಕೆಗಳನ್ನು ಸಹ ಸೀಮಿತಗೊಳಿಸಿರುವುದು ತಮಗೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಅದರ ಪರಿಣಾಮವಾಗಿ 2020ರ ವರ್ಷದಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಗಳನ್ನು ನಡೆಸುವ ವಿಚಾರವಾಗಿ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯು ದಿನಾಂಕ : 21–10–2020ರಂದು ಆದೇಶವನ್ನು ಹೊರಡಿಸಿ ಅದರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 1997ರ ಪ್ರಕಾರ ಮತ್ತು ಕೋವಿಡ್–19 ನಿರ್ವಹಣೆಗೆ ಹೊರಡಿಸಿದ ರಾಷ್ಟ್ರೀಯ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು 2020 ರ ಅವಧಿಗೆ ಮಾತ್ರ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ನಡೆಸಲು ಅನುಮತಿ ನೀಡಲಾಗಿದೆ ಹಾಗಾಗಿ ಮಾನ್ಯ ಸದಸ್ಯರು ವಿಡಿಯೋ ಕಾನ್ಫರೆನ್ಸ್ ಮೂಲಕ ಬ್ಯಾಂಕಿನ ಸರ್ವಸದಸ್ಯರ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳಿಗೆ ಅನುಮೋದನೆ ನೀಡಬೇಕೆಂದು ಕೋರುತ್ತೇವೆ.

2. ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ಭಾಗವಹಿಸಲು Meeting Link: www.dreamswebinar.com/bcdbank ಗೆ ಸಭೆಯ ದಿನದಂದು ಲಾಗಿನ್ ಆಗಿ ತಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆಯನ್ನು ನಮೂದಿಸಬೇಕು. ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮೂಲಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳನ್ನು ವಾರ್ಷಿಕ ಮಹಾಸಭೆಯ ಹಾಜರಾತಿಗೆ ಪರಿಗಣಿಸಲಾಗುವುದು.

3. ವಿಳಾಸ ಬದಲಾವಣೆ ಇದ್ದಲ್ಲಿ ತಕ್ಷಣ ಬ್ಯಾಂಕಿಗೆ ತಮ್ಮ ಹೊಸ ವಿಳಾಸವನ್ನೊಳಗೊಂಡ ಇತ್ತೀಚಿನ ಅಂಗೀಕೃತ ಪುರಾವೆಯನ್ನು ಅರ್ಜಿಯೊಂದಿಗೆ ಸಲ್ಲಿಸಿ ವಿಳಾಸ ಬದಲಾಯಿಸಿಕೊಳ್ಳತಕ್ಕದ್ದು.

4. 2019–20ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪರಿಶೋಧನಾ ವರದಿ ಮತ್ತು ಅದರ ಅನುವರ್ತನೆಯನ್ನು ಪ್ರತ್ಯೇಕವಾಗಿ ಮುದ್ರಿಸಿದ್ದು. ಇದರ ಪ್ರತಿಯನ್ನು ಸದಸ್ಯರು ದಿನಾಂಕ 14–12–2020ರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಪಡೆಯಬಹುದು.

5. ಬ್ಯಾಂಕಿನ Website:www.bcbbank.co ರಲ್ಲಿ ಸರ್ವಸದಸ್ಯರ ಸಭೆಯ ಸೂಚನಾ ಪತ್ರ ಮತ್ತು ವಾರ್ಷಿಕ ವರದಿ ಮತ್ತು ಆಡಿಟ್ ವರದಿಯನ್ನು ವೀಕ್ಷಿಸಬಹುದು.

6. ತಮ್ಮ ಸೂಚನೆ/ಸಲಹೆಗಳನ್ನು ಸಭೆಯಲ್ಲಿ ಮಂಡಿಸಲು ಇಚ್ಚಿಸುವ ಸುಸ್ತಿದಾರರಲ್ಲದ ಸದಸ್ಯರು ಸಭೆಗೆ 7 ದಿನಗಳ ಮುಂಚೆ ಲಿಖಿತ ಮೂಲಕ ಕಾರ್ಯದರ್ಶಿಯವರಿಗೆ ತಲು ಸಬೇಕು. ಅದರಂತೆ ಯಾವುದಾದರೂ ಕೋರಿಕೆ ಸಲ್ಲಿಸಿದ್ದಲ್ಲಿ ಅದನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುವಲ್ ಮೀಟಿಂಗ್) ಮುಖಾಂತರ ನಡೆಯುವ ಸಭೆಯಲ್ಲಿ ಚರ್ಚಿಸಲಾಗುವುದು.

7. ಬ್ಯಾಂಕಿನ ಕಾರ್ಯವ್ಯಾಪ್ತಿಯ ಹೊರಗೆ ವಾಸಿಸುತ್ತಿರುವಂತಹ ಸದಸ್ಯರುಗಳು ಯಾವುದೇ ರೀತಿಯ ಸಾಲ ಸೌಲಭ್ಯಗಳನ್ನು ಬ್ಯಾಂಕಿನಿಂದ ಪಡೆಯಲು ಅರ್ಹರಾಗಿರುವುದಿಲ್ಲ. ಆದುದರಿಂದ ಅಂತಹ ಸದಸ್ಯರುಗಳು ತಮ್ಮ ಸದಸ್ಯತ್ವವನ್ನು ತಕ್ಷಣ ರದ್ದುಗೊಳಿಸಿಕೊಳ್ಳಲು ಕೋರಲಾಗಿದೆ.

8. ಷೇರು ಸರ್ಟಿಫಿಕೇಟನ್ನು ಪಡೆಯದೇ ಇರುವ ಸದಸ್ಯರು ಆಡಳಿತ ಕಛೇರಿಯಲ್ಲಿ ಷೇರು ಸರ್ಟಿಫಿಕೇಟನ್ನು ಪಡೆಯಬೇಕಾಗಿ ವಿನಂತಿ.

9. ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಪ್ರತಿಭಾವಂತ ಮಕ್ಕಳಿಗೆ ಉತ್ತೇಜನ ಧನ ಸಹಾಯ ನೀಡುವುದಕ್ಕೆ ಸಂಬಂಧಿಸಿದಂತೆ, ಏಪ್ರಿಲ್–ಮೇ 2019–20ನೇ ಸಾಲಿನಲ್ಲಿ ನಡೆದ ಪರೀಕ್ಷೆಯಲ್ಲಿ ಸದಸ್ಯರುಗಳ ಹಾಗೂ ಸಿಬ್ಬಂದಿ ವರ್ಗದ ಮಕ್ಕಳು ಯುಸಿ 2ನೇ ವರ್ಷದ ಪರೀಕ್ಷೆಯಲ್ಲಿ ಮತ್ತು ಪದವಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.85ಕ್ಕಿಂತ ಹೆಚ್ಚಿಗೆ ಅಂಕ ಪಡೆದಂತಹವರು ಹಾಗೂ ರಾಷ್ಟ್ರ ಮಟ್ಟದ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಈ ಉತ್ತೇಜನ ಪಡೆಯಲು ಅರ್ಹರಾಗಿದ್ದು, ವಾರ್ಷಿಕ ಮಹಾಸಭೆಯ ದಿನಾಂಕಕ್ಕೆ 7 ದಿನಗಳ ಮುಂಚಿತವಾಗಿ ಸದಸ್ಯತ್ವದ ದಾಖಲೆ ಹಾಗೂ ಅಂಕಪಟ್ಟಿ ಸಹಿತ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬಹುದು.

10. ಮರಣೋತ್ತರ ಪರಿಹಾರ ನಿಧಿಯನ್ನು ಸದಸ್ಯರು ಮರಣ ಹೊಂದಿದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಈ ಪರಿಹಾರ ನಿಧಿಗೆ ವಾರಸುದಾರರು ಅರ್ಹರಾಗಿರುತ್ತಾರೆ.

11. ಸದಸ್ಯರುಗಳ ಠೇವಣಿಗಳ ಮೇಲೆ ನೀಡುವ ಬಡ್ಡಿಗೆ Sec.194A (3) (V) of Income Tax Act 1961 ಪ್ರಕಾರ T.D.S. ನಿಂದ ವಿನಾಯತಿ ಪಡೆಯಲು ಅರ್ಹ ಸದಸ್ಯರು/ಗ್ರಾಹಕರು ಆದಾಯ ತೆರಿಗೆ ಫಾರಂ 15ಜಿ/ಹೆಚ್ ನಲ್ಲಿ ಪಾನ್ ಸಂಖ್ಯೆಯನ್ನು ನಮೂದಿಸಿ ಬ್ಯಾಂಕಿನಲ್ಲಿ ಈ ಕೂಡಲೇ ಸಲ್ಲಿಸಲು ಕೋರಲಾಗಿದೆ. ಇದನ್ನು ಸಲ್ಲಿಸದಿದ್ದಲ್ಲಿ ವಾರ್ಷಿಕವಾಗಿ ಸಾಮಾನ್ಯರಿಗೆ ರೂ 40,000/– ಮತ್ತು ಹಿರಿಯ ನಾಗರೀಕರಿಗೆ ರೂ.50,000/–ಗಳ ಮೇಲ್ಪಟ್ಟು ಪಡೆಯುವ ಬಡ್ಡಿ ಮೇಲೆ ಶೇ.7.50 ರಂತೆ ಟಿ.ಡಿ.ಎಸ್. ಕಡಿತಗೊಳಿಸಲಾಗುವುದು. ರೂ.2,50,000/– ವರೆಗಿನ ಬಡ್ಡಿ ಆದಾಯಗಳಿಸುವಂತಹವರು 15G ಮತ್ತು 60 ವರ್ಷ ಮೇಲ್ಪಟ್ಟವರು ರೂ.3,00,000/– ವರೆಗಿನ ಬಡ್ಡಿ ಆದಾಯ ಗಳಿಸಿದಲ್ಲಿ 15H ಸಲ್ಲಿಸುವುದು. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಈ ಕೂಡಲೇ ಬ್ಯಾಂಕಿನ ಕೇಂದ್ರ ಕಛೇರಿ ಅಥವಾ ಶಾಖೆಗಳಲ್ಲಿ ಸಂಪರ್ಕಿಸಲು ಈ ಮೂಲಕ ವಿನಂತಿಸಲಾಗಿದೆ.

12. ಸದಸ್ಯರುಗಳು ಡಿವಿಡೆಂಡ್ ಅನ್ನು 3 ವರ್ಷಕ್ಕೂ ಮೇಲ್ಪಟ್ಟು (ಅವಧಿ ನಂತರವು) ಪಡೆಯದೆ ಇದ್ದಲ್ಲಿ ಡಿವಿಡೆಂಡ್ ಅನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. ಆದುದರಿಂದ 2016–17ನೇ ಸಾಲಿನ ಡಿವಿಡೆಂಡನ್ನು ಇನ್ನೂ ಪಡೆದಿಲ್ಲದಿರುವಂತಹ ಸದಸ್ಯರು ದಿನಾಂಕ 23.12.2020 ರ ಒಳಗಾಗಿ ಪಡೆಯಬೇಕಾಗಿ ವಿನಂತಿ. ಈ ಅವಧಿ ನಂತರ ಡಿವಿಡೆಂಡನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು. 2016–17, 2017–18 ಮತ್ತು 2018–19ನೇ ಸಾಲಿನ ಡಿವಿಡೆಂಡ್ ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ. ಡಿವಿಡೆಂಡ್ ಜಮಾ ಆಗಿರದೇ ಇದ್ದಲ್ಲಿ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

13. ಉಳಿತಾಯ ಖಾತೆಯನ್ನು ಹೊಂದಿಲ್ಲದ ಸದಸ್ಯರುಗಳು ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆದರೆ, ಆಯಾವರ್ಷದ ಡಿವಿಡೆಂಡನ್ನು ಅವರವರ ಉಳಿತಾಯ ಖಾತೆಗಳಿಗೆ ವರ್ಗಾಯಿಸಲಾಗುವುದು. ಆದುದರಿಂದ ಉಳಿತಾಯ ಖಾತೆಯನ್ನು ತೆರೆಯಲು ಕೋರಲಾಗಿದೆ.

ಬ್ಯಾಂಕು IFS Code ಪಡೆದಿದ್ದು IFS Code No.IBKL0008BCB ಆಗಿರುತ್ತದೆ. NEFT/RTGS ಸೌಲಭ್ಯ ಒದಗಿಸುತ್ತಿದೆ ಇದರಿಂದ ಬೇರೆ ಬ್ಯಾಂಕುಗಳ ಖಾತೆಗಳಿಂದ ಹಣವನ್ನು NEFT/RTGS ಮೂಲಕ ತಮ್ಮ ಖಾತೆಗಳಿಗೆ ವರ್ಗಾಯಿಸಬಹುದು ಮತ್ತು ತಮ್ಮ ಖಾತೆಗಳಿಂದ ಬೇರೆ ಬ್ಯಾಂಕುಗಳ ಖಾತೆಗಳಿಗೆ ಸಹ ವರ್ಗಾಯಿಸಬಹುದು, ಹಾಗೂ ಬೇರೆ ಬ್ಯಾಂಕುಗಳಲ್ಲಿ ನೆಟ್ ಬ್ಯಾಂಕಿಂಗ್ ಸೌಲಭ್ಯ ಹೊಂದಿದ್ದರೆ ಆ ಖಾತೆಗಳಿಂದ ತಮ್ಮ ಮೊಬೈಲ್ ಫೋನ್ ಮೂಲಕ ತಮ್ಮ ಖಾತೆಗಳಿಗೆ ಹಣವನ್ನು ವರ್ಗಾಯಿಸಬಹುದು. ಈ ಸೌಲಭ್ಯ ಪಡೆಯಲು ವಿನಂತಿ. ಉಳಿತಾಯ/ಚಾಲ್ತಿ ಖಾತೆಗಳಲ್ಲಿನ ವ್ಯವಹಾರಗಳಿಗೆ SMS Alert ಪಡೆಯಲು ಸದಸ್ಯರು ತಮ್ಮ ಮೊಬೈಲ್ ಸಂಖ್ಯೆಯನ್ನು ಸಲ್ಲಿಸಬೇಕಾಗಿ ವಿನಂತಿ.

14. ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ಮರುಪಾವತಿ ಮಾಡಿದ್ದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ. 1 ರಂತೆ ಬಡ್ಡಿ ರಿಯಾಯತಿ ನೀಡಲಾಗುವುದು. ಆಯಾ ಹಣಕಾಸು ವರ್ಷ ಪೂರ್ಣಗೊಂಡ ತಕ್ಷಣ ಈ ರಿಯಾಯಿತಿಯನ್ನು ಪಡೆಯಲು ಕೋರಿದೆ.

15. ಭಾರತೀಯ ರಿಸರ್ವ್ ಬ್ಯಾಂಕ್ ನಿಯಮಾನುಸಾರ 10 ವರ್ಷಕ್ಕೂ ಮೇಲ್ಪಟ್ಟ ಚಾಲ್ತಿಯಲ್ಲಿರದ ಎಲ್ಲಾ ತರಹದ ಠೇವಣಿ ಖಾತೆಗಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ಗೆ ವರ್ಗಾಯಿಸಬೇಕಾಗಿದ್ದು, ಸದಸ್ಯರು ಇದನ್ನು ಗಮನಿಸಿ ತಮ್ಮ ಠೇವಣಿ ಖಾತೆಗಳನ್ನು ಚಾಲ್ತಿ ಮಾಡುವಂತೆ ಮನವಿ ಮಾಡಿದೆ.

16. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960ಕ್ಕೆ ಮಾಡಿರುವ ತಿದ್ದುಪಡಿಗಳಿಗನುಸಾರವಾಗಿ ಬ್ಯಾಂಕಿನ ಉಪನಿಬಂಧನೆಗಳಿಗೆ ಸಮಗ್ರ ತಿದ್ದುಪಡಿಯಾಗಿರುವುದರಿಂದ ಮುಂಬರುವ ಬ್ಯಾಂಕಿನ ಸರ್ವಸದಸ್ಯರ ಸಭೆಗಳಲ್ಲಿ ಸುಸ್ತಿದಾರರಲ್ಲದ ಸದಸ್ಯರು ಮತ ಚಲಾಯಿಸಲು ಉಪನಿಬಂಧನೆ 44ರ ರೀತಿ ಈ ಕೆಳಕಂಡ ಅರ್ಹತೆಗಳನ್ನು ನಿಗದಿಪಡಿಸಲಾಗಿದೆ.

**1) 3 ನಿರಂತರ ಸಹಕಾರ ವರ್ಷಗಳಲ್ಲಿ ಪ್ರತಿ ವರ್ಷ ಒಬ್ಬ ಸದಸ್ಯನು ಉಪನಿಬಂಧನೆ 20ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.**

**(ಅ) ಸದಸ್ಯನು ಕನಿಷ್ಠ ಷೇರು ಮೊಬಲಗು ರೂ.500/– ಹೊಂದಿರತಕ್ಕದ್ದು.**

**(ಆ) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ರೂ.2.500/– ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ.**

**(ಇ) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು 2 ಇರತಕ್ಕದ್ದು**

**2) ಕಳೆದ 5 ಸಾಮಾನ್ಯ ಸಭೆಗಳ ಪೈಕಿ 3 ಸಾಮಾನ್ಯ ಸಭೆಗಳಿಗೆ ಹಾಜರಾಗತಕ್ಕದ್ದು.**

**ಮತ ಚಲಾಯಿಸಲು ಮೇಲೆ ತಿಳಿಸಿರುವ ಅರ್ಹತೆಗಳಲ್ಲಿ ಎಲ್ಲಾ ಅರ್ಹತೆಗಳನ್ನು ಪಾಲಿಸಿರಬೇಕು ಅದಕ್ಕೆ ತ್ಪದ್ದಲ್ಲಿ ಸದಸ್ಯರಿಗೆ ಮತ ಚಲಾಯಿಸುವ ಹಕ್ಕಿರುವುದಿಲ್ಲ.**

**ಮೇಲೆ ತಿಳಿಸಿರುವ ಅಂಶಗಳನ್ನು ತಾವು ಗಮನಿಸಿ ತಮ್ಮ ಮೂಲ ಷೇರು ಮೊಬಲಗು ರೂ.500/– ಕ್ಕಿಂತ ಕಡಿಮೆ ಇದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ತಕ್ಷಣ ಪಾವತಿಸಬೇಕೆಂದು ಹಾಗೂ ಕನಿಷ್ಠ ಸೇವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಮನವಿ ಮಾಡಿದೆ.**

ಇನ್ನೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೇಂದ್ರ ಕಛೇರಿಯ ಷೇರು ವಿಭಾಗದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮುಖಾಂತರ ಮಾಹಿತಿ ಪಡೆಯಲು ವಿನಂತಿ.

ಬ್ಯಾಂಕಿನ ಎಲ್ಲಾ ನಿರ್ದೇಶಕರು ಮೇಲೆ ತಿಳಿಸಿರುವ ಬ್ಯಾಂಕಿನ ಸೇವೆಗಳನ್ನು ಬಳಸಿಕೊಂಡಿರುತ್ತಾರೆ.

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ :** ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ,
ಜಯನಗರ, ಬೆಂಗಳೂರು-560 011

**********************

## 45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು

ದಿನಾಂಕ 22.09.2019ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ, ಬೆಂಗಳೂರು ನಗರದ ಜಯನಗರ ಬಡಾವಣೆಯ ನಾಲ್ಕನೇ ವಿಭಾಗ, 16ನೇ ಮುಖ್ಯ ರಸ್ತೆಯಲ್ಲಿರುವ, ಭಾರತ್ ವಿದ್ಯಾ ಸಂಸ್ಥೆಯ ಆವರಣದಲ್ಲಿರುವ ಶ್ರೀ ಕೆ.ಆರ್. ಮರುದೇವಗೌಡ ರಂಗಮಂದಿರದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾಃ ಎಂ.ಸಿ. ಜಗತ್‌ರವರ ಸಭಾಧ್ಯಕ್ಷತೆಯಲ್ಲಿ ನಡೆದ 45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡಾವಳಿಗಳು:

**ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ :** 3590

**ಪ್ರಾರ್ಥನೆ :**

ಕುಮಾರಿ ದೀ_ ರವರಿಂದ ಪ್ರಾರ್ಥನೆಯೊಂದಿಗೆ ಸಭೆಯು ವಿಧ್ಯುಕ್ತವಾಗಿ ಆರಂಭಗೊಂಡಿತು.

**ವಿಷಯ - 1 : ಸರ್ವಸದಸ್ಯರ ಸಭೆಯ ಸೂಚನೆಯನ್ನು ಓದಿ ದಾಖಲು ಮಾಡುವುದು**

ಬ್ಯಾಂಕಿನ ಕಾರ್ಯದರ್ಶಿಯವರಾದ ಶ್ರೀಮತಿ ಡಿ.ಎ. ಅಮೃತ ರವರು 2018-19ನೇ ಸಾಲಿನ 45ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಸಭೆಯಲ್ಲಿ ಓದಿದರು. ಇದನ್ನು ದಾಖಲು ಮಾಡಲು ಒ್ಪಗೆ ಸೂಚಿಸಬೇಕೆಂದು ಸಭಾಧ್ಯಕ್ಷರು ಕೋರಿದರು.

ಸೂಚನಾ ಪತ್ರವನ್ನು ಓದಿ ದಾಖಲು ಮಾಡಬಹುದೆಂದು ಸದಸ್ಯರಾದ ಪ್ರೊ: ನಂಜುಂಡೇಗೌಡ ರವರು ಸೂಚಿಸಿದರು. ಸದಸ್ಯರಾದ ಶ್ರೀ ರಾಜು ಜಿ. ರವರು ಅನುಮೋದಿಸಿದರು. ನಂತರ ಸಭೆಯು ಸೂಚನಾ ಪತ್ರವನ್ನು ಓದಿ ದಾಖಲು ಮಾಡಲು ತನ್ನ ಒ್ಪಗೆ ನೀಡಿತು. ದಾಖಲು ಮಾಡಲಾಯಿತು.

**ವಿಷಯ 2: ದಿನಾಂಕ 23.09.2018 ರಂದು ನಡೆದ ಬ್ಯಾಂಕಿನ 44ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡುವುದು.**

ಬ್ಯಾಂಕಿನ ಅಧ್ಯಕ್ಷರಾದ ಡಾ: ಎಂ. ಸಿ. ಜಗತ್‌ರವರು ಮಾತನಾಡುತ್ತಾ ದಿನಾಂಕ: 23.09.2018 ರಂದು ನಡೆದ ಬ್ಯಾಂಕಿನ 44ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ವಾರ್ಷಿಕ ವರದಿಯ ಪುಟ ಸಂಖ್ಯೆ 5 ರಿಂದ 23ರವರೆಗೆ ಮುದ್ರಿತವಾಗಿದ್ದು, ಸದಸ್ಯರುಗಳು ಈಗಾಗಲೇ ಓದಿರುತ್ತೀರಿ. ಇದನ್ನು ದಾಖಲು ಮಾಡಲು ಒಪ್ಪಿಗೆ ಸೂಚಿಸಬೇಕೆಂದು ಕೋರಿದರು. ಇದನ್ನು ಓದಿ ದಾಖಲು ಮಾಡಬಹುದೆಂದು ಸದಸ್ಯರಾದ ಶ್ರೀ ಟಿ. ರಾಜು ರವರು ಸೂಚಿಸಿದರು. ಸದಸ್ಯರಾದ ಪ್ರೋ॥ ಟಿ. ನಾರಾಯಣಪ್ಪ ರವರು ಅನುಮೋದಿಸಿದರು. ನಂತರ ಸಭೆಯು ದಿನಾಂಕ 23.09.2018 ರಂದು ನಡೆದ ಬ್ಯಾಂಕಿನ 44ನೇ ಸರ್ವಸದಸ್ಯರ ಸಭೆಯ ನಡಾವಳಿಗಳನ್ನು ಓದಿ ದಾಖಲು ಮಾಡಲು ತನ್ನ ಒಪ್ಪಿಗೆ ನೀಡಿತು. ದಾಖಲು ಮಾಡಲಾಯಿತು.

**ಗತಿಸಿದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಮರ್ಪಣೆ :**

ದಿನಾಂಕ 01.04.2018 ರಿಂದ 31.03.2019 ರವರೆಗೆ 117 ಜನ ಸದಸ್ಯರುಗಳು ದೈವಾಧೀನರಾಗಿದ್ದು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲು ಸಭೆಯು ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಿ ಶ್ರದ್ಧಾಂಜಲಿ ಸಮರ್ಪಿಸಿತು.

**ಸ್ವಾಗತ ಭಾಷಣ :**

**ಸಭಾಧ್ಯಕ್ಷರಾದ ಡಾ॥ ಎಂ. ಸಿ. ಜಗತ್‌ರವರು ಮಾತನಾಡುತ್ತಾ ಆತ್ಮೀಯ ಸಹಕಾರಿ ಸದಸ್ಯ ಬಂಧುಗಳೆ,**

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕಿನ ಪರವಾಗಿ ತಮ್ಮೆಲ್ಲರನ್ನು 45ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಸ್ವಾಗತಿಸುತ್ತೇನೆ.

ಸಹಕಾರ ಕ್ಷೇತ್ರದ ಉನ್ನತವಾದ ಮೌಲ್ಯಗಳ ಆಧಾರದ ಅಡಿಯಲ್ಲಿ ನೈತಿಕ ವ್ಯವಹಾರಿಕ ಪದ್ಧತಿ ಅನುಸರಿಸುತ್ತ, ಜನರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವ ಜೊತೆಯಲ್ಲಿಯೇ, ಸಾಮಾಜಿಕ ಹೊಣೆಗಾರಿಕೆಯನ್ನು ಸಮರ್ಥವಾಗಿ ನೆರವೇರಿಸುವ ಉದ್ಧೇಶದೊಂದಿಗೆ ಭಾರತ್ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಮಾಜಿ ವಿಶೇಷ ಜಿಲ್ಲಾಧಿಕಾರಿಗಳು, ಸಹಕಾರ ರತ್ನ ಶ್ರೀ ಬಿ.ಎಲ್.ಲಕ್ಕೇಗೌಡರು 1974ರಲ್ಲಿ ಬ್ಯಾಂಕನ್ನು ಸ್ಥಾಪಿಸಿದರು. ಶ್ರೀಯುತರು ಅಂದಿನಿಂದ ಇಂದಿನವರೆವಿಗೂ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸೂಕ್ತ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನಗಳನ್ನು ನೀಡುತ್ತಾ ಬ್ಯಾಂಕಿನ ಪ್ರಗತಿಗೆ ಗಣನೀಯ ಕೊಡುಗೆ ನೀಡುತ್ತಿರುವುದಕ್ಕೆ ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬ್ಯಾಂಕಿನ ಅಭಿವೃದ್ಧಿಗೆ ಅನೇಕರು ತಮ್ಮದೇ ಆದ ರೀತಿಯಲ್ಲಿ ಕೊಡುಗೆಗಳನ್ನು ನೀಡಿದ್ದಾರೆ. ಅವರೆಲ್ಲರನ್ನು ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ.

ಬ್ಯಾಂಕಿನ ಅಭಿವೃದ್ಧಿಗೆ ಕೈಗೊಳ್ಳಲಾದ ನೀತಿ ನಿರ್ಧಾರಗಳಿಗೆ ಸೂಕ್ತ ಸಲಹೆ ನೀಡಿ ಸಹಕರಿಸಿದ ಆಡಳಿತ ಮಂಡಳಿಯ ಸದಸ್ಯರಿಗೆ ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೆ ಹೃದಯಪೂರ್ವಕ ಸ್ವಾಗತ ಕೋರುತ್ತೇನೆ.

ಬ್ಯಾಂಕಿನ 45 ವರ್ಷದ ತನ್ನ ಪಯಣದಲ್ಲಿ ರಾಜ್ಯದ ಪ್ರತಿಷ್ಠಿತ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದಾಗಿದ್ದು, ನಿಮ್ಮೆಲ್ಲರ ್ರೀತಿ ಗೌರವಕ್ಕೆ ಪಾತ್ರವಾಗಿದೆ. ಸದಸ್ಯರ ಹಾಗೂ ಗ್ರಾಹಕರ ಬದಲಾಗುತ್ತಿರುವ ಅವಶ್ಯಕತೆಗಳು ಮತ್ತು ಅನುಕೂಲಕ್ಕೆ ಅನುಗುಣವಾಗಿ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಮೂಲಕ ಬ್ಯಾಂಕನ್ನು ಪ್ರಗತಿಯತ್ತ ಕೊಂಡೊಯ್ಯಲಾಗಿದೆ.

ಬ್ಯಾಂಕಿನ ಈ ಬೆಳವಣಿಗೆಗೆ ಮಾನ್ಯ ಸದಸ್ಯರು ಮತ್ತು ಗ್ರಾಹಕರು ಬ್ಯಾಂಕಿನ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸ. ಇದಕ್ಕೆ ಧಕ್ಕೆ ಬರದಂತೆ ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಬ್ಯಾಂಕನ್ನು Digital ತಂತ್ರಜ್ಞಾನದ ಸೇವೆಗೆ ಅಣಿಗೊಳಿಸಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾಗುತ್ತಿರುವ ಬೆಳವಣಿಗೆಗೆ ಹೊಂದಿಕೊಳ್ಳುತ್ತಾ ಬ್ಯಾಂಕನ್ನು ಇನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರ ಕರ್ತವ್ಯವಾಗಿದೆ.

ಬ್ಯಾಂಕು 2018–19ನೇ ಸಾಲಿನಲ್ಲೂ ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಕಳೆದ ಸಾಲಿಗೆ ಹೋಲಿಸಿದರೆ ಈ ಕೆಳಕಂಡಂತೆ ಪ್ರಗತಿ ಹೊಂದಿರುತ್ತದೆ.

(ರೂ.ಲಕ್ಷಗಳಲ್ಲಿ)

| | 31.03.2018 | 31.03.2019 | ಹೆಚ್ಚು |
|---|---|---|---|
| ಷೇರು ಬಂಡವಾಳ | 859 | 1118 | 259 |
| ಕಾಯ್ದಿಟ್ಟ ನಿಧಿ ಹಾಗೂ ಇತರೆ ನಿಧಿಗಳು | 2771 | 2817 | 46 |
| ಠೇವಣಿಗಳು | 43099 | 43660 | 561 |
| ಸಾಲ : ಮುಂಗಡಗಳು | 25039 | 30959 | 5920 |
| ದುಡಿಯುವ ಬಂಡವಾಳ | 47463 | 48453 | 990 |

ರಾಷ್ಟ್ರೀಕೃತ, ವಾಣಿಜ್ಯ ಮತ್ತು ಖಾಸಗಿ ಬ್ಯಾಂಕುಗಳ ಪೈಪೋಟಿ ನಡುವೆಯೂ ವರದಿ ಸಾಲಿನಲ್ಲಿ ರೂ. 59.20 ಕೋಟಿ ಸಾಲ ಮತ್ತು ಮುಂಗಡಗಳು (Loans and Advances) ಹೆಚ್ಚಳವಾಗಿ ಠೇವಣಿ ಮತ್ತು ಸಾಲಗಳ ಅನುಪಾತ (Deposits and Loans Ratio) ಶೇ.71ರಷ್ಟಾಗಿರುತ್ತದೆ.

ಬ್ಯಾಂಕು ಕಳೆದ ವರ್ಷ ರೂ. 1.72 ಕೋಟಿ ಲಾಭ ಗಳಿಸಿದ್ದು, ವರದಿ ಸಾಲಿನಲ್ಲಿ ರೂ.3.31 ಕೋಟಿ ಲಾಭ ಗಳಿಸಿದೆ. ನಿವ್ವಳ ಲಾಭದಲ್ಲಿ ಶೇ.14ರಷ್ಟು ಲಾಭಾಂಶವನ್ನು ಮಾನ್ಯ ಸದಸ್ಯರಿಗೆ ನೀಡಲು ಆಡಳಿತ ಮಂಡಳಿ ವಾರ್ಷಿಕ ಮಹಾಸಭೆಗೆ ಶಿಫಾರಸ್ಸು ಮಾಡಿದೆ.

ಯಾವುದೇ ಬ್ಯಾಂಕಿನ ಆರೋಗ್ಯ ಅರಿಯುವ ಮಾನದಂಡ, ಅದರ ಅನುತ್ಪಾದಕ ಆಸ್ತಿಗಳ ಪ್ರಮಾಣ. ವರದಿ ವರ್ಷದಲ್ಲಿ ಬ್ಯಾಂಕಿನ Gross NPA ಶೇ. 4.94 ಇದ್ದು, Net NPA ಶೇ.1.94ರಷ್ಟಾಗಿರುತ್ತದೆ. ಬ್ಯಾಂಕು 2018-19ನೇ ಸಾಲಿನಲ್ಲಿ ಸಹ ಆಡಿಟ್ ವರ್ಗೀಕರಣದಲ್ಲಿ 'ಎ' ದರ್ಜೆಗೆ ವರ್ಗೀಕರಿಸಲಾಗಿದ್ದು, ಮಾನ್ಯ ಸದಸ್ಯರು ಪಡೆದ ಸಾಲವನ್ನು ಸುಸ್ತಿ ಇಲ್ಲದೆ ಮರುಪಾವತಿಸಿದರೆ ಬ್ಯಾಂಕು ಇನ್ನೂ ಹೆಚ್ಚಿನ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಬ್ಯಾಂಕು ಕೋರ್ ಬ್ಯಾಂಕಿಂಗ್ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಬ್ಯಾಂಕಿನ ಸದಸ್ಯರಿಗೆ ಮತ್ತು ಗ್ರಾಹಕರಿಗೆ ತ್ವರಿತ ಹಣ ವರ್ಗಾವಣೆ ಮಾಡಲು RTGS ಹಾಗೂ NEFT ಸೇವೆ ಒದಗಿಸಲಾಗುತ್ತಿದೆ. ಬ್ಯಾಂಕಿನಲ್ಲಿ ATM ಡೆಬಿಟ್ ಕಾರ್ಡ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, Rupay ATM ಡೆಬಿಟ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ. ಸದಸ್ಯರು ಮತ್ತು ಗ್ರಾಹಕರು ತಮ್ಮ ಎಲ್ಲಾ ಖರೀದಿಗಳಿಗೆ Rupay ಡೆಬಿಟ್ ಕಾರ್ಡ್ ಮೂಲಕ ಹಣ ಪಾವತಿ ಮಾಡಬಹುದಾಗಿರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಮಾನ್ಯ ಸದಸ್ಯರು ಮತ್ತು ಗ್ರಾಹಕರು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.

ಮಾನ್ಯ ಸದಸ್ಯರು ವಾರ್ಷಿಕ ವರದಿ, ಆಡಿಟ್ ವರದಿ ಮತ್ತು ಅದರ ಅನುವರ್ತನಾ ವರದಿ, ತಿದ್ದುಪಡಿ ಬೈಲಾ ಹಾಗೂ ಕಾರ್ಯಸೂಚಿಯಲ್ಲಿರುವ ವಿಷಯಗಳನ್ನು ಸರ್ವಸದಸ್ಯರ ಸಭೆ ಪರಿಶೀಲಿಸಿ ಅವುಗಳಿಗೆ ಒಪ್ಪಿಗೆ ಕೊಟ್ಟು ಆಡಳಿತ ಮಂಡಳಿ ಇನ್ನೂ ಹೆಚ್ಚಿನ ಕೆಲಸ ಮಾಡಿ ಬ್ಯಾಂಕನ್ನು ಇನ್ನೂ ಉತ್ತಮ ಮಟ್ಟಕ್ಕೆ ತರಲು ಮಾನ್ಯ ಸದಸ್ಯರು ತಮ್ಮ ಅಮೂಲ್ಯ ಸಲಹೆ/ಸೂಚನೆಗಳನ್ನು ನೀಡಿ ಸಭೆಯ ಕಾರ್ಯಕಲಾಪಗಳನ್ನು ಶಾಂತಿಯುತವಾಗಿ ಹಾಗೂ ಸುಗಮವಾಗಿ ನಡೆಸಬೇಕೆಂದು ಮತ್ತು ತಮ್ಮ ಸಹಕಾರ ಹಾಗೂ ಬೆಂಬಲ ನೀಡಬೇಕೆಂದು ಕೋರಿದರು.

**ಕಾರ್ಯಸೂಚಿ ಕ್ರಮಸಂಖ್ಯೆ: 3ರಿಂದ 8ರವರೆಗಿನ ವಿಷಯಗಳ ಬಗ್ಗೆ ಚರ್ಚಿಸಬೇಕೆಂದು ಸಭಾಧ್ಯಕ್ಷರು ಮಾನ್ಯ ಸದಸ್ಯರಲ್ಲಿ ಕೋರಿದರು.**

ಸದಸ್ಯರಾದ ಪ್ರೊ: ನಂಜುಂಡೇಗೌಡರು ಮಾತನಾಡುತ್ತಾ,
45ನೇ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ 2018-19ರ ಪ್ರಕಾರ ರೂ.331 ಲಕ್ಷಗಳ ನಿವ್ವಳ ಲಾಭ ಗಳಿಸಿ ಸದಸ್ಯರಿಗೆ ಶೇ.14ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ವಾರ್ಷಿಕ ಮಹಾಸಭೆಗೆ ಶಿಫಾರಸ್ಸು ಮಾಡಿರುವುದು ಸಂತೋಷಕರವಾದ ವಿಷಯ.

ನಿವ್ವಳ ಎನ್. .ಎ (Net NPA) 31.03.2018ಕ್ಕೆ ಶೇ.0.22 ಇದ್ದದ್ದು, 31.03.2019ಕ್ಕೆ ಶೇ.1.94 ಏರಿರುವುದನ್ನು ಗಮನಿಸಿದರೆ ಬ್ಯಾಂಕಿನ ದಕ್ಷತೆ ಕುಗ್ಗಿದೆ.

ನಿರ್ದೇಶಕರ ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ತರಹದ ಸಾಲಗಳನ್ನು ನೀಡಿರುವುದಿಲ್ಲ. ಬ್ಯಾಂಕಿನ ಮುಖ್ಯವಾದ ಕೆಲಸ ಡಿಪಾಸಿಟ್ ತೆಗೆದುಕೊಂಡು ಸಾಲವನ್ನು ನೀಡಿ ವಸೂಲು ಮಾಡುವುದೇ ಆಗಿರುವುದರಿಂದ ಸಾಲಗಳನ್ನು ಆಡಳಿತ ಮಂಡಳಿಯ ಸದಸ್ಯರು ಮತ್ತು ಸಂಬಂಧಿಕರು ಪಡೆಯಬಾರದು ಅನ್ನುವುದು ತಪ್ಪು ಎಂದು ಅಭಿಪ್ರಾಯಪಟ್ಟರು.

ಒಳ್ಳೆಯ ಸಾಲಗಳನ್ನು ನೀಡಿ ಹಿಂತಿರುಗಿಸುವಂತಹ ಸದಸ್ಯರಿದ್ದಲ್ಲಿ ಮಾತ್ರ ಬ್ಯಾಂಕಿನ ಪ್ರಗತಿ ಸಾಧ್ಯ.

ಸುಸ್ತಿ ಸಾಲಗಳು ದಿನಾಂಕ 31.03.2018 ಕ್ಕೆ ರೂ.312.30 ಲಕ್ಷ ಇದ್ದದ್ದು, 31.03.2019ಕ್ಕೆ ರೂ.1028.00 ಲಕ್ಷಗಳಿಗೆ ಏರಿದ್ದು, ವರ್ಷದಿಂದ ವರ್ಷಕ್ಕೆ ಹೆಚ್ಚಾಗಿರುವುದು ಆರೋಗ್ಯಕರ ಬೆಳವಣಿಗೆ ಅಲ್ಲ. ಸುಸ್ತಿದಾರರ ಸಂಖ್ಯೆ Continue ಆಗುತ್ತಿದೆ. ಇದಕ್ಕೆ ಬ್ಯಾಂಕಿನ ಪದಾಧಿಕಾರಿಗಳು ಒಂದು ವಿವರಣಾತ್ಮಕವಾದ ಆಸಕ್ತಿ ವಹಿಸಬೇಕು ಎಂದು ಹೇಳಿದರು.

ಸಿಬ್ಬಂದಿ ತರಬೇತಿ ವೆಚ್ಚಕ್ಕಾಗಿ ಅನುಮೋದಿತ ಬಜೆಟ್ ರೂ.2,00,000/– ಇದ್ದು, ವಾಸ್ತವಿಕ ವೆಚ್ಚ ಕೇವಲ ರೂ.8,457/– ಹಾಗೂ ಸಹಕಾರ ಸಪ್ತಾಹಕ್ಕಾಗಿ ಅನುಮೋದಿತ ಬಜೆಟ್ ರೂ.5,00,000/– ಇದ್ದು, ಕಳೆದ ಸಾಲಿನಲ್ಲಿ ಏನೂ ಖರ್ಚು ಮಾಡಿಲ್ಲ. awareness create ಮಾಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳದಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು.

ಆದಾಯ ತೆರಿಗೆ ಇಲಾಖೆಯಿಂದ ವಾಪಸ್ಸಾದ ಮೊತ್ತ ರೂ.10,44,790/– ಇದಕ್ಕೆ Legal charges ಮಾಡಿದ್ದಾರೆ. Advance Tax ಅಂದಾಜಿಲ್ಲದೆ ಅಥವಾ ಗೊತ್ತಿಲ್ಲದೆ ಕಟ್ಟಿರುವುದರ ಬಗ್ಗೆ ಸಮಜಾಯಿಷಿ ಕೇಳಿದರು. ಇದರಿಂದ ಸಂಸ್ಥೆಗಾಗಲೀ ಅಥವಾ ಸರ್ವ ಸದಸ್ಯರಿಗೇ ಆಗಲೀ ಯಾವುದೇ ಲಾಭ ಇರುವುದಿಲ್ಲ ಎಂಬ ಅಂಶದ ಬಗ್ಗೆ ಗಮನಹರಿಸಲು ಕೋರಿದರು.

ಬ್ಯಾಂಕ್ ಮ್ಯಾನೇಜರ್ ಗೋಲ್ಡ್‌ಲೋನ್ ಮತ್ತು ಠೇವಣಿಗಳ ಮೇಲೆ ಸಾಲ ಕೊಡುವ ಪರಿಮಿತಿಯೊಳಗೆ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಸಾಲ ಮಂಜೂರಾತಿಗಾಗಿ ಉಪಸಮಿತಿ ಮುಂದೆ ಇಡುವುದಕ್ಕಿಂತ ಬ್ಯಾಂಕಿನ ಅಭಿವೃದ್ಧಿಗೆ ಬ್ಯಾಂಕ್ ಮ್ಯಾನೇಜರ್ ಸಕ್ರಿಯವಾಗಿ ಪಾಲ್ಗೊಳ್ಳಲು ಅಧಿಕಾರ ವಿಸ್ತರಣೆಯಾಗಬೇಕು.

ಎಂ.ಆರ್.ಲಕ್ಷ್ಮಮ್ಮ: ಸಾಲಗಾರರ ಆದಾಯದ ಆಧಾರಕ್ಕನುಸಾರವಾಗಿ ಸಾಲದ ಮಿತಿಯನ್ನು ರೂ.60 ಲಕ್ಷಗಳಿಗೆ ಸಾಲದ ಉಪಸಮಿತಿ ಸಭೆಯಲ್ಲಿ ಶಿಫಾರಸ್ಸು ಮಾಡಲಾಗಿದ್ದು, ಈ ಮಿತಿಯನ್ನು 1 ಕೋಟಿಗೆ ಆಸ್ತಿಯ ಮೌಲ್ಯಕ್ಕನುಸಾರವಾಗಿ ಹೆಚ್ಚುವರಿಯಾಗಿ ಆಡಳಿತ ಮಂಡಳಿಯಲ್ಲಿ ಮಂಜೂರು ಮಾಡಲಾಗಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಸಾಲವನ್ನು ಅವರ ಮರುಪಾವತಿ ಸಾಮರ್ಥ್ಯದ ಮೇಲೆಯೇ ಮಂಜೂರು ಮಾಡಬೇಕಾಗಿರುತ್ತದೆ ಎಂದು ಲೆಕ್ಕ ಪರಿಶೋಧಕರು ಹೇಳಿದ್ದಾರೆ.

ನಮ್ಮ ಬ್ಯಾಂಕಿಗೆ ಅರ್ಧಶತಮಾನವಾಗಿದೆ. ಬೆಂಗಳೂರಿನಲ್ಲಿ ನಮ್ಮದು ನಂಬರ್ 1 ಬ್ಯಾಂಕ್ ಆಗಬೇಕೆಂದರೆ – ಬೇರೆ ಬ್ಯಾಂಕುಗಳ ಪ್ರಗತಿ ತುಂಬಾ ಚೆನ್ನಾಗಿದೆ. ನಮ್ಮ reaction ಬಹಳ ರಿಜಿಡ್ [rigid] ಆಗಿದೆ. ಸಾಲದ ಅರ್ಜಿಯಲ್ಲಿ ಏನೇನು Follow ಮಾಡಬೇಕು ಏನು follow ಮಾಡಬಾರದು ಅನ್ನೋದರ ಬಗ್ಗೆ ಚೆನ್ನಾಗಿ ಗೊತ್ತಿರಬೇಕು. Discretion ಬೇಡ ಇದೊಂದು ಹಣಕಾಸು ಸಂಸ್ಥೆ. ಕಳೆದ ವಾರ್ಷಿಕ ಮಹಾಸಭೆಯಲ್ಲಿ ಸಾಲಗಳನ್ನು ಮನ್ನಾ ಮಾಡಿದ್ದೇವೆ. ಸುಸ್ತಿ ಜಾಸ್ತಿ ಆಗುತ್ತಾ ಇದೆ. ರೂ.60 ಲಕ್ಷಗಳಿಗೆ recommend ಮಾಡಿ 1 ಕೋಟಿ ಕೊಡತಕ್ಕಂತಹುದು ಆರೋಗ್ಯಕರವಲ್ಲ. ಮತ್ತು ಇನ್ನೂ 2–3 item observe ಮಾಡಿದ್ರೆ ಬ್ಯಾಂಕಿನವರು ಸಾಲ ಕೊಟ್ಟಿರುವುದು ಸರಿಯಲ್ಲ ಎಂದು ಲೆಕ್ಕಪರಿಶೋಧಕರು ಹೇಳಿದ್ದಾರೆ. ಆದ್ದರಿಂದ ಇಂತಹ ಪ್ರಾಕ್ಟೀಸ್ ಖಂಡಿತ ಮುಂದುವರಿಯುವುದಕ್ಕೆ ಅವಕಾಶ ಕೊಡಬೇಡಿ, ಇದು ಸರಿಯಾದ ಕ್ರಮವಲ್ಲ, ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು.

ಕೇಂದ್ರ ಕಛೇರಿ, ಜಯನಗರ, ಬಿ.ಇ.ಎಸ್ ಕಾಲೇಜು ಮತ್ತು ಬೇಗೂರು ಶಾಖೆ ನಿವ್ವಳ ಲಾಭ ಋಣಾತ್ಮಕ (–) ಇರುವುದರ ಬಗ್ಗೆ ಪ್ರಸ್ತಾ ಸುತ್ತಾ ನಷ್ಟದ ಶಾಖೆಗಳನ್ನು ಲಾಭದಾಯಕದ ಕಡೆ

ತರಲು ಕ್ರಮ ಕೈಗೊಳ್ಳಬೇಕು ಹಾಗೂ ಮತ್ತೀಕೆರೆ ಶಾಖೆಯು ಅತಿ ಹೆಚ್ಚು ನಿವ್ವಳ ಲಾಭ ಗಳಿಸಿದ್ದು, ಸಿಬ್ಬಂದಿ/ಅಧಿಕಾರಿಗಳನ್ನು ಅಭಿನಂದಿಸಬೇಕು ಹಾಗೂ ಇನ್ಸೆಂಟಿವ್/ಇಂಕ್ರಿಮೆಂಟ್ ಕೊಡುವ ಮೂಲಕ ಉತ್ತೇಜಿಸಬೇಕೆಂದರು.

**ಸಭಾಧ್ಯಕ್ಷರಾದ ಡಾ:ಎಂ.ಸಿ.ಜಗತ್‌ರವರು ಪ್ರೊಫೆಸರ್ ನಂಜುಂಡೇಗೌಡರವರು ಪ್ರಸ್ತಾ ಸಿದ ವಿಷಯ ಹೊರತುಪಡಿಸಿ ಬೇರೆ ಅಂಶಗಳಿದ್ದಲ್ಲಿ ಸಂಕ್ಷಿಪ್ತವಾಗಿ ಮಾತನಾಡಲು ಸದಸ್ಯರಲ್ಲಿ ಕೋರಿದರು.**

ಸದಸ್ಯರಾದ ಶ್ರೀ. ನಂಜುಂಡಪ್ಪನವರು ಮಾತನಾಡುತ್ತಾ:
ದಿನಾಂಕ: 21,08,1974 ರಂದು ಸಹಕಾರ ರತ್ನ ಶ್ರೀ.ಬಿ.ಎಲ್.ಲಕ್ಕೇಗೌಡರು ಸ್ಥಾಪನೆ ಮಾಡಿದ ಸಂಸ್ಥೆಯಿದು. ಸುಮಾರು 45 ವರ್ಷಗಳಾಗಿದ್ದು, 44 ವರ್ಷ ಪ್ರಗತಿಯಲ್ಲಿದೆ. ಆದರೆ 1 ವರ್ಷದಿಂದ ಪ್ರಗತಿ ಕಡಿಮೆಯಾಗಿದೆ.

ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ಕಲ್ಪಿಸಲಾದ ಅವಕಾಶಗಳ ಅಡಿಯಲ್ಲಿ: ದಿನಾಂಕ: 23.09.2018 ರಂದು ನಡೆದ ವಾರ್ಷಿಕ ಮಹಾ ಸಭೆಯ ನಿರ್ಣಯದಂತೆ 61 ಖಾತೆದಾರರಲ್ಲಿ 60 ಖಾತೆದಾರರಿಗೆ ಒಟ್ಟು.ರೂ.21,99,864/– ಗಳನ್ನು ಮನ್ನಾ ಮಾಡಲಾಗಿದೆ. ಇನ್ನು 1 ಖಾತೆ ವಿಜಯನಗರ ಶಾಖೆಯಲ್ಲಿನ ವಂಚನೆ ಪ್ರಕರಣದ ಬಗ್ಗೆ ವಿವರಿಸುತ್ತಾ ಈ ಬಗ್ಗೆ ಗಮನಹರಿಸಲು ಮಾನ್ಯ ಶ್ರೀ ಬಿ.ಎಲ್.ಲಕ್ಕೇಗೌಡರ ಪುತ್ರಿ ಶ್ರೀಮತಿ. ಬಿ.ಎಲ್.ನಂದಿನಿ ಮತ್ತು ನಿರ್ದೇಶಕರು ಗಮನಹರಿಸಬೇಕೆಂದರು.

ವಿವಿಧ ಬ್ಯಾಂಕುಗಳಲ್ಲಿನ ಸುಸ್ತಿದಾರರ ಬಗ್ಗೆ ವಿವರಿಸಿ, ಜವಾಬ್ದಾರಿಯುತವಾಗಿ ಪೂರ್ಣ ದಾಖಲೆ ಪರಿಶೀಲಿಸುವುದು ಕಡ್ಡಾಯವಾಗಿದೆ. ಹಾಗೂ ಇಂತಹ ಸಾಲಗಳಿಗೆ ಶಿಫಾರಸ್ಸು ಮಾಡಿದ ನಿರ್ದೇಶಕರು/ವ್ಯವಸ್ಥಾಪಕರು ಹೊಣೆಗಾರರಾಗಬೇಕಾಗಿದೆ.

ಬೇಗೂರು ಶಾಖೆ ಸ್ಥಾ ಸಿರುವ ಸ್ಥಳದ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದರು.

ಕಾನೂನು ಸಲಹೆಗಾರರ ವರದಿಯಲ್ಲಿ ಸ್ಥಿರಾಸ್ತಿಯ ಮೇಲೆ ಸರಿಯಾದ ಮಾಲೀಕತ್ವ ಮತ್ತು ಮಾರುಕಟ್ಟೆ ಹಕ್ಕನ್ನು ಹೊಂದಿರುವುದಿಲ್ಲವೆಂದು ತಿಳಿಸಿದ್ದಾಗ್ಯೂ ಸಾಲಗಳನ್ನು ನೀಡುವುದು ಹಾಗೆಯೇ ಸಾಲ ನೀತಿಗಳ ಷರತ್ತು ನಿಬಂಧನೆಗಳಿಗೆ ವಿರುದ್ಧವಾಗಿ ಆಡಳಿತ ಮಂಡಳಿಯಲ್ಲಿ ನಿರ್ಧಾರ ತೆಗೆದುಕೊಂಡು ಸಾಲಗಳನ್ನು ಮಂಜೂರು ಮಾಡುವುದು ಸರಿಯಾದ ಕ್ರಮವಲ್ಲವೆಂದು, ಈ ಬಗ್ಗೆ ಅಧ್ಯಕ್ಷರು ಕ್ರಮವಿಡಲಾಗುವುದು ಎಂದು ತಿಳಿಸಿದ್ದು, ಮಾನ್ಯ ಸದಸ್ಯರು ವಿರೋಧ ವ್ಯಕ್ತಪಡಿಸುವುದು/ನ್ಯೂನತೆ ತೋರಿಸುವುದು ಆರೋಗ್ಯಕರವೆಂದು ತಿಳಿಸಿದರು.

ಸದಸ್ಯರಾದ ಶ್ರೀ. ಕಾಂತರಾಜು (ಸದಸ್ಯತ್ವ ಸಂ.1857) ರವರು ಮಾತನಾಡುತ್ತಾ:

ದೇಶದ ಆರ್ಥಿಕ ಪರಿಸ್ಥಿತಿ ನಷ್ಟದಲ್ಲಿದೆ. ಆಡಳಿತ ವ್ಯವಸ್ಥೆ ಕಷ್ಟಕರವೆಂದು, ನ್ಯೂನತೆಗಳಿರುವ ಬಗ್ಗೆ ಒ ್ಪ ಗೆ ಸೂಚಿಸುತ್ತಾ ಸಾಲ ಕೊಡುವುದಕ್ಕೆ ಮೊದಲು ಪ್ರಾಮಾಣಿಕವಾಗಿ ಪರಿಶಿಲನೆ ಮಾಡಬೇಕು.
ಹೆಚ್ಚಿನ ಮೊತ್ತದ ಸಾಲವನ್ನು [ಕೇಂದ್ರೀಕರಿಸಿ] ಒಬ್ಬರಿಗೇ ಕೊಡುವುದಕ್ಕಿಂತ ಅದನ್ನೇ ಹೆಚ್ಚು ಜನರಿಗೆ ಕೊಡುವುದು ನ್ಯಾಯ ಸಮ್ಮತವೆಂದರು.

ಸಿಬ್ಬಂದಿಯವರಿಗೆ ಇನ್ನೂ ಹೆಚ್ಚಿನ ತರಬೇತಿ ಕೊಟ್ಟು ಜ್ಞಾನ ಬೆಳೆಸಿಕೊಳ್ಳಬೇಕು.

ಸಭೆಗಳಿಗೆ ಹಾಜರಾಗದಿರುವ ಬಗ್ಗೆ ಪ್ರಸ್ತಾ ಸುತ್ತಾ Conveyance allowance ನೀಡಿದಲ್ಲಿ ಕಡ್ಡಾಯವಾಗಿ ಹಾಜರಾಗಬಹುದೆಂದು ಇದರಿಂದ ಮತ ಚಲಾಯಿಸಲು ಹೆಚ್ಚು ಸದಸ್ಯರು ಅರ್ಹರಾಗುತ್ತಾರೆಂದು ಹೇಳಿದರು.

ಸದಸ್ಯರಾದ ಶ್ರೀ ವೀರಾಜುರವರು (ಸದಸ್ಯತ್ವ ಸಂ.49184) ಮಾತನಾಡುತ್ತಾ:

ಕಾರ್ಯದರ್ಶಿಯವರು ದೈವಾಧೀನರಾದಂತಹ ಸದಸ್ಯರ ಸಂತಾಪ ಸೂಚನೆಗೆ ಸಲಹೆ ಕೊಟ್ಟಿರುವುದು ಒಳ್ಳೆಯದೆ. ಆದರೆ ಅವರ ಹೆಸರುಗಳನ್ನು ಹೇಳಿಲ್ಲ, ಇದು ದು:ಖದ ವಿಷಯ. ದೈವಾಧೀನರಾದ ಸದಸ್ಯರ ಹೆಸರು ಮತ್ತು ಸದಸ್ಯತ್ವದ ಸಂಖ್ಯೆಯನ್ನು ಓದಬೇಕೆಂದರು.
ಮನೆ ಕಟ್ಟುವವರಿಗೆ ರೂ 70 ಲಕ್ಷದವರೆಗೆ ಸಾಲ ನೀಡುತ್ತಿದ್ದು, ಬಡ್ಡಿದರ ಶೇ. 10.5 ರಷ್ಟು ಇದ್ದು, ಬಡ್ಡಿ ದರವನ್ನು ಕಡಿಮೆ ಮಾಡಬೇಕು.

45 ವರ್ಷಗಳ ಸಾಧನೆಯಲ್ಲಿ ನಷ್ಟ ತೋರಿಸಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿದರು ಮತ್ತು ಆದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಸಾಲ ನೀಡಲು ಆದ್ಯತೆ ಕೊಡಿ, ಸಾರ್ವಜನಿಕರ/ ಇತರೆ ಖಾತೆದಾರರ ಹಣದಿಂದ – ಸಾಲ ಮನ್ನಾ ಮಾಡುವ ಬಗ್ಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿ ಸಾಲ ಕೊಡುವಾಗ ದಾಖಲೆ ಪರಿಶೀಲಿಸುವಂತೆ ಮನವಿ ಮಾಡಿದರು.

ಸದಸ್ಯರಾದ ಶ್ರೀ ಬಿ.ಎನ್. ನಾರಾಯಣಸ್ವಾಮಿ (ಸದಸ್ಯತ್ವ ಸಂ.11186) ರವರು ಮಾತನಾಡುತ್ತಾ:

2017–18 ರಲ್ಲಿ ನಿವ್ವಳ ಲಾಭ ರೂ.1,71,72,126.48, 2018–19ರಲ್ಲಿ ರೂ.3,30,82,424.23 ಕಳೆದ ವರ್ಷದ ಲಾಭದ 2 ಪಟ್ಟು ಹೆಚ್ಚಾಗಿದೆ. ಪ್ರಗತಿಗೆ ಕಾರಣರಾದ ಆಡಳಿತ ಮಂಡಳಿಯವರಿಗೆ, ಸಿಬ್ಬಂದಿಯವರಿಗೆ ಠೇವಣಿ ಇಟ್ಟ ಸದಸ್ಯರಿಗೆ ಹಾಗೂ ವಿವಿಧ ಸಾಲಗಳನ್ನು ಪಡದು ಸುಸ್ತಿಯಿಲ್ಲದೆ ಸಾಲ ಮರುಪಾವತಿ ಮಾಡುತ್ತಾ ಬಂದಿರುವ ಸದಸ್ಯರನ್ನು ಅಭಿನಂದಿಸಿದರು. ಬ್ಯಾಂಕಿನ ವಿವಿಧ ಸಾಲಗಳ ಬಡ್ಡಿ ದರಗಳು ಶೇ.10ರಿಂದ 13.5 ರವರೆಗೂ ಇದೆ. ಸಾಮಾನ್ಯ ಜನರು, ಹಿರಿಯ ನಾಗರೀಕರು, ತಮ್ಮ ಜೀವನದ ನಿರ್ವಹಣೆಗೆ ತಮ್ಮ ಉಳಿತಾಯದ ಹಣವನ್ನು ಇಲ್ಲಿನ ಠೇವಣಿಯಲ್ಲಿ ಇಡುತ್ತಾರೆ. 2 ವರ್ಷದ ಮೇಲೆ ಮತ್ತು 3 ವರ್ಷದ ಒಳಗೆ ಠೇವಣಿ ಇಟ್ಟಿರುವವರಿಗೆ ಶೇ.8.5 ಬಡ್ಡಿ ಮತ್ತು ಹಿರಿಯ ನಾಗರೀಕರಿಗೆ ಶೇ.9 ಬಡ್ಡಿ ಕೊಡುತ್ತಾರೆ. ಈ ಬಗ್ಗೆ ಆಡಳಿತ ಮಂಡಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಬ್ಯಾಂಕಿನ ಸ್ವಂತ ನಿಧಿಗಳು ಬ್ಯಾಂಕಿನ ಬೆಳವಣಿಗೆಗೆ ಪೂರಕವಾಗಿರುತ್ತದೆ. ಬ್ಯಾಂಕಿನ ವಿವಿಧ ನಿಧಿಗಳ ಮೊತ್ತ ರೂ.30 ಕೋಟಿಗೂ ಹೆಚ್ಚಿದೆ. ಇಂದಿನ ಷೇರು ಬಂಡವಾಳದ ಮೊತ್ತ ರೂ.11 ಕೋಟಿಗೂ ಹೆಚ್ಚಿದೆ. ಆದರೆ ಈ ಸಾಲಿನಲ್ಲಿ ಲಾಭ ಬಂದರೂ ದತ್ತಿಗೆ ಹಣ ಹಂಚಿಕೆಯಾಗಿಲ್ಲ. 13394 ಸದಸ್ಯರು ರೂ. 250/– ರ ಷೇರು ಹಾಗೂ 28476 ಸದಸ್ಯರು ರೂ.500/– ರ ಷೇರುಗಳನ್ನು ಹೊಂದಿದ್ದು, ಈ ಸಭೆ ಸರ್ವ ಸದಸ್ಯರ ಸಮ್ಮುಖದಲ್ಲಿ ಶೇ. 14 ಡಿವಿಡೆಂಡ್ ಹಂಚಲಾಗಿದೆ. ಈ ವರ್ಷದ ಲಾಭಾಂಶವನ್ನು ಸರ್ವಸದಸ್ಯರ ಸಭೆ ಸಂಸ್ಥಾಪಕರ ದತ್ತಿನಿಧಿಗೆ ಬಿಟ್ಟುಕೊಟ್ಟು ಅದನ್ನು ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಉಪಯೋಗಿಸಬಹುದೆಂದು ತಿಳಿಸಿದರು.
ಸಹಕಾರ ಬ್ಯಾಂಕುಗಳ ಒಕ್ಕೂಟಗಳ ಮೂಲಕ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ ಆದಾಯ ತೆರಿಗೆ ಬರದಂತೆ ಕ್ರಮವಿಡುವ ಬಗ್ಗೆ ಆಡಳಿತ ಮಂಡಳಿಗೆ ಮನವಿ ಮಾಡಿದರು.

ಸದಸ್ಯರಾದ ಶ್ರೀ ರವೀಂದ (ಸದಸ್ಯತ್ವ ಸಂ.9080) ರವರು ಮಾತನಾಡುತ್ತಾ:

ಲೀಗಲ್ ಅಡ್ವೈಸರ್ [ಕಾನೂನು ಸಲಹೆಗಾರ]ರ ಕೊರತೆ ಇದೆ. ದಾಖಲೆ ಪರಿಶೀಲನೆ ಮತ್ತು 2ನೇ ಅಭಿಪ್ರಾಯ ಪಡೆದು ಸಾಲ ಮಂಜೂರು ಮಾಡಿದಲ್ಲಿ Defaulter ಹೇಗೆ ಸಾಧ್ಯ. ಇ.ಸಿ.ಗಳನ್ನು ನೋಂದಣಿ ಕಛೇರಿಯಿಂದ ತರಿಸಿಕೊಳ್ಳಬೇಕು. ಎಲ್ಲಿ ವ್ಯತ್ಯಾಸವಾಗಿದೆ ಎಂಬ ಬಗ್ಗೆ Rectify ಮಾಡಿ, ಸಾಲ ಮನ್ನಾ ಪದ್ಧತಿಯನ್ನು ಇಂದೇ ಅಂತ್ಯಗೊಳಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ವೈಯಕ್ತಿಕ ಲಾಭಕ್ಕಾಗಿ ಅಲ್ಲವೆಂದು ಸಂಸ್ಥೆಯ ಉಳಿವಿಗಾಗಿ ಮಾತನಾಡಿದ್ದಾಗಿ ತಿಳಿಸಿದರು.

**ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತಾ:**

ಎಲ್ಲಾ ಹಂತಗಳಲ್ಲೂ ಕೂಲಂಕುಷವಾಗಿ ಪರಿಶೀಲನೆ ಮಾಡಿಯೇ ಸಾಲ ಮಂಜೂರು ಮಾಡಿರುವುದಾಗಿ, ಆದಾಗ್ಯೂ ವಂಚನೆ ಪ್ರಕರಣ ಇರುವುದನ್ನು ಪ್ರಸ್ತಾ ಸುತ್ತಾ – ನಾವು ಇ.ಸಿ ಯನ್ನು ಪರಿಶೀಲಿಸಿಯೇ ತೆಗೆದುಕೊಳ್ಳುವುದು. ಆದರೆ ಕಲರ್ ಜೆರಾಕ್ಸ್ ಬಂದು ಬಹಳ ಕಷ್ಟವಾಗಿದೆ. ಸಾಲದ ಸಮಿತಿಯಲ್ಲಿರುವ ಇಬ್ಬರು ವಕೀಲರು ಪರೀಕ್ಷಿಸುತ್ತಾರೆ. ಕಾನೂನು ಸಲಹೆಗಾರರಿಂದ ಸಲಹೆಯನ್ನು ತೆಗೆದುಕೊಳ್ಳುತ್ತೇವೆ. ಕೆಲವು ಸಲ 2ನೇ ಕಾನೂನು ಸಲಹೆಯನ್ನೂ ತೆಗೆದುಕೊಳ್ಳುತ್ತೇವೆ. ಹೆಚ್ಚುವರಿ ಆದಾಯ ತೋರಿಸಿದಾಗ ಮಾತ್ರ ಹೆಚ್ಚುವರಿ ಸಾಲವನ್ನು ಮಂಜೂರು ಮಾಡಿರುತ್ತೇವೆ.

ಸಾಲಗಾರರೂ ಮತ್ತು ಜಾಮೀನುದಾರರೂ ನಿಧನ ಹೊಂದಿದ್ದು, ಇವರ ಮಕ್ಕಳು/ವಾರಸುದಾರರು ಯಾರೂ ಇಲ್ಲದ ಪ್ರಕರಣಗಳಲ್ಲಿ 1996–98, 2000 ರಲ್ಲಿ ಕೈ ಸಾಲವನ್ನು [Hand Loan]ಮಾತ್ರ ಮನ್ನಾ ಮಾಡಿದೆ. ಇನ್ನು ಮುಂದೆ ಸಾಲ ಮನ್ನಾ ಮಾಡುವುದಿಲ್ಲವೆಂದು ತಿಳಿಸಿದರು.

ಖಃಖ ಖಣಟಞ ಪ್ರಕಾರ ನಿರ್ದೇಶಕರು ಮತ್ತು ಅವರ ಸಂಬಂದಿಗಳು ಠೇವಣಿ ಮಾತ್ರ ಇಡಬಹುದಾಗಿದ್ದು, ಸಾಲ ತೆಗೆದುಕೊಳ್ಳುವಂತಿಲ್ಲ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ವತಿಯಿಂದ ಸಿಬ್ಬಂದಿಯವರಿಗೆ ಉಚಿತ ತರಬೇತಿ ನೀಡುವ ವ್ಯವಸ್ಥೆ ಇರುವುದರಿಂದ ತರಬೇತಿ ವೆಚ್ಚ ಕಡಿಮೆಯಾಗಿರುತ್ತದೆ.

ಮತ್ತೀಕೆರೆ ಶಾಖೆಯ ವ್ಯವಸ್ಥಾಪಕರಿಗೆ ಮತ್ತು ಸಿಬ್ಬಂದಿಗಳಿಗೆ ಇನ್‌ಕ್ರಿಮೆಂಟ್/ಇನ್‌ಸೆಂಟಿವ್ ನೀಡುವ ಬಗ್ಗೆ ಆಡಳಿತ ಮಂಡಳಿ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು.

ಜಯನಗರ ಶಾಖೆಯು ಪ್ರಧಾನ ಕಛೇರಿಯಾಗಿದ್ದು, ಎಲ್ಲಾ ವೆಚ್ಚಗಳು ಇಲ್ಲೇ ಬೀಳುವುದರಿಂದ ನಿವ್ವಳ ಲಾಭ ಋಣಾತ್ಮಕ (–) ಆಗಿದೆ. ಇನ್ನು ಮುಂದೆ ಆಯಾ ಶಾಖೆಗಳೇ ಖರ್ಚುಗಳನ್ನು ಭರಿಸಲು ಕ್ರಮಕೈಗೊಳ್ಳಲಾಗುವುದು.

ಬಿ.ಇ.ಎಸ್ ಶಾಖೆಯು ನಷ್ಟದಲ್ಲಿದೆ. ಬೇಗೂರು ಶಾಖೆಗೆ ಸ್ಥಳದ ಅಭಾವದಿಂದ ಅಲ್ಲಿಯೇ ಸ್ಥಾ ಸಲಾಗಿದ್ದು, ಶಾಖೆಯನ್ನು ಹೊಸದಾಗಿ ಪ್ರಾರಂಭಿಸಿರುವುದರಿಂದ ಮಾರ್ಚ್‌ವರೆಗೂ ಕಾದು ನೋಡಬೇಕು.

ಮನೆ ಸಾಲದ [Housing Loan] ಮೇಲಿನ ಬಡ್ಡಿ ದರದ ಬಗ್ಗೆ – ರಾಷ್ಟ್ರೀಕೃತ ಬ್ಯಾಂಕುಗಳ ಜೊತೆ ಸ್ಪರ್ಧಿಸಲು ಆಗುವುದಿಲ್ಲ. ಆದರೆ ಇತರೆ Co -Operative ಬ್ಯಾಂಕುಗಳಂತೆ ನಿಗದಿಪಡಿಸಲಾಗಿದೆ. ನಾವು Reducing Balance ಕೊಡುತ್ತೇವೆ. ಬೇರೆ ಬ್ಯಾಂಕುಗಳು ಇ.ಎಂ.ಐ ಕೊಡುತ್ತಾರೆ. ಅಂತಿಮವಾಗಿ ಮನೆ ಸಾಲದ ಮೇಲಿನ ಬಡ್ಡಿ ಮೊತ್ತ ನಮ್ಮದೇ ಕಡಿಮೆಯಾಗುತ್ತದೆ. ಠೇವಣಿಗಳಿಗೆ ಬಡ್ಡಿ ಹೆಚ್ಚು ಕೊಡಲಾಗುತ್ತಿದೆ.

ಶ್ರೀ ಬಿ.ಎಲ್. ಲಕ್ಕೇಗೌಡರ ಹೆಸರಿನಲ್ಲಿ ದತ್ತಿ ಸ್ಥಾಪನೆ ಮಾಡುವ ಬಗ್ಗೆ ಬೈಲಾ ತಿದ್ದುಪಡಿ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ವಿಷಯ : 3. 2018–2019ನೇ ಸಾಲಿನ ವಾರ್ಷಿಕ ವರದಿ ಪರಿಶೀಲನೆ ಮತ್ತು ಅನುಮೋದನೆ**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2018–19ನೇ ಸಾಲಿನ ವರದಿಯನ್ನು ಮಂಡಿಸಿದರು ಸದಸ್ಯರಾದ ಶ್ರೀ ಲಿಂಗಪ್ಪರವರು ಸೂಚಿಸಿದರು. ಶ್ರೀ ನಾರಾಯಣಸ್ವಾಮಿರವರು ಅನುಮೋದಿಸಿದರು. ನಂತರ ಸಭೆಯು 2018–19ನೇ ಸಾಲಿನ ವಾರ್ಷಿಕ ವರದಿಗೆ ಅನುಮೋದನೆ ನೀಡಿತು.

**ವಿಷಯ 4: 2018-19ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಹಾಗೂ ಅಂಗೀಕಾರ.**

ಸಭಾಧ್ಯಕ್ಷರಾದ ಡಾ: ಎಂ. ಸಿ. ಜಗತ್‌ರವರು 2018–19ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಿದರು ಸದಸ್ಯರಾದ ಶ್ರೀ ಮನೋಜಿರಾವ್ ಸೂಚಿಸಿದರು. ಶ್ರೀ ರುದ್ರೇಶ್‌ರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2018–19ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಬ್ಯಾಂಕಿನ ಲೆಕ್ಕಪತ್ರಗಳಿಗೆ ಅಂಗೀಕಾರ ನೀಡಿತು.

**ವಿಷಯ 5: 2018-19ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2018-19ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದರು. ಸದಸ್ಯರಾದ ಶ್ರೀ ನಾರಾಯಣಪ್ಪನವರು ಸೂಚಿಸಿದರು. ಶ್ರೀ ಪುಟ್ಟೇಗೌಡರು ಅನುಮೋದಿಸಿದರು. ನಂತರ ಸಭೆಯು ಸರ್ವಾನುಮತದಿಂದ 2018-19ನೇ ಸಾಲಿನ ಬ್ಯಾಂಕಿನ ನಿವ್ವಳ ಲಾಭದ ಹಂಚಿಕೆಗೆ ಅನುಮೋಧನೆ ನೀಡಿತು.

| ಕ್ರ.ಸಂ. | ಬಾಬ್ತುಗಳು | | ಲಾಭದ ಹಂಚಿಕೆ |
|---|---|---|---|
| 1 | ಕಾಯ್ದಿಟ್ಟ ನಿಧಿ | ಶೇ. 25 | 82,70,606.00 |
| 2 | ಸಹಕಾರಿ ಶಿಕ್ಷಣ ನಿಧಿ | ಶೇ. 2 | 4,96,236.00 |
| 3 | ಸಹಕಾರ ಶಿಕ್ಷಣ ನಿಧಿ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ | ಶೇ. 1 | 2,48,118.00 |
| 4 | ಕಟ್ಟಡ ನಿಧಿ | ಶೇ. 15 | 36,10,120.00 |
| 5 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | ಶೇ. 5 | 12,03,373..00 |
| 6 | ಹೂಡಿಕೆಗಳ ಏರಿಳಿತ ನಿಧಿ | ಶೇ. 5 | 12,03,373.00 |
| 7 | ಸದಸ್ಯರ ಮರಣೋತ್ತರ ನಿಧಿ | ಶೇ. 5 | 12,03,373.00 |
| 8 | ಮಹೋತ್ಸವ ನಿಧಿ | ಶೇ. 10 | 24,06,746.00 |
| 9 | ಕರಡು ಮತ್ತು ಅನುಮಾನಾಸ್ಪದ ಸಾಲದ ನಿಧಿ | ಶೇ. 4 | 9,62,699.00 |
| 10 | ಲಾಭಾಂಶ / ಡಿವಿಡೆಂಡ್ | ಶೇ. 14 | 1,33,39,220.00 |
| 11 | ಉಳಿಕೆ ಮೊತ್ತ ಕಾಯ್ದಿಟ್ಟ ನಿಧಿಗೆ | | 1,38,560.23 |
| | ಒಟ್ಟು | | **3,30,82,424.23** |

**ವಿಷಯ 6: 2018-19ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು.**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚಿನ ವಿವರಗಳನ್ನು ವರದಿಯ ಪುಟ ಸಂ.39 ರಲ್ಲಿ ನೀಡಲಾಗಿದ್ದು. ಅದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ಹೆಚ್. ಎಸ್. ರಾಘವ್‌ರವರು ಅಂಗೀಕರಿಸಬಹುದೆಂದು ಸೂಚಿಸಿದರು. ಶ್ರೀ ವೆಂಕಟೇಶ್‌ರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2018-19ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚುವರಿ ಆಗಿರುವ ಖರ್ಚಿಗೆ ಒಪ್ಪಗೆ ನೀಡಿತು.

**ವಿಷಯ 7: 2020-21ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಮಂಜೂರು ಮಾಡುವುದು**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು 2020-21ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯದ ವಿವರಗಳನ್ನು ಸಭೆಗೆ ಮಂಡಿಸಿ ಮಾತನಾಡುತ್ತಾ, ಆಯವ್ಯಯದ ವಿವರಗಳನ್ನು ಪುಟ ಸಂ.37-38 ರಲ್ಲಿ ನೀಡಲಾಗಿದ್ದು ಅದಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸದಸ್ಯರಾದ ಶ್ರೀ ವೆಂಕಟರಂಗಯ್ಯರವರು 2020-21ನೇ ಸಾಲಿನ ವಾರ್ಷಿಕ ಅಂದಾಜು ಆಯ–ವ್ಯಯವನ್ನು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ರೇವಣ್ಣರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು 2020-21ನೇ ಸಾಲಿನ ಅಂದಾಜು ಆಯವ್ಯಯವನ್ನು ಅಂಗೀಕರಿಸಿತು.

**ವಿಷಯ 8: 2019-20ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ ಮಾತನಾಡುತ್ತಾ 2019-20ನೇ ಸಾಲಿನ ಲೆಕ್ಕಪರಿಶೋಧಕರ ಆಯ್ಕೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಲ್ಲಿ ನೋಂದಾಯಿಸಿರುವ ಮೆಸರ್ಸ್ ಪ್ರಕಾಶ್ ಎಸ್.ಡಿ.ಅಂಡ್ ಕಂಪನಿ ಚಾರ್ಟರ್ಡ್ ಅಕೌಂಟೆಂಟ್‌ರವರ ಚಾಮರಾಜಪೇಟೆ, ಬೆಂಗಳೂರು ಮತ್ತು ಮೆಸರ್ಸ್ ಪಂಪಣ್ಣ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಮತ್ತಿಕೆರೆ, ಬೆಂಗಳೂರು ಇವರುಗಳು ಲೆಕ್ಕಪರಿಶೋದನೆ ಮಾಡಲು ಪತ್ರ ನೀಡಿದ್ದು, ಇವರಲ್ಲಿ ಒಬ್ಬರನ್ನು ನೇಮಕ ಮಾಡಲು ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡಲು ಅನುಮೋದನೆ ಕೋರಿದರು.

ಸದಸ್ಯರಾದ ಶ್ರೀ ಸುರೇಶ್‌ರವರು 2019-20ನೇ ಸಾಲಿನ ಲೆಕ್ಕಪರಿಶೋಧನೆಗೆ ಮೆಸರ್ಸ್ ಪಂಪಣ್ಣ ಅಂಡ್ ಕೊ ಇವರ ನೇಮಕ ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ರವೀಂದ್ರ್ರರವರು ಅನುಮೋದಿಸಿದರು. ನಂತರ ಸಭೆಯು 2019-20ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮಾಡಲು ಮೆಸರ್ಸ್ ಪಂಪಣ್ಣ ಅಂಡ್ ಕೊ ರವರನ್ನು ಆಯ್ಕೆ ಮಾಡಿರುವುದಕ್ಕೆ ಹಾಗೂ ಲೆಕ್ಕಪರಿಶೋಧಕರಿಗೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ನಿಗದಿಪಡಿಸಿರುವ ಸಂಭಾವನೆ ನೀಡಲು ಸರ್ವಸದಸ್ಯರ ಸಭೆಯು ಒಪ್ಪಿಗೆ ನೀಡಿತು.

**ವಿಷಯ 9: ಕರ್ನಾಟಕ ಸಹಕಾರ ಕಾಯಿದೆ, ನಿಯಮಗಳ ಅನುಸಾರವಾಗಿ ತಿದ್ದುಪಡಿಯಾಗಿರುವ ಪ್ರಕಾರ ಬ್ಯಾಂಕಿನ ಬೈಲಾತಿದ್ದುಪಡಿಯನ್ನು ಅನುಮೋದಿಸುವುದು.**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಕಾಯಿದೆ ಮತ್ತು ನಿಯಮಗಳಿಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದು ಬ್ಯಾಂಕು ಕಡ್ಡಾಯವಾಗಿ ಇದನ್ನು ಬ್ಯಾಂಕಿನ ಬೈಲಾದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಈ ಕಾರಣದಿಂದಾಗಿ

ಬ್ಯಾಂಕಿನ ಬೈಲಾಗಳಿಗೆ ತಿದ್ದುಪಡಿಗಳನ್ನು ವರದಿಯ ಪುಟ ಸಂ 42ರಲ್ಲಿ ವಿವರಿಸಿದ್ದು, ಮಾನ್ಯ ಸದಸ್ಯರುಗಳು ಇದನ್ನು ಅಂಗೀಕರಿಸಬೇಕೆಂದರು. ಸದಸ್ಯರಾದ ಶ್ರೀ ಗೋವಿಂದ ರೆಡ್ಡಿ ರವರು ಬೈಲಾ ತಿದ್ದುಪಡಿಯನ್ನು ಅಂಗೀಕರಿಸಬಹುದೆಂದು ಸೂಚಿಸಿದರು. ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ಮತ್ತು ಶ್ರೀ ರವೀಂದ್ರರವರು ಅನುಮೋದಿಸಿದರು. ನಂತರ ಸರ್ವಸದಸ್ಯರ ಸಭೆಯು ಬೈಲಾ ತಿದ್ದುಪಡಿಗಳಿಗೆ ಅಂಗೀಕಾರ ನೀಡಿತು.

**ವಿಷಯ 10 : 2019-20ನೇ ಸಾಲಿನ ಕಾರ್ಯಕ್ರಮಗಳ ಪರಿಗಣನೆ**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್ ರವರು ಮಾತನಾಡುತ್ತಾ ಬ್ಯಾಂಕು 2019-20ನೇ ಸಾಲಿನಲ್ಲಿ ಬ್ಯಾಂಕಿನ ಪ್ರಗತಿಗಾಗಿ ಹಾಗೂ ಸದಸ್ಯರುಗಳ ಸಲಹೆ/ಸೂಚನೆಗೆ ಸಂಬಂಧಿಸಿದಂತೆ ಕೈಗೊಂಡ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಕಾರ್ಯಯೋಜನೆಗಳನ್ನು ರೂ ಸಲಾಗಿದ್ದು ಇವುಗಳನ್ನು ಸಭೆಗೆ ವಿವರಿಸಿದರು.

1) ಇನ್ನೂ ಹೆಚ್ಚಿನ ಠೇವಣಿಗಳನ್ನು ಸಂಗ್ರಹಿಸಿ ಹೆಚ್ಚಿನ ಸಾಲಗಳನ್ನು ನೀಡುವುದು.
2) ಒಟ್ಟು ವಹಿವಾಟು (Total Business) ಅನ್ನು ಕನಿಷ್ಠ ಶೇ.25 ರಷ್ಟು ಪ್ರಗತಿ ಸಾಧಿಸುವುದು.
3) ಒಟ್ಟು ಎನ್. .ಎ. ಪ್ರಮಾಣವನ್ನು ಶೇ. 3 ಕ್ಕಿಂತ ಕಡಿಮೆಗೆ ತರುವುದು.
4) ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಅನುಷ್ಠಾನಕ್ಕೆ ತರುವುದು.
5) ಸದಸ್ಯರು/ಗ್ರಾಹಕರು ಅಂತರ್ಜಾಲ (Internet) ಮೂಲಕ ಬಿಲ್‌ಗಳು ಮತ್ತು ಇತರೆ ಖರ್ಚುಗಳನ್ನು ಪಾವತಿಸಲು ಅನುಷ್ಠಾನಗೊಳಿಸುವುದು.

**ವಿಷಯ 11 : ಬ್ಯಾಂಕಿನ ಸದಸ್ಯರಿಂದ ಮತ್ತು ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಪರಿಶೀಲನೆ**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಬ್ಯಾಂಕಿನ ನಿರ್ದೇಶಕರುಗಳಿಂದ ಮತ್ತು ಸದಸ್ಯರುಗಳಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ಮಾತನಾಡುತ್ತಾ ಬೈಲಾ ಸಂಖ್ಯೆ 20ರಂತೆ ಕನಿಷ್ಠ ಸೇವೆಗಳನ್ನು ಕಡ್ಡಾಯವಾಗಿ ಬಳಸಿಕೊಳ್ಳಲು ವಾರ್ಷಿಕ ವರದಿಯಲ್ಲಿ ಹಾಗೂ ಪತ್ರ ಮುಖೇನ ತಿಳಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ವಿಷಯ 12 : ನಿರ್ದೇಶಕರು ಮತ್ತು ಅವರ ಸಂಬಂಧಿಗಳ ಸಾಲಗಳ ಬಗ್ಗೆ ಪರಿಶೀಲನೆ**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡುತ್ತಾ ನಿರ್ದೇಶಕರು ಹಾಗೂ ಅವರ ಸಂಬಂಧಿಕರಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲವೆಂದು ತಿಳಿಸಿದರು.

**ಪ್ರತಿಭಾ ಪುರಸ್ಕಾರ :–**

ಸಭಾಧ್ಯಕ್ಷರಾದ ಡಾ: ಎಂ.ಸಿ.ಜಗತ್‌ರವರು ಮಾತನಾಡಿ ಕಳೆದ ಏ್ರಿಲ್/ಮೇ ತಿಂಗಳಿನಲ್ಲಿ ನಡೆದ ದ್ವಿತೀಯ .ಯು.ಸಿ. ಹಾಗೂ ಪದವಿ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಶೇ.85ರಷ್ಟು ಹಾಗೂ ಅದಕ್ಕಿಂತ ಹೆಚ್ಚಿಗೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ರಾಷ್ಟಮಟ್ಟದಲ್ಲಿ ಕ್ರೀಡಾ ವಿಭಾಗದಲ್ಲಿ ಪ್ರಶಸ್ತಿ ಪಡೆದ ಸದಸ್ಯರ ಮತ್ತು ಸಿಬ್ಬಂದಿಗಳು ಮಕ್ಕಳಿಗೆ ಪ್ರತಿಭಾ ಪುರಸ್ಕಾರ ರೂ.5000/-ಗಳನ್ನು ನೀಡಲು ತೀರ್ಮಾನಿಸಲಾಗಿದೆಯೆಂದು ತಿಳಿಸಿದರು.

ಕಾರ್ಯದರ್ಶಿಯವರಾದ ಶ್ರೀಮತಿ ಡಿ.ಎ. ಅಮೃತರವರು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೆಸರುಗಳನ್ನು ಸರ್ವಸದಸ್ಯರ ಸಭೆಯಲ್ಲಿ ಪ್ರಕಟಿಸಿದರು. ಮಾನ್ಯ ಉಪಾಧ್ಯಕ್ಷರು ಹಾಗೂ ಹಿರಿಯ ಆಡಳಿತ ಮಂಡಳಿ ಸದಸ್ಯರುಗಳು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ ಅಭಿನಂದಿಸಿದರು.

**ವಿಷಯ 13 : ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಬ್ಯಾಂಕಿನ ಸದಸ್ಯರಾದ ಶ್ರೀ ಳಪ್ಪನವರು ಮಾತನಾಡುತ್ತಾ ಪ್ರತಿಭಾ ಪುರಸ್ಕಾರದ ಮೊತ್ತವನ್ನು ರೂ. 5000/–ರಿಂದ 10,000/– ಕ್ಕೆ ಹೆಚ್ಚಿಸುವಂತೆ, ಠೇವಣಿಗಳಿಗೆ ಸ್ವಯಂ ನವೀಕರಣ ಮಾಡುವ ಬಗ್ಗೆ, ಬೇಗೂರು ಮತ್ತು ಬಿ.ಇ.ಎಸ್. ಶಾಖೆಗಳ ವ್ಯವಹಾರದ ವೇಳೆಯನ್ನು ಬದಲಾಯಿಸುವ ಬಗ್ಗೆ ಹಾಗೂ ಸಹಕಾರ ರತ್ನ ಶ್ರೀ ಬಿ.ಎಲ್. ಲಕ್ಕೇಗೌಡರ ಹೆಸರನ್ನು ಜಯನಗರ ಶಾಖೆಯ ಮುಂಭಾಗದ ರಸ್ತೆಗೆ ಇಡುವಂತೆ ಮನವಿ ಮಾಡಿದರು.

**ವಂದನೆಗಳು :–**

ಆಡಳಿತ ಮಂಡಳಿಯ ಪರವಾಗಿ ಬ್ಯಾಂಕಿನ ಉಪಾಧ್ಯಕ್ಷರಾದ ಡಾ. ಎಂ. ವೀರಪ್ಪನವರು 45ನೇ ವಾರ್ಷಿಕ ಸಭೆಗೆ ಆಗಮಿಸಿ ಸಭೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಷಯಗಳನ್ನು ಸುಧೀರ್ಘವಾಗಿ ಚರ್ಚಿಸಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿರುವುದಕ್ಕೆ ಆಡಳಿತ ಮಂಡಳಿಯ ಪರವಾಗಿ ಅಭಿನಂದಿಸುತ್ತಾ, ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತಿಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳಿಗೂ, ಸಹಕಾರ ಮತ್ತು ಆಡಿಟ್ ಇಲಾಖೆ, ಶಾಸನಬದ್ದ ಲೆಕ್ಕಪರಿಶೋದಕರಾದ ಮೆಸರ್ಸ್ ಎಸ್.ಆರ್.ಆರ್.ಕೆ ಶರ್ಮಾ ಅಸೋಸಿಯೇಟ್ಸ್, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳ, ಅಪೆಕ್ಸ್ ಬ್ಯಾಂಕ್, ಸಂಘ ಸಂಸ್ಥೆಗಳು, ಎಲ್ಲಾ ಗ್ರಾಹಕರಿಗೂ ಮತ್ತು ಬ್ಯಾಂಕಿನ ಪ್ರಗತಿಗೆ ಎಲ್ಲ ರೀತಿಯಲ್ಲೂ ಮಾರ್ಗದರ್ಶನ ನೀಡುತ್ತಿರುವ ಬ್ಯಾಂಕಿನ ಸಂಸ್ಥಾಪಕರೂ ಮತ್ತು ಮಾಜಿ ವಿಶೇಷ ಜಿಲ್ಲಾಧಿಕಾರಿಗಳಾದ, ಸಹಕಾರ ರತ್ನ ಶ್ರೀ ಬಿ.ಎಲ್. ಲಕ್ಕೇಗೌಡರವರಿಗೂ ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಅ ಸಿದರು.

ಸಹಿ/–
(ಶ್ರೀಮತಿ ಡಿ.ಎ. ಅಮೃತ)
ಕಾರ್ಯದರ್ಶಿ

ಸಹಿ/–
(ಡಾ: ಎಂ.ಸಿ.ಜಗತ್)
ಸಭಾಧ್ಯಕ್ಷರು

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು–560 011

## 2019–20ನೇ ಸಾಲಿನ ವಾರ್ಷಿಕ ವರದಿ

ಮಾನ್ಯ ಸದಸ್ಯರೇ,

ದಿನಾಂಕ 21.08.1974 ರಂದು ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ ಎಲ್ ಲಕ್ಕೇಗೌಡರಿಂದ ಸ್ಥಾ ತವಾಗಿ ದಿನಾಂಕ 03.01.1975ರಲ್ಲಿ ವ್ಯವಹಾರಗಳನ್ನು ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಪಡೆದು ದಿನಾಂಕ 27.03.1975ರಲ್ಲಿ ತನ್ನ ವ್ಯವಹಾರಗಳನ್ನು ಪ್ರಾರಂಭಿಸಿ ಬ್ಯಾಂಕು 45 ವರ್ಷಗಳ ಸೇವೆಯನ್ನು ಪೂರೈಸಿ, 46ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆಗೆ ಕಾರಣರಾದ ಸಂಸ್ಥಾಪಕರಾದ ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ.ಎಲ್.ಲಕ್ಕೇಗೌಡರ ಮಾರ್ಗದರ್ಶನವನ್ನು ಸ್ಮರಿಸುವುದು ನಮ್ಮ ಆಧ್ಯ ಕರ್ತವ್ಯವಾಗಿದೆ. ಬ್ಯಾಂಕು ಎಲ್ಲಾ ರೀತಿಯಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಬ್ಯಾಂಕಿನ ಒಟ್ಟು ವ್ಯವಹಾರ ರೂ.76179 ಲಕ್ಷಗಳಾಗಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ರೂ.1561 ಲಕ್ಷ ಹೆಚ್ಚಳವಾಗಿ ಶೇ. 2.09 ರಷ್ಟು ವೃದ್ಧಿಯಾಗಿದೆ. ವರದಿ ಸಾಲಿನಲ್ಲಿ ಠೇವಣಿಗಳು ರೂ. 1917 ಲಕ್ಷ ಹೆಚ್ಚಳವಾಗಿ ರೂ. 45576 ಲಕ್ಷಗಳಿಗೆ ತಲು ದೆ. ಸಾಲಗಳು ರೂ. 372 ಲಕ್ಷ ಇಳಿಕೆಯಾಗಿ ರೂ. 30587 ಲಕ್ಷಗಳಾಗಿರುತ್ತದೆ

ಕೋವಿಡ್–19 ಸಾಂಕ್ರಾಮಿಕ ರೋಗದ ಕಾರಣ ಭಾರತ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದ್ದರ ಪರಿಣಾಮ ಎನ್. . ಎ ಪ್ರಮಾಣ ಹೆಚ್ಚಳವಾಗಿರುತ್ತದೆ ಮತ್ತು ಒಟ್ಟು ಲಾಭ ಹೆಚ್ಚಳವಾಗಿದ್ದರೂ ಸಹ ಎನ್. . ಎ ಸಾಲಗಳಿಗೆ ಅವಕಾಶ ಕಲ್ಪಿಸಿದ್ದರಿಂದ ಲಾಭದಲ್ಲಿ ಇಳಿಕೆಯಾಗಿರುತ್ತದೆ. ದಿನಾಂಕ 31.03.2020ರ ಅಂತ್ಯಕ್ಕೆ ಒಟ್ಟು ಎನ್. .ಎ. ಶೇ.16 ಇದ್ದು, ನಿವ್ವಳ ಎನ್. .ಎ. ಶೇ.12.67 ರಷ್ಟಾಗಿರುತ್ತದೆ. 2019-20ನೇ ಸಾಲಿನಲ್ಲಿ ಬ್ಯಾಂಕು ಒಟ್ಟು ಲಾಭ ರೂ.490.44 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ. 164.55 ಲಕ್ಷಗಳು ಮತ್ತು ಆದಾಯ ತೆರಿಗೆ ಜಾತ ರೂ. 132.10 ಲಕ್ಷಗಳನ್ನು ಕಳೆದು ರೂ. 32.45 ಲಕ್ಷಗಳ ನಿವ್ವಳ ಲಾಭ ಗಳಿಸಿದೆ.

**ಸ್ಮರಣೆ :–** ಬ್ಯಾಂಕಿನ ಮಾಜಿ ಅಧ್ಯಕ್ಷರುಗಳಾದ ಶ್ರೀ ಕೆ. ಎಲ್. ಶಿವಲಿಂಗೇಗೌಡರು ಮತ್ತು ಶ್ರೀ ಳ್ಳಭೈರಪ್ಪನವರು ಹಾಗೂ ನಿರ್ದೇಶಕರಾಗಿದ್ದ ಶ್ರೀಮತಿ ಕೆ. ಎಲ್. ಲಕ್ಷ್ಮಿ ದೇವಮ್ಮನವರುಮತ್ತು ಮಾಜಿ ನಿರ್ದೇಶಕರಾಗಿದ್ದ ಶ್ರೀ ಸಂಪತ್ ಕುಮಾರ್ ಎಸ್.ಬಿ. ಇವರುಗಳು ದೈವಾಧೀನರಾಗಿರುತ್ತಾರೆ ಅವರುಗಳು ಆತ್ಮಕ್ಕೆ ಶಾಂತಿ ಕೋರಿ ಮತ್ತು ಅವರ ಕುಟುಂಬಕ್ಕೆ ಸಂತಾಪ ಸೂಚಿಸುವುದು ನಮ್ಮ ಕರ್ತವ್ಯವಾಗಿದೆ ಮತ್ತು 2019–20ನೇ ವರದಿ ಸಾಲಿನಲ್ಲಿ ಈ ಕೆಳಕಂಡ 125 ಸದಸ್ಯರುಗಳು ದೈವಾಧೀನರಾಗಿದ್ದು, ಮೃತರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬಕ್ಕೆ ಸಂತಾಪ ಸೂಚಿಸುವುದು ನಮ್ಮ ಅಧ್ಯ ಕರ್ತವ್ಯವಾಗಿದೆ

**ಮರಣ ಹೊಂದಿರುವ ಸದಸ್ಯರ ವಿವರ–ದಿನಾಂಕ 01.04.2019 ರಿಂದ 31.03.2020ರವರೆವಿಗೆ.**

| ಕ್ರ.ಸಂ. | ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ | ಕ್ರ.ಸಂ. | ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|---|---|---|
| | ಶ್ರೀಮತಿ/ಶ್ರೀ | | | | |
| 1 | ಪಾರ್ವತಿ | 30155 | 22 | ಸುಧಾ.ಬಿ.ಎಸ್ | 6805 |
| 2 | ಸುಬ್ಬಮ್ಮ ವೆಂಕಟಸ್ವಾಮಿ | 180 | 23 | ಗೋ ನಾಥ್‌ರಾವ್.ಎಲ್.ಕೆ | 46784 |
| 3 | ಸುಶೀಲ ಭಟ್ | 8504 | 24 | ಸುನಂದಮ್ಮ.ಎಸ್ | 41026 |
| 4 | ಗೋವಿಂದರಾಜ ಎಂ.ಎ | 9749 | 25 | ಚಂದ್ರಶೇಖರ್.ಬಿ.ಎನ್ | 95240 |
| 5 | ಜಯರಾಜ್ ವೈ.ಆರ್ | 35129 | 26 | ರಾಜಮ್ಮ | 13711 |
| 6 | ಲಲಿತ.ಎಸ್ | 11628 | 27 | ವೀರಸ್ವಾಮಿ.ಎಸ್ | 8755 |
| 7 | ವೆಂಕಟೇಶ ಗೌಡ | 23743 | 28 | ಚಂದ್ರಪ್ಪ | 48312 |
| 8 | ಶಿವಕುಮಾರ್ ಕೆ.ಎಸ್ | 8468 | 29 | ಚೆನ್ನಮ್ಮ.ಆರ್.ಎಲ್ | 95669 |
| 9 | ಪರಂತಾಮನ್ .ಆರ್ | 36137 | 30 | ನರಸಿಂಹಸ್ವಾಮಿ.ಕೆ.ಎನ್ | 16740 |
| 10 | ಗೋವಿಂದಸ್ವಾಮಿ.ಸಿ | 35331 | 31 | ಶಿವಣ್ಣ ಕೆ.ಎಸ್ | 23518 |
| 11 | ನಾರಾಯಣಸ್ವಾಮಿ.ಆರ್ | 11148 | 32 | ಜಯರಾಮಪ್ಪ.ಹೆಚ್ | 9334 |
| 12 | ಪ್ರಕಾಶ್.ಎನ್ | 12209 | 33 | ಅಶ್ವಥನಾರಾಯಣಗೌಡ.ಜಿ | 17995 |
| 13 | ಸತ್ಯಭಾಮ.ಬಿ.ಆರ್ | 3779 | 34 | ಧನಂಜಯ ಎಂ.ಆರ್ | 42397 |
| 14 | ಅಶೋಕ ಕೆ.ಎನ್ | 10225 | 35 | ವರದೇಗೌಡ | 2049 |
| 15 | ಕೃಷ್ಣಪ್ಪ | 9997 | 36 | ಗೂಳಿಗೌಡ.ಟಿ | 21975 |
| 16 | ಗುರುರಾಜನ್.ಎಂ.ಎ | 48136 | 37 | ಪ್ರದೀಪ್‌ಕುಮಾರ್.ಬಿ.ಎಂ | 4616 |
| 17 | ಗಂಗುಬಾಯಿ | 41954 | 38 | ನಾಗೇಶ್.ಎಸ್ | 19089 |
| 18 | ಜಗದೀಶ್. ವಿ | 45261 | 39 | ರಿಯಾಜ್‌ಎಅಹಮದ್.ಎಸ್.ಎಲ್ | 15575 |
| 19 | ಸಣ್ಣಯ್ಯ.ಟಿ | 7583 | 40 | ಮಂಜುನಾಥ್.ಆರ್ | 44778 |
| 20 | ತಿಮ್ಮೇಗೌಡ.ಬಿಎಲ್ | 12712 | 41 | ಸೌಭಾಗ್ಯ.ಟಿ | 3077 |
| 21 | ಶ್ರೀನಿವಾಸ.ಹೆಚ್ | 47041 | 42 | ರಾಮಚಂದ್ರ.ಎಸ್ | 43503 |

| | | | | | |
|---|---|---|---|---|---|
| 43 | ಶಾಂತಪ್ರಭ | 48591 | 73 | ಮೇನಕ ಹೆಚ್.ಎಸ್ | 5085 |
| 44 | ಶ್ಯಾಮಸುಂದರ್.ಎಂ | 7906 | 74 | ಸಿದ್ದಲಿಂಗಯ್ಯ ಹೆಚ್.ಎಸ್ | 5093 |
| 45 | ದಿನೇಶ್ ಬಾಬು ಜಿ. ಎಸ್. | 9502 | 75 | ಪದ್ಮಿನಿ.ಎಂ.ವಿ | 7764 |
| 46 | ಹುಚ್ಚಯ್ಯ.ಹೆಚ್ | 907 | 76 | ಪುಟ್ಟಮ್ಮ.ಸಿ | 17085 |
| 47 | ರಾಮಯ್ಯ | 6848 | 77 | ಜಯಮ್ಮ.ಎಂ | 39792 |
| 48 | ಬಾಲಕೃಷ್ಣ. ಎಸ್ | 44280 | 78 | ಶಂಕರನಾರಾಯಣ ಶೆಟ್ಟಿ.ಎನ್.ಎ | 45196 |
| 49 | ನರಸಿಂಹಮೂರ್ತಿ.ಎನ್ | 31361 | 79 | ಶಿವಲಿಂಗೇಗೌಡ.ಕೆ.ಎಲ್ | 1 |
| 50 | ಪದ್ಮನಾಭ.ಆರ್ | 44805 | 80 | ರಾಮು.ಬಿ | 12093 |
| 51 | ಹೊನ್ನಯ್ಯ | 498 | 81 | ಗಂಗಮ್ಮ | 22187 |
| 52 | ರಾಘುರಾಮಯ್ಯ.ಟಿ.ಎನ್ | 576 | 82 | ಸೀತಾರಾಂ.ಎಂ.ಎಸ್ | 42595 |
| 53 | ವೇಣುಗೋಪಾಲ್.ಆರ್ | 34713 | 83 | ವಿಶ್ವನಾಥನ್.ಎನ್.ಆರ್ | 580 |
| 54 | ಶ್ರೀನಿವಾಸ ಎಸ್.ಡಿ | 21797 | 84 | ಶ್ರೀನಿವಾಸ್ ಕೃಷ್ಣಮಾಚಾರ್ | 47953 |
| 55 | ನಾಗರತ್ನ.ಎಂ | 21537 | 85 | ಮರಿಶಾಮಯ್ಯ.ಟಿ | 3713 |
| 56 | ಚಿಕ್ಕಮಲ್ಲಯ್ಯ.ಸಿ | 41028 | 86 | ಜಯಲಕ್ಷ್ಮಿ.ಎ.ಆರ್ | 16742 |
| 57 | ನಾಗರತ್ನ.ಎನ್ | 11504 | 87 | ರಮೇಶ್.ಕೆ.ಜಿ. | 45469 |
| 58 | ಚೆನ್ನಿಗಪ್ಪ | 22892 | 88 | ಸತ್ಯನಾರಾಯಣ | 48085 |
| 59 | ಪ್ರಾಣೇಶ.ಬಿ. | 9277 | 89 | ಶಿವೇಗೌಡ.ಟಿ.ಎನ್. | 7394 |
| 60 | ಶಿವಕುಮಾರ್.ಬಿ.ಸಿ | 19881 | 90 | ಶಿವಲಿಂಗಯ್ಯ.ಎಂ | 15834 |
| 61 | ಪುಟ್ಟಲಕ್ಷ್ಮಮ್ಮ | 12521 | 91 | ಭಾರತಿ. ಕೆ. ಸ್ವಾಮಿ | 6069 |
| 62 | ಗೋಪಾಲರಾವ್.ಬಿ. | 19081 | 92 | ನಾಗರಾಜ.ವಿ.ಕೆ | 29034 |
| 63 | ರಾಮಕೃಷ್ಣ.ಎಸ್ | 41635 | 93 | ಶಿವರಾಂ.ಸಿ | 904 |
| 64 | ಚಂದ್ರಕಲ ಭದ್ರಯ್ಯ. ಹೆಚ್ | 21920 | 94 | ದೇವರಾಜಯ್ಯ.ಹೆಚ್.ಸಿ | 12458 |
| 65 | ಮಾಯಣ್ಣ ಕೆ.ಹೆಚ್ | 2074 | 95 | ಬಾಲಚಂದ್ರ.ಎಸ್.ಎನ್ | 51753 |
| 66 | ಈಶ್ವರ್.ಎಂ.ಇ | 2654 | 96 | ಚಾಮುಂಡಯ್ಯ | 17557 |
| 67 | ನಾರಾಯಣಗೌಡ.ಕೆ | 9445 | 97 | ಶಿವಲಿಂಗಯ್ಯ. | 4611 |
| 68 | ಅನಿತ ರೆಡ್ಡಿ | 12906 | 98 | ನಿರ್ಮಲ.ಸಿ | 23517 |
| 69 | ಉಪೇಂದ್ರ ರಾಜು.ಕೆ | 39397 | 99 | ಶಿವಕುಮಾರ್.ಬಿ | 14232 |
| 70 | ಜಯಲಕ್ಷ್ಮಿ.ಎಂ | 2109 | 100 | ಪದ್ಮಾವತಿ.ಎಸ್ | 2498 |
| 71 | ಭೈರಪ್ಪ | 9604 | 101 | ಗುರುಮೂರ್ತಿ.ಎಸ್ | 7491 |
| 72 | ನರಸಿಂಹಯ್ಯ.ಎನ್ | 8476 | 102 | ಜಯಲಕ್ಷ್ಮಮ್ಮ | 7417 |

| | | | | | |
|---|---|---|---|---|---|
| 103 | ನಾರಾಯಣರಾವ್.ಆರ್ | 9053 | 116 | ಪ್ರಭಾಕರ್ | 29389 |
| 104 | ರಂಗಸ್ವಾಮಿ.ಹೆಚ್.ಆರ್ | 22261 | 117 | ಗೌಡಯ್ಯ.ಎಂ | 159 |
| 105 | ರಾವ್.ಎಂ.ಎಸ್ | 42427 | 118 | ಪರಮೇಶ್ವರ.ಎಂ.ಎ | 11161 |
| 106 | ಯೆಡ್ಡಾಲಪ್ಪ.ವಿ.ಎನ್ | 7651 | 119 | ಗೀತ.ಹೆಚ್.ಎಸ್ | 15748 |
| 107 | ಶೋಭಾ.ಕೆ.ವಿ | 51482 | 120 | ಸುರೇಶ್.ಎಸ್.ಎನ್ | 19227 |
| 108 | ಪದ್ಮಾವತಿ.ಜಿ | 9246 | 121 | ರಾಮಯ್ಯ.ಹೆಚ್ | 10297 |
| 109 | ಮರಿಯಪ್ಪ.ಎಂ | 3869 | 122 | ಬಲರಾಂ.ಎನ್ | 8369 |
| 110 | ಅಬ್ದುಲ್ ರಹೀಂ | 48182 | 123 | ಪಾರ್ವತಮ್ಮ.ಆರ್ | 24509 |
| 111 | ರಾಮಯ್ಯ.ಎಂ.ಆರ್ | 8099 | 124 | ಶ್ರೀನಿವಾಸಯ್ಯ.ಕೆ.ಎಂ | 31239 |
| 112 | ಜಯರಾಮ್.ಬಿ | 1715 | 125 | ಮಮತಗೌಡ | 23776 |
| 113 | ಚಿಕ್ಕಣ್ಣ.ಎನ್ | 8963 | | | |
| 114 | ವೀರಕ್ಯಾತಯ್ಯ | 21705 | | | |
| 115 | ರಂಗಸ್ವಾಮಯ್ಯ.ಬಿ | 4315 | | | |

ದಿನಾಂಕ 22.09.2019ರಂದು ಸರ್ವಸದಸ್ಯರ ಸಭೆಯ ನಡಾವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ವರದಿ.

1. ಠೇವಣಿಗಳು ಮತ್ತು ಸಾಲಗಳ ಮೇಲಿನ ಬಡ್ಡಿ ದರಗಳನ್ನು ಪರಿಷ್ಕರಿಸಲಾಗಿದೆ.
2. ATM Rupay Card ಅನ್ನು ಎಲ್ಲಾ ಗ್ರಾಹಕರಿಗೆ ವಿತರಿಸಲಾಗುತ್ತಿದೆ. ಸದಸ್ಯರು/ಗ್ರಾಹಕರು ATM Rupay Card ಅನ್ನು ಪಡೆದುಕೊಳ್ಳಲು ಕೋರಲಾಗಿದೆ.
3. ಖರ್ಚು–ವೆಚ್ಚಗಳನ್ನು ಆಯಾ ಶಾಖೆಗಳಲ್ಲಿಯೇ ಭರಿಸಲಾಗುತ್ತಿದೆ.

**ಪ್ರಗತಿ :**

ಬ್ಯಾಂಕಿನ ಹಣಕಾಸು ಸಾಧನೆ ವ್ಯವಹಾರಗಳ ಪ್ರಗತಿಯ ಮುಖ್ಯಾಂಶಗಳು:

ಬ್ಯಾಂಕಿನ ತುಲನಾತ್ಮಕ ಹಣಕಾಸಿನ ವಿವರ ಕೆಳಕಂಡಂತಿದೆ. ಈ ಅಂಕಿ ಅಂಶಗಳಿಂದ ಕಳೆದ ಐದು ವರ್ಷಗಳಿಂದ ಆದ ಬ್ಯಾಂಕಿನ ಸರ್ವಾಂಗೀಣ ಬೆಳವಣಿಗೆಯನ್ನು ಕಾಣಬಹುದಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | 31.03.2016 | 31.03.2017 | 31.03.2018 | 31.03.2019 | 31.03.2020 |
|---|---|---|---|---|---|---|
| 1 | ಸದಸ್ಯರುಗಳ ಸಂಖ್ಯೆ | 41775 | 41808 | 41869 | 42373 | 42324 |
| 2 | ಷೇರು ಬಂಡವಾಳ | 532.05 | 642.28 | 859.31 | 1117.52 | 1175.79 |
| 3 | ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | 2727.08 | 2653.35 | 2770.94 | 2817.06 | 3191.25 |
| 4 | ಠೇವಣಿಗಳು | 33123.73 | 39411.24 | 43095.98 | 43659.49 | 45576.05 |
| 5 | ಹೂಡಿಕೆಗಳು | 14277.11 | 18822.95 | 19742.27 | 14910.61 | 17137.80 |
| 6 | ಸಾಲ ಮತ್ತು ಮುಂಗಡಗಳು | 20892.04 | 20956.73 | 25039.14 | 30959.00 | 30587.11 |
| 7 | ದುಡಿಯುವ ಬಂಡವಾಳ | 37017.93 | 43306.20 | 47462.92 | 48452.80 | 50496.72 |
| 8 | ನಿವ್ವಳ ಲಾಭ | 142.43 | 187.39 | 171.72 | 330.82 | 32.45 |
| 9 | Capital to Risk Assets Ratio (CRAR) | ಶೇ.11.07 | ಶೇ.10.50 | ಶೇ.9.74 | ಶೇ.9.88 | ಶೇ.9.11 |
| 10 | ಒಟ್ಟು ಎನ್. .ಎ. (Gross NPA) | ಶೇ.4.29 | ಶೇ.6.44 | ಶೇ.4.09 | ಶೇ.4.94 | ಶೇ.16 |
| 11 | ನಿವ್ವಳ ಎನ್. .ಎ. (Net NPA) | ಶೇ.0 | ಶೇ.1.86 | ಶೇ.0.22 | ಶೇ.1.94 | ಶೇ.12.67 |

**ಬ್ಯಾಂಕಿನ ಕಾರ್ಯವ್ಯಾ :–**

ಬ್ಯಾಂಕಿನ ಕಾರ್ಯವ್ಯಾ‌್ತಯು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಮತ್ತು ಮೈಸೂರು ಈ 5 ಜಿಲ್ಲೆಗಳಿಗೆ ಸೀಮಿತವಾಗಿದೆ.

**ಬ್ಯಾಂಕಿನ ಆರ್ಥಿಕ ಫಲಿತಾಂಶದ ವಿವರ :**

**1. ಸದಸ್ಯತ್ವ ಮತ್ತು ಷೇರು ಬಂಡವಾಳ**

1) ಸದಸ್ಯತ್ವ :

ದಿನಾಂಕ 31.03.2020 ಕ್ಕೆ ಬ್ಯಾಂಕಿನಲ್ಲಿ ಒಟ್ಟು 42324 ಸದಸ್ಯರಿರುತ್ತಾರೆ (ಸದಸ್ಯರು : 33974, ಸಹ ಸದಸ್ಯರು : 8341 ಮತ್ತು ಸಂಘ–ಸಂಸ್ಥೆಗಳು : 9)

2) **ಅಧಿಕೃತ ಷೇರು ಬಂಡವಾಳ :**

ಬ್ಯಾಂಕಿನ ಅಧಿಕೃತ ಷೇರು ಬಂಡವಾಳವು ಹಾಲಿ ರೂ.15 ಕೋಟಿಗಳಾಗಿರುತ್ತದೆ.

**ಎ) ಷೇರು ಬಂಡವಾಳ :**

ದಿನಾಂಕ : 31.03.2020ರ ಅಂತ್ಯಕ್ಕೆ ಸಂದಾಯವಾಗಿರುವ ಷೇರು ಬಂಡವಾಳ ರೂ. 1175.79 ಲಕ್ಷಗಳು. ವರದಿ ಸಾಲಿನಲ್ಲಿ ರೂ. 58.27 ಲಕ್ಷ ಹೆಚ್ಚಳವಾಗಿರುತ್ತದೆ.

**2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು :**

ಬ್ಯಾಂಕಿನ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಪ್ರತಿ ವರ್ಷ ಹೆಚ್ಚುತ್ತಾ ಬಂದಿದ್ದು. ದಿನಾಂಕ : 31.03.2020ರ ಅಂತ್ಯಕ್ಕೆ ಇದರ ಒಟ್ಟು ಮೊತ್ತ ರೂ. 3191.25 ಲಕ್ಷಗಳಾಗಿದ್ದು, ಇದಕ್ಕೆ 2019-20ನೇ ಸಾಲಿನ ಲಾಭಾಂಶ ಸೇರಿದರೆ ಒಟ್ಟು ಮೊತ್ತ ರೂ. 3223 ಲಕ್ಷಗಳಾಗುತ್ತದೆ. ಇದು ದುಡಿಯುವ ಬಂಡವಾಳದ ಶೇ. 6.38 ರಷ್ಟು ಸ್ವಂತ ನಿಧಿಗಳಿರುವುದು ಬ್ಯಾಂಕಿನ ಸದೃಡತೆಗೆ ಸಾಕ್ಷಿ. ವಿವರ ಕೆಳಕಂಡಂತೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | 31.03.2016 | 31.03.2017 | 31.03.2018 | 31.03.2019 | 31.03.2020 |
|---|---|---|---|---|---|---|
| 1 | ಕಾಯ್ದಿಟ್ಟ ನಿಧಿ | 720.24 | 775.57 | 837.05 | 895.83 | 995.00 |
| 2 | ಕಟ್ಟಡ ನಿಧಿ | 362.04 | 382.77 | 403.22 | 421.95 | 458.05 |
| 3 | ಕರಡು ಮತ್ತು ಸಂಶಯಾತ್ಮಕ ನಿಧಿ | 976.80 | 976.80 | 970.62 | 948.63 | 1164.98 |
| 4 | ಸದಸ್ಯರ ಕ್ಷೇಮ ನಿಧಿ | 23.98 | 23.84 | 23.62 | 21.37 | 30.15 |
| 5 | ಸದಸ್ಯರ ಮರಣ ಪರಿಹಾರ ನಿಧಿ | 35.48 | 33.84 | 37.37 | 36.50 | 44.03 |
| 6 | ಲಾಭಾಂಶ ಸಮತೋಲನ ನಿಧಿ | 23.04 | 23.04 | 23.04 | 23.04 | 23.04 |
| 7 | ಹೂಡಿಕೆಗಳ ಏರಿಳಿತ ನಿಧಿ | 146.05 | 152.27 | 25.10 | 166.70 | 20.96 |
| 8 | ಹೂಡಿಕೆಗಳ ಮೇಲೆ ಸವಕಳಿ ನಿಧಿ | 317.47 | 159.87 | 295.22 | 124.07 | 278.85 |
| 9 | ಸಿಬ್ಬಂದಿ ಕ್ಷೆಮ ನಿಧಿ | 3.85 | 3.85 | 3.85 | 3.85 | 3.85 |
| 10 | ಧರ್ಮೋದ್ದೇಶ ನಿಧಿ | 1.97 | 1.97 | 1.97 | 1.97 | 1.97 |
| 11 | ಮಹೋತ್ಸವ ನಿಧಿ | 13.78 | 13.78 | 26.05 | 26.05 | 50.11 |
| 12 | ಉತ್ಪಾದಕ ಆಸ್ತಿಗಳ ನಿಧಿ | 80.00 | 81.00 | 98.00 | 120.25 | 120.25 |
| 13 | ಇತರೆ ನಿಧಿಗಳು | 22.38 | 24.75 | 25.83 | 26.86 | - |
| | **ಒಟ್ಟು ಮೊತ್ತ** | **2727.08** | **2653.35** | **2770.94** | **2817.07** | **3191.25** |

**3. ದುಡಿಯುವ ಬಂಡವಾಳ :**

ಬ್ಯಾಂಕಿನ ದುಡಿಯುವ ಬಂಡವಾಳ ದಿನಾಂಕ 31.03.2020ರ ಅಂತ್ಯಕ್ಕೆ ರೂ.50497 ಲಕ್ಷಗಳಾಗಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ವರ್ಷಾಂತ್ಯಕ್ಕೆ ರೂ.2044 ಲಕ್ಷಗಳು (ಶೇ4.22) ಹೆಚ್ಚಳವಾಗಿರುತ್ತದೆ.

**4. ಹೂಡಿಕೆಗಳು :**

ಹೂಡಿಕೆಗಳ ಮಟ್ಟ ದಿನಾಂಕ 31.03.2020ರ ಅಂತ್ಯಕ್ಕೆ ರೂ.17137.80 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.2227.19 ಲಕ್ಷಗಳು (ಶೇ.14.94) ಹೆಚ್ಚಳವಾಗಿರುತ್ತದೆ.

**5. ಠೇವಣಿಗಳು :**

ಬ್ಯಾಂಕಿನ ಒಟ್ಟು ಠೇವಣಿಗಳು ದಿನಾಂಕ 31.03.2020ರ ಅಂತ್ಯಕ್ಕೆ ರೂ.45576 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.1916 ಲಕ್ಷಗಳು (ಶೇ.4.39) ಹೆಚ್ಚಳವಾಗಿರುತ್ತದೆ.

ಠೇವಣಿ ಮೇಲೆ ಹಿರಿಯ ನಾಗರೀಕರುಗಳಿಗೆ ಶೇ.0.5ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ಸದಸ್ಯರುಗಳು ತಮ್ಮ ಉಳಿತಾಯ ಹಣವನ್ನು ಠೇವಣಿಯಲ್ಲಿ ತೊಡಗಿಸಿ ಬ್ಯಾಂಕಿನ ಪ್ರಗತಿಗೆ ಸಹಾಯಕರಾಗಬೇಕೆಂದು ಕೋರಿದೆ.

**6. 1) ಸಾಲಗಳು ಮತ್ತು ಮುಂಗಡಗಳು :**

ದಿನಾಂಕ 31.03.2020ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಸಾಲ ಮತ್ತು ಮುಂಗಡಗಳು ರೂ.30587 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.372 (ಶೇ.1.20) ಇಳಿಕೆಯಾಗಿರುತ್ತದೆ. ಬ್ಯಾಂಕು ಸಾದಿಸಿರುವ ಹೆಚ್ಚಿನ ಠೇವಣಿ ಸಂಗ್ರಹಣೆ ಪ್ರಗತಿಯಿಂದಾಗಿ ಸದಸ್ಯರುಗಳಿಗೆ ಎಲ್ಲಾ ತರಹದ ಸಾಲ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗಿದೆ. ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವರ್ಷಾಂತ್ಯಕ್ಕೆ ಶೇ.67.14 ಇದ್ದು, ಸದಸ್ಯರುಗಳು ಅರ್ಜಿ ಸಲ್ಲಿಸಿದ ಕೇವಲ ಒಂದು ವಾರದೊಳಗೆ ಆಧಾರದ ಸಾಲಗಳು ಮತ್ತು ಆಧಾರವಿಲ್ಲದ ಸಾಲಗಳನ್ನು, ಒಂದು ತಿಂಗಳೊಳಗಾಗಿ ಅಡಮಾನ ಸಾಲಗಳನ್ನು ಮಂಜೂರು ಮಾಡಿಕೊಂಡಿಲಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆಗೆ ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ, ಆರ್ಥಿಕ ದುರ್ಬಲರಿಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸದಸ್ಯರಿಗೆ ತ್ವರಿತಗತಿಯಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

**2) ನಿರ್ದೇಶಕರ ಸಾಲಗಳು :**

ನಿರ್ದೇಶಕರ ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ತರಹದ ಸಾಲಗಳನ್ನು ನೀಡಿರುವುದಿಲ್ಲ.

ಹಾಲಿ ವಿವಿಧ ಸಾಲಗಳ ಗರಿಷ್ಠ ಮಿತಿ ಮತ್ತು ಬಡ್ಡಿ ದರ ಕೆಳಕಂಡಂತಿರುತ್ತದೆ.

| ಕ್ರ ಸಂ. | ಸಾಲದ ವಿಧಗಳು | ಸಾಲದ ಮೊತ್ತ | ಬಡ್ಡಿ ದರ |
|---|---|---|---|
| 1 | ಆಧಾರವಿಲ್ಲದ ಸಾಲಗಳು | ಗರಿಷ್ಠ ರೂ. 2 ಲಕ್ಷಗಳು | ಶೇ. 13 |
| 2 | ಆಭರಣ ಸಾಲ | ಕನಿಷ್ಠ ರೂ. 10,000/–<br>ಗರಿಷ್ಠ ರೂ. 10 ಲಕ್ಷಗಳು<br>ರೂ. 2 ಲಕ್ಷಗಳವರೆಗೆ<br>ರೂ. 2 ಲಕ್ಷ ಮೇಲ್ಪಟ್ಟು ರೂ. 10 ಲಕ್ಷಗಳವರೆಗೆ | ಶೇ. 10<br>ಶೇ. 11 |
| 3 | ವಾಹನ ಸಾಲ | ಗರಿಷ್ಠ ರೂ. 40 ಲಕ್ಷಗಳು | ಶೇ. 10 |
| 4 | ಓವರ್‌ಡ್ರಾಫ್ಟ್ – ಸ್ವತ್ತಿನ ಮೇಲೆ | ಗರಿಷ್ಠ ರೂ. 2 ಕೋಟಿ | ಶೇ. 13.50 |
| 5 | ಓವರ್‌ಡ್ರಾಫ್ಟ್ – ಠೇವಣಿಗಳ ಮೇಲೆ | ಠೇವಣಿ ಮೊತ್ತದ ಮೇಲೆ ಶೇ. 90 ರಷ್ಟು | ಠೇವಣಿ ಬಡ್ಡಿ ದರದ ಮೇಲೆ ಶೇ.2 ರಷ್ಟು ಹೆಚ್ಚಿಗೆ |
| 6 | 1) ವ್ಯಾಪಾರ ಅಭಿವೃದ್ಧಿ ಸಾಲಗಳು<br>2) ವಾಣಿಜ್ಯ ಸಂಕೀರ್ಣ ಕಟ್ಟಲು (for group borrowers) | ಗರಿಷ್ಠ ರೂ. 3 ಕೋಟಿಗಳು<br>ಗರಿಷ್ಠ ರೂ. 5 ಕೋಟಿಗಳು | ಶೇ. 12 |
| 7 | ಮನೆ ಕಟ್ಟಲು ಮತ್ತು ಮನೆ ಕೊಳ್ಳಲು ನಿವೇಶನ ಕೊಳ್ಳಲು ಜೊತೆಗೆ ಮನೆ ಕಟ್ಟಲು (ಒಟ್ಟು) | ಗರಿಷ್ಠ ರೂ. 70 ಲಕ್ಷಗಳು | ಶೇ. 10 |
| 8 | ನಿವೇಶನ ಕೊಳ್ಳಲು | ಗರಿಷ್ಠ ರೂ. 40 ಲಕ್ಷಗಳು | ಶೇ. 11 |
| 9 | ಸಾಲ ತೀರಿಸಲು | ಗರಿಷ್ಠ ರೂ. 70 ಲಕ್ಷಗಳು | ಶೇ. 13.5 |
| 10 | ಮದುವೆ ಉದ್ದೇಶಕ್ಕೆ | ಗರಿಷ್ಠ ರೂ. 25 ಲಕ್ಷಗಳು | ಶೇ. 12.5 |
| 11 | ರಿಪೇರಿ ಮತ್ತು ನವೀಕರಣಕ್ಕೆ | ಗರಿಷ್ಠ ರೂ. 5 ಲಕ್ಷಗಳು | ಶೇ. 12.5 |
| 12 | ವಿದ್ಯಾಭ್ಯಾಸಕ್ಕಾಗಿ | ಗರಿಷ್ಠ ರೂ. 15 ಲಕ್ಷಗಳು<br>ರೂ. 5 ಲಕ್ಷಗಳವರೆಗೆ<br>ರೂ. 5 ಲಕ್ಷ ಮೇಲ್ಪಟ್ಟು ಮತ್ತು ರೂ. 15 ಲಕ್ಷಗಳವರೆಗೆ | ಶೇ. 10<br>ಶೇ. 11 |
| 13 | ಸ್ವತ್ತಿನ ಮೇಲೆ ಬಾಡಿಗೆ ರಿಯಾಯಿತಿ ಸಾಲಗಳು | ಗರಿಷ್ಠ ರೂ. 3 ಕೋಟಿಗಳವರೆಗೆ | ಶೇ. 11 |

ಈ ಎಲ್ಲಾ ಸಾಲಗಳ ಮಂಜೂರಾತಿಗಾಗಿ ಸ್ವತ್ತಿನ ಮೌಲ್ಯ, ಅರ್ಜಿದಾರರ ನಿವ್ವಳ ಆದಾಯ, ಮರುಪಾವತಿ ಶಕ್ತಿ ಹಾಗೂ ಇನ್‌ಕಂಟ್ಯಾಕ್ಸ್ ಅಸೆಸ್‌ಮೆಂಟ್ ಆರ್ಡರ್ ಇವುಗಳನ್ನು ಗಣನೆಗೆ ತೆಗೆದುಕೊಂಡು ಅರ್ಹತೆ ಆಧಾರದ ಮೇಲೆ ಸಾಲ ಮಂಜೂರು ಮಾಡಲಾಗುತ್ತಿದೆ. ಸದಸ್ಯರುಗಳು ಈ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಾಲ ಪಡೆದು, ಸಾಲಗಳನ್ನು ಸಕಾಲಕ್ಕೆ ಮರುಪಾವತಿ ಮಾಡಬೇಕೆಂದು ಕೋರಿದೆ.

ಜಯನಗರ, ಮತ್ತೀಕೆರೆ, ವಿಜಯನಗರ, ಕೆಂಗೇರಿ, ಯಲಹಂಕ ಮತ್ತು ಬೇಗೂರು ಶಾಖೆಗಳಲ್ಲಿ ಚಿನ್ನಾಭರಣ ಮೇಲಿನ ಸಾಲಗಳನ್ನು ನೀಡಲಾಗುತ್ತಿದೆ.

**7. ಸುಸ್ತಿ ಸಾಲ ಹಾಗೂ ಅನುತ್ಪಾಧಕ ಆಸ್ತಿಗಳು :– (Non Permorming Assets)**

ಅ) ಸುಸ್ತಿಯಾದ ಸಾಲಗಳ ಕಾಲಾವಧಿ ವಿಂಗಡಣೆಯ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ವಿವರ | ಸುಸ್ತಿಯಾದ ಸಾಲದ ಮೊತ್ತ | | | | |
|---|---|---|---|---|---|
| | 31.03.2016 | 31.03.2017 | 31.03.2018 | 31.03.2019 | 31.03.2020 |
| ಒಂದು ವರ್ಷದ ಒಳಗೆ | 159.04 | 156.33 | 126.73 | 895.19 | 1578.23 |
| 1 ವರ್ಷಕ್ಕೆ ಮೇಲ್ಪಟ್ಟು 2 ವರ್ಷದವರೆಗೆ | 40.42 | 38.46 | 16.64 | 4.97 | 112.34 |
| 2 ವರ್ಷಕ್ಕೆ ಮೇಲ್ಪಟ್ಟು 3 ವರ್ಷದವರೆಗೆ | 22.00 | 70.90 | 37.20 | 18.19 | 66.49 |
| 3 ವರ್ಷಕ್ಕೆ ಮೇಲ್ಪಟ್ಟು | 74.14 | 72.44 | 131.73 | 109.74 | 130.21 |
| **ಒಟ್ಟು** | **295.60** | **338.13** | **312.30** | **1028.09** | **1887.27** |

ದಿನಾಂಕ : 31.03.2020ಕ್ಕೆ ರೂ.1887.27 ಲಕ್ಷಗಳ ಸುಸ್ತಿ ಮೊತ್ತ ಬಾಕಿ ಇದ್ದು, ಇದನ್ನು ಇನ್ನೂ ಕಡಿಮೆ ಮಾಡಲು ತೀವ್ರವಾದ ವಸೂಲಾತಿ ಕ್ರಮಕೈಗೊಳ್ಳಲಾಗಿದೆ.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಿಗನುಸಾರವಾಗಿ ಅನುತ್ಪಾದಕ ಆಸ್ತಿಗಳ ವಿವರ ಕೆಳಕಂಡಂತಿವೆ.

| ವರ್ಷ | ಒಟ್ಟು ಅನುತ್ಪಾದಕ ಆಸ್ತಿ (Gross NPA) | | ನಿವ್ವಳ ಅನುತ್ಪಾದಕ ಆಸ್ತಿ (Net NPA) | |
|---|---|---|---|---|
| | ಮೊತ್ತ | ಶೇ. | ಮೊತ್ತ | ಶೇ. |
| 31.03.2016 | 896.76 | 4.29 | (-) 80.04 | 0 |
| 31.03.2017 | 1348.89 | 6.44 | 372.09 | 1.86 |
| 31.03.2018 | 1023.48 | 4.09 | 52.86 | 0.22 |
| 31.03.2019 | 1530.69 | 4.94 | 582.06 | 1.94 |
| 31.03.2020 | 4893.04 | 16.00 | 3728.06 | 12.67 |

ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ನಿವ್ವಳ ಸಾಲಗಳ ಮೇಲೆ ಶೇ.12.67 ಮತ್ತು ಒಟ್ಟು ಅನುತ್ಪಾದಕ ಆಸ್ತಿ ಸಾಲಗಳ ಮೇಲೆ ಶೇ.16 ರಷ್ಟು ಇರುತ್ತದೆ. ಕೋವಿಡ್–19 ಸಾಂಕ್ರಾಮಿಕ ರೋಗದ ಪರಿಣಾಮ ಎನ್. .ಎ. ಹೆಚ್ಚಳವಾಗಿರುತ್ತದೆ. ಇದನ್ನು ಕಡಿಮೆ ಮಾಡಲು ಅಗತ್ಯ ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ದಿನಾಂಕ : 31.03.2020ರ ಅಂತ್ಯಕ್ಕೆ ಬ್ಯಾಂಕಿನ ಮುಂಗಡಗಳು ರೂ.30587.11 ಲಕ್ಷಗಳಿಗೆ ತಲು ರುತ್ತದೆ. ಸಾಲಗಳ ಮರುಪಾವತಿಯಲ್ಲಿ ಅಸಲನ್ನು ಅಥವಾ ಬಡ್ಡಿಯನ್ನು 3 ಕಂತುಗಳಿಗಿಂತ ಹೆಚ್ಚಿಗೆ ಮರುಪಾವತಿ ಮಾಡದೆ ಇರುವಂತಹ ಸಾಲಗಳನ್ನು ನಾನ ಪರ್‌ಫಾರ್ಮಿಂಗ್ ಅಸೆಟ್ಸ್ (ಎನ್. .ಎ.) ಆಗಿ ವಿಂಗಡಣೆ ಮಾಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದ್ದು, ಇಂತಹ ಸಾಲಗಳು ಎನ್. .ಎ. ಆಗಿ ವರ್ಗೀಕರಣಗೊಳ್ಳುತ್ತದೆ. ಇದರಿಂದಾಗಿ ಬ್ಯಾಂಕಿನ ಲಾಭದ ಮೇಲೆ ಪರಿಣಾಮ ಬೀರಲಿದೆ. ಆದುದರಿಂದ ಸುಸ್ತಿ ಇಲ್ಲದೆ ಸಾಲದ ಕಂತುಗಳನ್ನು ಅಸಲು ಮತ್ತು ಬಡ್ಡಿ ಸಮೇತ ಮರುಪಾವತಿಸಬೇಕೆಂದು ಸಾಲಗಾರರಲ್ಲಿ ವಿನಂತಿಸಿದೆ.

ದಿನಾಂಕ 31.03.2020ರ ಅಂತ್ಯಕ್ಕೆ ಎನ್. .ಎ.ಗೆ ಕಾಯ್ದಿರಿಸಿರುವ ಒಟ್ಟು ಮೊತ್ತ ರೂ.1164.98 ಲಕ್ಷಗಳಾಗಿರುತ್ತದೆ. ಸಾಲಗಾರರು ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ಪಾವತಿಸುವುದರಿಂದ ಸುಸ್ತಿ ಬಡ್ಡಿ ಮತ್ತು ಇತರೆ ಖರ್ಚುಗಳನ್ನು ಸಾಲಗಾರರಿಂದ ವಸೂಲಾತಿ ಮಾಡುವುದು ತಪ್ಪುತ್ತದೆ ಮತ್ತು ಸಾಲಗಳ ವಸೂಲಿಗಾಗಿ ಹೂಡುವ ಕೇಸುಗಳಿಗೆ ತಗಲುವ ವೆಚ್ಚಗಳನ್ನು ಸಹ ತ್ಪಸಬಹುದು. ಮಾನ್ಯ ಸದಸ್ಯರುಗಳು ಪಡೆದಿರುವ ಸಾಲಗಳನ್ನು ಸಮರ್ಪಕವಾಗಿ ಸುಸ್ತಿ ಇಲ್ಲದೆ, ವೇಳೆಗೆ ಸರಿಯಾಗಿ ಮರುಪಾವತಿಸಿ ಸಹಕರಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ. ಇದರಿಂದ ಬ್ಯಾಂಕು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಆಡಳಿತ ಮಂಡಳಿಯು ಸಾಲಗಾರರು ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ನಿಗದಿತ ಅವಧಿಯೊಳಗೆ ಪಾವತಿ ಮಾಡಿದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ.1 ರಂತೆ ಬಡ್ಡಿ ರಿಯಾಯಿತಿ ನೀಡಲಾಗುತ್ತಿದೆ. ಬಡ್ಡಿ ರಿಯಾಯತಿಯನ್ನು ಆಯಾ ವರ್ಷ ಪೂರ್ಣಗೊಂಡ ತಕ್ಷಣ ಅರ್ಜಿ ಸಲ್ಲಿಸಿ ಈ ರಿಯಾಯಿತಿಯನ್ನು ಪಡೆಯುವುದು.

ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುತ್ಪಾದಕ ಆಸ್ತಿ (ಎನ್. .ಎ.) ನೀತಿಯ ಬಗ್ಗೆ ಅನೇಕ ಸುತ್ತೋಲೆಗಳು ಬಂದಿದ್ದು. ಈ ಸುತ್ತೋಲೆಗಳ ನಿರ್ದೇಶನಗಳನ್ನು ಜಾರಿಗೊಳಿಸುವುದಕೋಸ್ಕರ ಸಾಲ ವಸೂಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ಸುಸ್ತಿ ಸಾಲಗಳ ವಸೂಲಾತಿಗಾಗಿ ಕೇಸುಗಳನ್ನು ಫೈಲು ಮಾಡಿ, ಜ್ತ ಮತ್ತು ಸ್ವತ್ತನ್ನು ಹರಾಜಿಗೆ ಒಳಪಡಿಸಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಾಗೂ ಆಗಿಂದಾಗ್ಗೆ ಸುಸ್ತಿದಾರರ ಮನೆಗಳಿಗೆ ಮತ್ತು ಕಛೇರಿಗಳಿಗೆ ಭೇಟಿ ನೀಡಿ ಸುಸ್ತಿ ಸಾಲಗಳನ್ನು ನಿರ್ದಾಕ್ಷಣ್ಯವಾಗಿ ವಸೂಲಿ ಮಾಡಲಾಗುತ್ತಿದೆ. ಆದ್ದರಿಂದ ಸಾಲ ಪಡೆದ ಸದಸ್ಯರಲ್ಲಿ ಕಳಕಳಿಯ ಮನವಿಯೇನೆಂದರೆ ದಯವಿಟ್ಟು ಯಾವ ಕಾರಣಕ್ಕೂ ಸುಸ್ತಿದಾರರಾಗಬೇಡಿ.

ಒಂದು ವೇಳೆ ಸುಸ್ತಿದಾರರಾದಲ್ಲಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಎಲ್ಲಾ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸದಸ್ಯರುಗಳು ಪಡೆದಂತಹ ಸಾಲಗಳ ಕಂತುಗಳನ್ನು ಕ್ರಮಬದ್ಧವಾಗಿ ಮರುಪಾವತಿಸಿ ಬ್ಯಾಂಕಿನ ಬೆಳವಣಿಗೆಗೆ ಸಹಕರಿಸಬೇಕಾಗಿ ಕೋರಿದೆ.

ಸ್ಥಿರಾಸ್ತಿ ಮೇಲಿನ ಸುಸ್ತಿ ಸಾಲಗಳ ವಸೂಲಾತಿ ಬಗ್ಗೆ ಕೇಂದ್ರ ಸರ್ಕಾರ (SARFAESIA) ಸರ್ಫೇಸಿಯಾ ಕಾಯ್ದೆಯನ್ನು ಕಾಯಿದೆ 54ರ ಪ್ರಕಾರ ದಿನಾಂಕ 28.01.2003 ರಿಂದ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವಂತೆ ಜಾರಿಗೊಳಿಸಿದೆ. ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಮೇಲ್ಕಂಡ ಕಾಯಿದೆ ಸೆಕ್ಷನ್ 13(2)ರ ಅಡಿಯಲ್ಲಿ ಸುಸ್ತಿ ಸಾಲಗಾರರಿಗೆ ನೊಟೀಸ್ ಜಾರಿ ಮಾಡಿ 60 ದಿನಗಳೊಳಗಾಗಿ ಪೂರ್ತಿ ಸಾಲ/ಬಡ್ಡಿ ಇನ್ನಿತರ ಖರ್ಚು–ವೆಚ್ಚಗಳನ್ನು ಪಾವತಿಸಲು ತ್ಪದ್ದಲ್ಲಿ ಕಾಯಿದೆ ಸೆಕ್ಷನ್ 13(4)ರ ಪ್ರಕಾರ ಸಾಲಕ್ಕೆ ನೀಡಿದ ಸ್ಥಿರಾಸ್ತಿ / ಯಂತ್ರೋಪಕರಣಗಳನ್ನು ಬ್ಯಾಂಕಿನ ವಶಕ್ಕೆ ತೆಗೆದುಕೊಂಡು 30 ದಿನಗಳ ನೊಟೀಸ್ ಜಾರಿ ಮಾಡಿ ಮಾರಾಟ ಮಾಡಲು ಅಧಿಕೃತ ಅಧಿಕಾರಿಯನ್ನು (Authorised Officer) ನೇಮಿಸಲಾಗಿದೆ. ಈ ಕಾಯಿದೆಯನ್ವಯ ಸುಸ್ತಿದಾರರಿಗೆ ಈಗಾಗಲೇ ನೊಟೀಸ್ ಜಾರಿ ಮಾಡಿ ಸ್ಥಿರಾಸ್ತಿಗಳ ಬಹಿರಂಗ ಹರಾಜಿಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಕ್ರಮಕೈಗೊಂಡಿದೆ.

ಈ ಕಾಯಿದೆಯನ್ವಯ ವಸೂಲಾತಿ ಕ್ರಮಗಳು ಕಠಿಣ ಪರಿಸ್ಥಿತಿ ತಂದೊಡ್ಡುವುದಲ್ಲದೆ ದಿನಪತ್ರಿಕೆಗಳಲ್ಲಿ ನೀಡುವ ಜಾಹಿರಾತು ವೆಚ್ಚ, ಇನ್ನಿತರ ವೆಚ್ಚಗಳನ್ನು ಸಾಲಗಾರರೇ ಭರಿಸಬೇಕಾಗಿರುವುದರಿಂದ ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಬೇಕೆಂದು ಕೋರಲಾಗಿದೆ.

**8. ಲಾಭದ ಹಂಚಿಕೆ :**

ಬ್ಯಾಂಕು 2019–20ನೇ ಸಾಲಿನಲ್ಲಿ ಒಟ್ಟು ಲಾಭ ರೂ.490.44 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ.164.55 ಲಕ್ಷಗಳು ಮತ್ತು ಆದಾಯ ತೆರಿಗೆ ಪಾವತಿ ನಂತರ ರೂ.32.45 ಲಕ್ಷಗಳ ಲಾಭ ಗಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ Declaration of dividends by banks ಕುರಿತು ದಿನಾಂಕ : 17–4–2020 ರಂದು ಸುತ್ತೋಲೆ ಸಂಖ್ಯೆ : DOR.BC.No.64/21-02-067/2019-20 ರನ್ನು ಹೊರಡಿಸಿದ್ದು, ಅದರಲ್ಲಿ ಕೋವಿಡ್–19 ಸಾಂಕ್ರಾಮಿಕದಿಂದ ಉದ್ಭವಿಸಿರುವ ಸಮಸ್ಯೆಗಳಿಂದ ಆರ್ಥಿಕತೆಯನ್ನು ಬಲಪಡಿಸಲು ಮತ್ತು ನಷ್ಟಗಳನ್ನು ನಿಭಾಯಿಸಲು ಎಲ್ಲಾ ಸಹಕಾರಿ ಬ್ಯಾಂಕುಗಳು ಪ್ರಸಕ್ತ ವರ್ಷದಲ್ಲಿ ತನ್ನ ಮುಂದಿನ ಆದೇಶದವರೆಗೆ ಲಾಭಾಂಶದ ಘೋಷಣೆಯನ್ನು ನಿರ್ಭಂದಿಸಿರುವುದಾಗಿ ಸೂಚಿಸಿರುವುದರಿಂದ ಈ ವರ್ಷದ ಲಾಭಾಂಶವನ್ನು ಘೋಷಣೆ ಮಾಡಿರುವುದಿಲ್ಲ. ಮಾನ್ಯ ಸದಸ್ಯರು ಸಹಕರಿಸಬೇಕಾಗಿ ವಿನಂತಿಸಲಾಗಿದೆ.

ಬ್ಯಾಂಕು 2019–20ನೇ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ. 32,45,071.66 ಗಳನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ ಮತ್ತು ಇದಕ್ಕೆ ಮಹಾಸಭೆಯ ಅನುಮೋಧನೆಯನ್ನು ಕೋರಲಾಗಿದೆ.

(ರೂ.ಗಳಲ್ಲಿ)

| ಕ್ರ. ಸಂ. | ಬಾಬ್ತುಗಳು | | ಲಾಭದ ಹಂಚಿಕೆ |
|---|---|---|---|
| 1 | ಕಾಯ್ದಿಟ್ಟ ನಿಧಿ | ಶೇ.25 | 8,11,268.00 |
| 2 | ಸಹಕಾರ ಶಿಕ್ಷಣ ನಿಧಿ | ಶೇ.2 | 48,676.00 |
| 3 | ಸಹಕಾರ ಶಿಕ್ಷಣ ನಿಧಿ, ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ | ಶೇ.1 | 24,338.00 |
| 4 | ಕಟ್ಟಡ ನಿಧಿ | ಶೇ.15 | 3,54,118.00 |
| 5 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | ಶೇ.10 | 2,36,079.00 |
| 6 | ಹೂಡಿಕೆಗಳ ಏರಿಳಿತ ನಿಧಿ | ಶೇ.10 | 2,36,079.00 |
| 7 | ಸದಸ್ಯರ ಮರಣೋತ್ತರ ನಿಧಿ | ಶೇ.10 | 2,36,079.00 |
| 8 | ಮಹೋತ್ಸವ ನಿಧಿ | ಶೇ.10 | 2,36,079.00 |
| 9 | ಕರಡು ಮತ್ತು ಅನುಮಾನಾಸ್ಪದ ಸಾಲದ ನಿಧಿ | ಶೇ.10 | 2,36,079.00 |
| 10 | ಉಳಿಕೆ ಮೊತ್ತ ಕಾಯ್ದಿಟ್ಟ ನಿಧಿಗೆ | | 8,26,276.66 |
| | **ಒಟ್ಟು** | | **ರೂ. 32,45,071.66** |

**9. ವರಮಾನ ತೆರಿಗೆ :–**

2006ನೇ ವರ್ಷದ ಕೇಂದ್ರ ಸರ್ಕಾರದ ಮುಂಗಡ ಪತ್ರದಲ್ಲಿ ಸಹಕಾರ ಬ್ಯಾಂಕುಗಳ ನಿವ್ವಳ ಲಾಭದ ಮೇಲೆ ಆದಾಯ ತೆರಿಗೆ ಕಾಯ್ದೆ1961 ಕಲಂ 80 ರದ್ದಾಗಿ, ಪಟ್ಟಣ ಸಹಕಾರ ಬ್ಯಾಂಕುಗಳು 2006-07ನೇ ಸಾಲಿನಿಂದ ಆದಾಯ ತೆರಿಗೆಯನ್ನು ಪಾವತಿಸಬೇಕಾಗಿದೆ. ಆದಾಯ ತೆರಿಗೆ ಕಾಯ್ದೆ 1961 ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿ ವರ್ಷ ತಮ್ಮ ನಿವ್ವಳ ಲಾಭದ ಮೇಲೆ ಶೇ.30 ರಷ್ಟು ಆದಾಯ ತೆರಿಗೆಯನ್ನು, ಇದರ ಮೇಲೆ ಶೇ.12 ಸರ್‌ಚಾರ್ಜ್‌ನ್ನು ಮತ್ತು ಶೇ. 4ರಷ್ಟು ಶಿಕ್ಷಣ ಉಪಕರವನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿ ಮಾಡಬೇಕಾಗಿದ್ದು, ಅದರಲ್ಲೂ ಮುಂದಿನ ವರ್ಷದ ಲಾಭವನ್ನು ಅಂದಾಜು ಮಾಡಿ ಅದರ ಮೇಲಿನ ತೆರಿಗೆಯ ಮೊದಲನೆ ಕಂತನ್ನು ಪ್ರಸಕ್ತ ಸಾಲಿನ ಜೂನ್ 15ರ ಒಳಗೆ, 2ನೇ ಕಂತನ್ನು ಸೆಪ್ಟೆಂಬರ್ 15ರೊಳಗೆ, 3ನೇ ಕಂತನ್ನು ಡಿಸೆಂಬರ್ 15ರೊಳಗೆ, 4ನೇ ಕಂತನ್ನು ಮಾರ್ಚ್ 15ರೊಳಗೆ ಮುಂಗಡವಾಗಿ ಪಾವತಿಸಬೇಕಾಗಿರುತ್ತದೆ. 2019–20ನೇ ಸಾಲಿನಲ್ಲಿ ಬ್ಯಾಂಕು ರೂ.132.10 ಲಕ್ಷ ಆದಾಯ ತೆರಿಗೆಯನ್ನು ಪಾವತಿಸಿದೆ.

**10. ಶಾಖೆಗಳ ಪ್ರಗತಿ : –**

ವರದಿ ಸಾಲಿನಲ್ಲಿ ಎಲ್ಲಾ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ. ದಿನಾಂಕ 31.03.2020ಕ್ಕೆ ಬ್ಯಾಂಕಿನ ಶಾಖಾವಾರು ಠೇವಣಿ ಮತ್ತು ಸಾಲಗಳ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಶಾಖೆಗಳು | 31.03.2018 | | 31.03.2019 | | 31.03.2020 | |
|---|---|---|---|---|---|---|
| | ಠೇವಣಿಗಳು | ಸಾಲಗಳು | ಠೇವಣಿಗಳು | ಸಾಲಗಳು | ಠೇವಣಿಗಳು | ಸಾಲಗಳು |
| ಕೇಂದ್ರ ಕಛೇರಿ / ಜಯನಗರ | 19528.81 | 8516.52 | 18555.27 | 9971.01 | 19039.77 | 9864.86 |
| ಮತ್ತೀಕೆರೆ | 7373.12 | 6385.01 | 8154.27 | 8439.82 | 8951.57 | 8574.19 |
| ವಿಜಯನಗರ | 4317.05 | 2373.46 | 4476.14 | 3451.73 | 4454.97 | 3218.49 |
| ಇಂದಿರಾನಗರ | 3260.29 | 1879.40 | 3293.44 | 2271.64 | 3327.43 | 2021.42 |
| ಕೆಂಗೇರಿ | 1713.76 | 1471.80 | 1792.87 | 1785.23 | 1852.17 | 1740.19 |
| ಯಲಹಂಕ | 4343.13 | 3407.51 | 4602.00 | 3461.98 | 5027.64 | 3513.67 |
| ಬಿ.ಇ.ಎಸ್. ಕಾಲೇಜು | 2475.89 | 928.57 | 2459.92 | 1171.25 | 2433.48 | 973.11 |
| ಬೇಗೂರು | 83.93 | 76.87 | 325.58 | 406.34 | 489.02 | 681.18 |
| ಒಟ್ಟು | 43095.98 | 25039.14 | 43659.49 | 30959.00 | 45576.05 | 30587.11 |

ಬ್ಯಾಂಕಿನ ಕೇಂದ್ರ ಕಛೇರಿ, ಮತ್ತೀಕೆರೆ ಮತ್ತು ಯಲಹಂಕ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿಜಯನಗರ, ಇಂದಿರಾನಗರ, ಕೆಂಗೇರಿ, ಬಿ.ಇ.ಎಸ್. ಕಾಲೇಜು ಮತ್ತು ಬೇಗೂರು ಶಾಖೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಎಲ್ಲಾ ಶಾಖೆಗಳಿಗೆ ಸ್ವಂತ ಕಟ್ಟಡ ಹೊಂದುವ ಉದ್ದೇಶದಿಂದ ಸೂಕ್ತ ನಿವೇಶನಗಳನ್ನು ಅನ್ವೇಷಣೆ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಸೂಕ್ತ ನಿವೇಶನ ತಮ್ಮ ಗಮನಕ್ಕೆ ಬಂದಲ್ಲಿ ಕಾರ್ಯದರ್ಶಿಯವರಿಗೆ ತಿಳಿಸಬೇಕೆಂದು ಕೋರಿದೆ.

**11. ಗಣಕೀಕರಣ:–**

ಬ್ಯಾಂಕಿನ ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದ್ದು ದೈನಂದಿನ ವ್ಯವಹಾರಗಳನ್ನು ಗಣಕಯಂತ್ರದಲ್ಲಿಯೇ ನಿರ್ವಹಿಸಲಾಗುತ್ತಿದೆ. ಇದರಿಂದ ಸದಸ್ಯರಿಗೆ ಮತ್ತು ಗ್ರಾಹಕರಿಗೆ ತ್ವರಿತ ಮತ್ತು ಉತ್ತಮ ಸೇವೆ ನೀಡಲು ಅನುಕೂಲವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನದ ಮೇರೆಗೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ದಿನಾಂಕ : 01.09.2015ರಿಂದ ಅಳವಡಿಸಿಕೊಂಡಿದ್ದು, ಎಲ್ಲಾ ವಹಿವಾಟುಗಳು ಸುಸೂತ್ರವಾಗಿ ನಡೆಯುತ್ತಿವೆ. ಇದರಿಂದ ಮಾನ್ಯ ಸದಸ್ಯರು/ಗ್ರಾಹಕರುಗಳು ಬ್ಯಾಂಕಿನ ಯಾವುದೇ ಶಾಖೆಯಲ್ಲಿ ವ್ಯವಹರಿಸಬಹುದು.

ಅಲ್ಲದೆ ಬ್ಯಾಂಕು NEFT/RTGS ಸೌಲಭ್ಯ ಒದಗಿಸುತ್ತಿದೆ. ATM (Rupay Card) ಡೆಬಿಟ್ ಕಾರ್ಡ್‌ನ್ನು ಸದಸ್ಯರಿಗೆ/ಗ್ರಾಹಕರಿಗೆ ವಿತರಿಸಲಾಗುತ್ತಿದೆ. ಈ ಎಲ್ಲಾ ಸೇವೆ/ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಮಾನ್ಯ ಸದಸ್ಯರಲ್ಲಿ ವಿನಂತಿಸಿದೆ.

**12. ಲಾಕರ್‌ಗಳು :–**

ಬ್ಯಾಂಕಿನ ಪ್ರಧಾನ ಶಾಖೆ – ಜಯನಗರ, ಯಲಹಂಕ ಶಾಖೆ, ವಿಜಯನಗರ ಶಾಖೆ, ಕೆಂಗೇರಿ ಶಾಖೆ, ಮತ್ತೀಕೆರೆ ಶಾಖೆ, ಬಿ.ಇ.ಎಸ್. ಕಾಲೇಜು ಶಾಖೆ ಮತ್ತು ಬೇಗೂರು ಶಾಖೆಗಳಲ್ಲಿ ವಿವಿಧ ಗಾತ್ರದ ಸೇಫ್ ಡೆಪಾಸಿಟ್ ಲಾಕರ್ಸ್ ಸೌಲಭ್ಯ ದೊರೆಯುತ್ತದೆ. ಸದಸ್ಯರುಗಳು ಈ ಸೌಲಭ್ಯ ಉಪಯೋಗಿಸಿಕೊಳ್ಳಲು ಕೋರಲಾಗಿದೆ.

**13. ಬ್ಯಾಂಕಿನ ಶಾಸನಬದ್ದ ಲೆಕ್ಕಪರಿಶೋಧನಾ ವ್ಯವಸ್ಥೆ :**

2018–19ನೇ ಸಾಲಿನ ಸರ್ವಸದಸ್ಯರ ಸಭೆಯು ಆಯ್ಕೆ ಮಾಡಿದ್ದ ಮೆಸರ್ಸ್ ಪಂಪಣ್ಣ ಅಂಡ್ ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್‌ರವರಿಂದ ಲೆಕ್ಕ ಪರಿಶೋಧನೆಯಾಗಿರುತ್ತದೆ.

**14. ಪ್ರತ್ಯೇಕ ಆಂತರಿಕ ಲೆಕ್ಕಪರಿಶೋಧನಾ ವಿಭಾಗ :–**

ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನಾ ಉಪಸಮಿತಿಯ ಕ್ರಿಯಾಶೀಲತೆಯನ್ನು ಹೆಚ್ಚಿಸಿ, ಬ್ಯಾಂಕಿನಲ್ಲಿ ಇತರೆ ಉಪಸಮಿತಿಗಳ ಜೊತೆಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಲೆಕ್ಕಪರಿಶೋಧನಾ ಸಮಿತಿಯ ಕಾರ್ಯ ಚಟುವಟಿಕೆಗಳು, ಭಾರತೀಯ ರಿಸರ್ವ್ ಬ್ಯಾಂಕ್ ಹಾಕಿರುವ ಮಾರ್ಗ ಸೂಚಿಗಳನ್ವಯ ನಿರ್ವಹಿಸುವ ಬಗ್ಗೆ ಕ್ರಮ ತೆಗೆದುಕೊಂಡು ಶಾಖಾ ಪರಿವೀಕ್ಷಣೆ ಮಾಡಿ ವರದಿಯನ್ನು ಕಾರ್ಯಕಾರಿ ಮಂಡಳಿಗೆ ಸಲ್ಲಿಸಲಾಗುತ್ತಿದೆ.

**15. ಸಿಬ್ಬಂದಿ :–**

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯು ಸಿಬ್ಬಂದಿ ವರ್ಗಕ್ಕೆ ಅನ್ವಯಿಸುವ ಎಲ್ಲಾ ಭತ್ಯೆಗಳನ್ನು ನೀಡುತ್ತಿದೆ. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಶಿಫಾರಸ್ಸು ಮಾಡಿರುವ 7ನೇ ವೇತನ ಆಯೋಗದ ವರದಿ ಅನ್ವಯ ಬ್ಯಾಂಕಿನ ಸಿಬ್ಬಂದಿಗಳಿಗೆ ವೇತನ ಶ್ರೇಣಿಗಳನ್ನು ನೀಡಿ ಇದನ್ನು ಅನುಷ್ಠಾನಗೊಳಿಸಿದೆ. ಸಿಬ್ಬಂದಿ ವರ್ಗಕ್ಕೆ ಕಡಿಮೆ ಬಡ್ಡಿದರದಲ್ಲಿ ಮನೆ ಸಾಲದ ಗರಿಷ್ಠ ಮಿತಿಯನ್ನು ರೂ.50 ಲಕ್ಷಗಳವರೆಗೆ, ಸಿಬ್ಬಂದಿ ಸಾಲವನ್ನು ರೂ.5 ಲಕ್ಷಗಳವರೆಗೂ ಮತ್ತು ವಾಹನ ಸಾಲದ ಗರಿಷ್ಠಮಿತಿಯನ್ನು ರೂ.5 ಲಕ್ಷಗಳವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲಾ ಸಿಬ್ಬಂದಿ ಮತ್ತು ಕುಟುಂಬ ವರ್ಗದವರಿಗೆ ವೈದ್ಯಕೀಯ ವಿಮಾ ಸೌಲಭ್ಯ ಗರಿಷ್ಠ ಮಿತಿ ರೂ.1,00,000/– ಗಳವರೆಗೆ ಕಲ್ಪಿಸಲಾಗಿದೆ.

**16. 2020-21ನೇ ಸಾಲಿನ ಕಾರ್ಯಕ್ರಮದ ಪರಿಗಣನೆ :–**

2020-21ನೇ ಸಾಲಿನಲ್ಲಿ ಈ ಕೆಳಕಂಡವುಗಳನ್ನು ಅನುಷ್ಠಾನಕ್ಕೆ ತರಲು ಕಾರ್ಯಯೋಜನೆ ರೂ ಸಲಾಗಿದೆ.

1) ಇನ್ನೂ ಹೆಚ್ಚಿನ ಠೇವಣಿಗಳನ್ನು ಸಂಗ್ರಹಿಸಿ ಹೆಚ್ಚಿನ ಸಾಲಗಳನ್ನು ನೀಡುವುದು.

2) ಒಟ್ಟು ವಹಿವಾಟು (Total Business) ಅನ್ನು ಕನಿಷ್ಠ ಶೇ.25ರಷ್ಟು ಪ್ರಗತಿ ಸಾಧಿಸುವುದು.

3) ಒಟ್ಟು ಎನ್. .ಎ ಪ್ರಮಾಣವನ್ನು ಶೇ.3ಕ್ಕಿಂತ ಕಡಿಮೆಗೆ ತರುವುದು.

4) ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಅನುಷ್ಠಾನಕ್ಕೆ ತರುವುದು.

5) ಸದಸ್ಯರು/ಗ್ರಾಹಕರು, ಅಂತರ್ಜಾಲ (Internet) ಮೂಲಕ ಬಿಲ್‌ಗಳು ಮತ್ತು ಇತರೆ ಖರ್ಚುಗಳನ್ನು ಪಾವತಿಸಲು ಅನುಷ್ಠಾನಗೊಳಿಸುವುದು.

**ಕೃತಜ್ಞತೆಗಳು :**

ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಅಮೂಲ್ಯವಾದ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಆಡಿಟ್ ಇಲಾಖೆ, ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆಸರ್ಸ್ ಪಂಪಣ್ಣ ಅಂಡ್ ಕಂಪನಿ, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಅಪೆಕ್ಸ್ ಬ್ಯಾಂಕ್, ಸಂಘ–ಸಂಸ್ಥೆಗಳು, ಎಲ್ಲಾ ಠೇವಣಿದಾರರು, ಗ್ರಾಹಕರು, ಸದಸ್ಯರು ಮತ್ತು ಬ್ಯಾಂಕಿನ ಪುರೋಭಿವೃದ್ಧಿಗೆ ಎಲ್ಲಾ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಬ್ಯಾಂಕಿನ ಸಂಸ್ಥಾಪಕರು ಮತ್ತು ಮಾಜಿ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಎಲ್. ಲಕ್ಕೇಗೌಡರವರು ಮತ್ತು ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೂಡ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸ್ಥಳ : ಬೆಂಗಳೂರು

**ಅಮೃತ ಡಿ. ಎ.**

ದಿನಾಂಕ : 1.12.2020

ಕಾರ್ಯದರ್ಶಿ

## 2019-20ನೇ ಸಾಲಿನಲ್ಲಿ ಆಗಿರುವ ಖರ್ಚಿನ ವಿವರ, 2020-21 ನೇ ಸಾಲಿನ ಅನುಮೋದಿತ ಬಡ್ಜೆಟ್ ಮತ್ತು 2021-22ನೇ ಸಾಲಿನ ಅಂದಾಜು ಬಡ್ಜೆಟ್ ವಿವರಗಳು

(ಮೊತ್ತ ರೂ.ಗಳಲ್ಲಿ)

| ಕ್ರ.ಸ. | ಲೆಕ್ಕದ ಶೀರ್ಷಿಕೆ | 2019–20ನೇ ಸಾಲಿನ ಅನುಮೋದಿತ ಬಡ್ಜೆಟ್ | 2019–20ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು | 2019–20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2020–21ನೇ ಸಾಲಿನ ಅನುಮೋದಿತ ಬಡ್ಜೆಟ್ | 2021–22ನೇ ಸಾಲಿನ ಅಂದಾಜು ಬಡ್ಜೆಟ್ |
|---|---|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 370000000 | 308369484.00 | = | 380000000 | 370,000,000 |
| 2 | ಸಿಬ್ಬಂದಿ ವೇತನ ಮತ್ತು ಭತ್ಯೆ ಹಾಗೂ ಸಿಬ್ಬಂದಿ ಭವಿಷ್ಯ ನಿಧಿ | 95000000 | 90735999.00 | – | 100000000 | 120000000 |
| 3 | ಅ) ಅಂಚೆ | 200000 | 67195.00 | – | 200000 | 200000 |
| | ಆ) ದೂರವಾಣಿ | 500000 | 210603.62 | – | 500000 | 500000 |
| 4 | ಅ) ಮುದ್ರಣ ಮತ್ತು ಲೇಖನ ಸಾಮಗ್ರಿ | 800000 | 372252.82 | – | 900000 | 800000 |
| | ಆ) ಕಂಪ್ಯೂಟರ್ ಸ್ಟೇಷನರಿ | 200000 | 70940.00 | – | 300000 | 300000 |
| 5 | ಸಾದಿಲ್ವಾರು ಮತ್ತು ಮೀಟಿಂಗ್ ಖರ್ಚು | 550000 | 407783.00 | – | 550000 | 600000 |
| 6 | ನೀರು ಮತ್ತು ವಿದ್ಯುಚಕ್ತಿ | 1200000 | 1029964.76 | – | 1300000 | 1500000 |
| 7 | ತೆರಿಗೆ ಮತ್ತು ವಿಮೆ | 6500000 | 5047570.58 | – | 7000000 | 7500000 |
| 8 | ಜಾಹೀರಾತು | 300000 | 78800.50 | – | 300000 | 300000 |
| 9 | ಕಾನೂನು ಮತ್ತು ತಾಂತ್ರಿಕ ವೆಚ್ಚ | 500000 | 301500.00 | – | 600000 | 600000 |
| 10 | ಉಠೋಪಕರಣಗಳ ದುರಸ್ತಿ | 100,000 | 21384.50 | – | 100000 | 100000 |
| 11 | ಕಟ್ಟಡ ದುರಸ್ತಿ | 1500000 | 132328.32 | – | 1500000 | 2000000 |
| 12 | ಮಹಾಸಭೆಯ ಖರ್ಚು | 1500000 | 888440.24 | – | 1500000 | 1500000 |
| 13 | ಸಿಬ್ಬಂದಿ ಪ್ರಯಾಣ ಭತ್ಯೆ | 300000 | 123120.00 | – | 300000 | 300000 |
| 14 | ಧರ್ಮೋದ್ದೇಶಗಳ ವಂತಿಗೆ | 100000 | - | – | 100000 | 100000 |
| 15 | ದಿನಪತ್ರಿಕೆ ಮತ್ತು ವಾರ ಪತ್ರಿಕೆ | 50000 | 26304.00 | – | 50000 | 50000 |
| 16 | ಭಾರತೀಯ ನಿತ್ಯ ನಿಧಿ ಸಂಗ್ರಹಣಾ ವೆಚ್ಚ | 1000000 | 554213.00 | – | 1000000 | 800000 |

| | | | | | | |
|---|---|---|---|---|---|---|
| 17 | ನಿರ್ದೇಶಕರ ಉಪಾಸಿತ ಮತ್ತು ಪ್ರಯಾಣ ಭತ್ಯೆ | 2500000 | 1422000.00 | | 2500000 | 2500000 |
| 18 | ಕಟ್ಟಡ ಬಾಡಿಗೆ | 3000000 | 2,480,644.00 | | 3500000 | 3500000 |
| 19 | ಸಿಬ್ಬಂದಿ ತರಭೇತಿ ವೆಚ್ಚ | 200000 | - | | 200000 | 100000 |
| 20 | ಕಂಪ್ಯೂಟರ್ ಮ್ಯೆಂಟೆನನ್ಸ್‌ಗಾಗಿ | 1000000 | 1012846.70 | 12846.70 | 1500000 | 1500000 |
| 21 | ಬ್ಯಾಂಕಿನ ವಾಹನಗಳ ಮ್ಯೆಂಟೆನನ್ಸ್‌ಗಾಗಿ | 200000 | 119391.41 | | 200000 | 200000 |
| 22 | ಯು. .ಎಸ್. ಮತ್ತು ಬ್ಯಾಟರೀಸ್‌ಗಾಗಿ | 300000 | 152000.00 | | 300000 | 300000 |
| 23 | ಜನ್ರೇಟರ್ ಮ್ಯೆಂಟೆನನ್ಸ್‌ಗಾಗಿ | 200000 | 64046.46 | | 200000 | 200000 |
| 24 | ಸೆಕ್ಯೂರಿಟಿ ಗಾರ್ಡ್ ವೇತನ | 3000000 | 2381901.00 | | 3000000 | 3000000 |
| 25 | M I C R ಕ್ಲಿಯರಿಂಗ್ ಚಾರ್ಜಸ್ | 400000 | 209060.44 | | 400000 | 400000 |
| 26 | ಹೊಸ ಕಟ್ಟಡದ /ಕಂಪ್ಯೂಟರ್ ಉದ್ಘಾಟನೆ | 500000 | - | | 500000 | 500000 |
| 27 | ದಾವೆ / ಅಮಲ್ದಾರಿ ಖರ್ಚು | 600000 | 1717427.00 | 1,117,427.00 | 700000 | 2000000 |
| 28 | ಆಡಿಟ್ ವೆಚ್ಚ | 400000 | - | | 300000 | 100000 |
| 29 | ಪಟ್ಟಣ ಬ್ಯಾಂಕುಗಳ ವಂತಿಗೆ | 200000 | 111900.00 | | 200000 | 200000 |
| 30 | AMC ಚಾರ್ಜಸ್ | 300000 | 269501.98 | | 400000 | 400000 |
| 31 | CBS ಇಂಟರ್‌ನೆಟ್ ಚಾರ್ಜಸ್ | 500000 | 146917.65 | | 500000 | 400000 |
| 32 | ಠೇವಣಿ ಸಂಗ್ರಹಣಾ ವೆಚ್ಚ | 50000 | - | | 50000 | 50000 |
| 33 | ATM/IMPS ಅಳವಡಿಕೆಗಾಗಿ ಖರ್ಚು | 1000000 | 211427.00 | | 1000000 | 500000 |
| 34 | ಇತರೆ ಖರ್ಚುಗಳು | 800000 | 433520.47 | | 1000000 | 1000000 |
| 35 | ಸಹಕಾರ ಸಪ್ತಾಹ | 100000 | - | | 300000 | 200000 |
| 36 | ರಾಜ್ಯ ಸರ್ಕಾರಿ ಸೇವಾ ತೆರಿಗೆ | - | 804862.92 | 804862.92 | - | - |
| 37 | ಕೇಂದ್ರ ಸರ್ಕಾರಿ ಸೇವಾ ತೆರಿಗೆ | - | 804886.18 | 804886.18 | - | - |
| 38 | ಸಂಯೋಜಿತ ಸೇವಾ ತೆರಿಗೆ | -- | 552757.14 | 552757.14 | - | - |
| 39 | Disaster Recovery Monthly Storage Cost | -- | 300000.00 | 300000.00 | - | - |
| 40 | ಆಡಳಿತ ಮಂಡಳಿಯ ಚುನಾವಣೆ ಖರ್ಚು | | 3802133.08 | 3802133.08 | - | - |
| | ಒಟ್ಟು | **495550000** | **425435106.77** | **7394913.02** | **515650000** | **524200000** |

## 2019-20ನೇ ಸಾಲಿನಲ್ಲಿ ಅನುಮೋದಿತ ಬಡ್ಜೆಟ್‌ಗಿಂತ ಹೆಚ್ಚಿಗೆ ಖರ್ಚಾಗಿರುವುದಕ್ಕೆ ವಿವರಣೆ/ಕಾರಣ:–

| ಕ್ರ.ಸ. | ಲೆಕ್ಕದ ಶೀರ್ಷಿಕೆ | 2019-20ನೇ ಸಾಲಿನಲ್ಲಿ ಅನುಮೋದಿತ ಬಡ್ಜೆಟ್ | 2019-20ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು | ಹೆಚ್ಚಿಗೆ ಖರ್ಚಾದದ್ದು | ಹೆಚ್ಚಿಗೆ ಖರ್ಚಾಗಿರುವುದಕ್ಕೆ ವಿವರಣೆ / ಕಾರಣ |
|---|---|---|---|---|---|
| 20 | ಕಂಪ್ಯೂಟರ್ ಮೈಂಟನೆನ್ಸ್/AMC | 1000000 | 1012846.70 | 12846.70 | ಎ.ಎಂ.ಸಿ. ವಾರ್ಷಿಕ ನಿರ್ವಹಣಾ ಮೊತ್ತ ಹೆಚ್ಚಾಗಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ |
| 27 | ದಾವೆ/ಅಮಲ್ಜಾರಿ ಖರ್ಚು | 600000 | 1717427.00 | 1117427.00 | ಸುಸ್ತಿ ಸಾಲಗಾರರ ಮೇಲೆ ದಾವೆ ಹೂಡಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ. |
| 39 | Disaster Recovery Monthly Storage Cost | | 300000.00 | 300000.00 | ಕಂಪ್ಯೂಟರ್ ಡಾಟದ ನಷ್ಟ ಮತ್ತು ಆಕಸ್ಮಿಕ ವಿಪತ್ತುಗಳನ್ನು ತಡೆಯಲು Disaster Recovery ಅಳವಡಿಸಿಕೊಂಡಿದ್ದು, Monthly Storage Cost ಪಾವತಿಸಬೇಕಾಗಿರುವುದರಿಂದ ಈ ಬಾಬ್ತಿನಲ್ಲಿ ವೆಚ್ಚವಾಗಿರುತ್ತದೆ. |
| 40 | ಆಡಳಿತ ಮಂಡಳಿಯ ಚುನಾವಣೆ ಖರ್ಚು | | 3802133.08 | 3802133.08 | ಆಡಳಿತ ಮಂಡಳಿಗೆ ಚುನಾವಣೆ ನಡೆದುದ್ದರಿಂದ ಖರ್ಚಾಗಿರುತ್ತದೆ. |

## 2019-20ನೇ ಸಾಲಿನಲ್ಲಿ ಆಗಿರುವ ಒಟ್ಟು ಆದಾಯ, 2020-21ನೇ ಸಾಲಿನ ಅನುಮೋದಿತ ಆದಾಯ ಮತ್ತು 2021-22ನೇ ಸಾಲಿನ ಅಂದಾಜು ಆದಾಯ

| ಕ್ರ.ಸ. | ಲೆಕ್ಕದ ಶೀರ್ಷಿಕೆ | 2019-20ನೇ ಸಾಲಿನ ಅನುಮೋದಿತ ಆದಾಯ | 2019-20ನೇ ಸಾಲಿನಲ್ಲಿ ಆದ ವಾಸ್ತವಿಕ ಆದಾಯ | 2020-21ನೇ ಸಾಲಿನ ಅನುಮೋದಿತ ಆದಾಯ | 2021-22ನೇ ಸಾಲಿನ ಅಂದಾಜು ಆದಾಯ |
|---|---|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 380000000 | 369578885.21 | 400000000 | 400000000 |
| 2 | ಸಂಚಯಗಳ ಮೇಲಿನ ಬಡ್ಡಿ | 150000000 | 95365496.78 | 150000000 | 140000000 |
| 3 | ಇತರೆ ಜಮಾ | 20000000 | 10394458.68 | 20000000 | 20000000 |
| | ಒಟ್ಟು | 550000000 | 475338840.67 | 570000000 | 560000000 |

## 2019-20ನೇ ಸಾಲಿನಲ್ಲಿ ಕ್ಯಾ ಟಲ್ ಬಡ್ಜೆಟ್‌ನಲ್ಲಿ ಆಗಿರುವ ಖರ್ಚಿನ ವಿವರ, 2020-21ನೇ ಸಾಲಿನ ಅನುಮೋದಿತ ಬಡ್ಜೆಟ್ ಮತ್ತು 2021-22ನೇ ಸಾಲಿನ ಅಂದಾಜು ಬಡ್ಜೆಟ್

| ಕ್ರ.ಸ. | ಲೆಕ್ಕದ ಶೀರ್ಷಿಕೆ | 2019-20ನೇ ಸಾಲಿನಲ್ಲಿ ಅನುಮೋದಿತ ಖರ್ಚು | 2019-20ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು | 2019-20ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾಗಿರುವುದು | 2020-21ನೇ ಸಾಲಿನಲ್ಲಿ ಅನುಮೋದಿತ ಖರ್ಚು | 2021-22ನೇ ಸಾಲಿನಲ್ಲಿ ಅಂದಾಜು ಖರ್ಚು |
|---|---|---|---|---|---|---|
| 1 | ೀಠೋಪಕರಣಗಳು ಮತ್ತು ಕಛೇರಿ ಉಪಕರಣಗಳು | 3000000 | 300462.46 | - | 5000000 | 5000000 |
| 2 | ಗಣಕೀಕರಣಕ್ಕಾಗಿ, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ | 5000000 | 345000.00 | - | 5000000 | 5000000 |
| 3 | ಶಾಖೆಗಳಿಗೆ ನಿವೇಶನ ಖರೀದಿಸಲು | 30000000 | - | - | 40000000 | 50000000 |
| | ಒಟ್ಟು | 38000000 | 645462.46 | - | 50000000 | 60000000 |

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಜಯನಗರ, ಬೆಂಗಳೂರು - 560 011

## ಬೈಲಾ ತಿದ್ದುಪಡಿಗಳು

| ಬೈಲಾ ಸಂಖ್ಯೆ | ಹಾಲಿ ಇರುವ ಬೈಲಾ | ಅನುಮೋದನೆಗಾಗಿ ಮಂಡಿಸಿರುವ ಉದ್ದೇಶಿತ ಬೈಲಾ ತಿದ್ದುಪಡಿ | ಬೈಲಾ ತಿದ್ದುಪಡಿಗೆ ಕಾರಣಗಳು |
|---|---|---|---|
| **4.**<br>4.34 | **ಪದಗಳ ಅರ್ಥ ವಿವರಣೆ:**<br>ಹೊಸ ಸೇರ್ಪಡೆ | **4. ಪದಗಳ ಅರ್ಥ ವಿವರಣೆ:**<br>4.34"ವ್ಯವಸ್ಥಾಪನಾ ಮಂಡಳಿ" ಎಂದರೆ, ಬ್ಯಾಂಕಿನ ಆಡಳಿತ ನಿರ್ವಹಣಾ ನಿಕಾಯುವಾಗಿದ್ದು, ಬ್ಯಾಂಕಿಂಗ್‌ನಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವಿಗಳನ್ನು ಒಳಗೊಂಡಿದ್ದು, ಮಂಡಳಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಲು ಸಹಕರಿಸುವುದು ಮತ್ತು ಬ್ಯಾಂಕಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ವೃತ್ತಿಪರವಾಗಿ ನಿರ್ವಹಿಸಲು ಹಾಗೂ ಕೇಂದ್ರೀಕೃತ ಗಮನ ಹರಿಸುವಂತೆ ಸುಗಮ ಮಾರ್ಗ ಮಾಡುವುದು ಎಂದಾಗಿದೆ. | ಆರ್.ಬಿ.ಐ ಸುತ್ತೋಲೆ ಸಂಖ್ಯೆ. DoR (PCB.BPD Cir No.8/2. 05.002/20 19-20 ದಿನಾಂಕ: 31.12.2019 ರಂತೆ ವ್ಯವಸ್ಥಾಪನಾ ಮಂಡಳಿ ರಚನೆಗಾಗಿ |
| **50.**<br>50.10 | **ಮಂಡಳಿಯ ಸಭೆಗಳು:**<br>ಮಂಡಳಿ ಮತ್ತು ಉಪಸಮಿತಿಗಳ ಸಭೆಗಳನ್ನು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿ ನಡೆಸತಕ್ಕದ್ದು. | **50.ಮಂಡಳಿಯ ಸಭೆಗಳು:**<br>50.10 ಆಡಳಿತ ಮಂಡಳಿ, ವ್ಯವಸ್ಥಾಪನಾ ಮಂಡಳಿ, ಹಾಗೂ ಉಪಸಮಿತಿಗಳ ಸಭೆಗಳು ಬ್ಯಾಂಕಿನ ನೋಂದಾಯಿತ ಕಛೇರಿಯಲ್ಲಿಯೆ ನಡೆಯತಕ್ಕದ್ದು. | |
| **58.**<br>58.3 | **ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**<br>(ಬಿ.ಜಿ) ನಂತರ ಹೊಸ ಸೇರ್ಪಡೆ | **58.ಮಂಡಳಿಯ ಕರ್ತವ್ಯಗಳು ಮತ್ತು ಅಧಿಕಾರಗಳು:**<br>58.3 (ಬಿಹೆಚ್) ಸಾಮಾನ್ಯವಾಗಿ ಈ ಹಿಂದೆ ಹೇಳಿದವುಗಳಿಗೆ ಪೂರ್ವಾಗ್ರಹವಾಗದಂತೆ, ಅಂಥ ಅಧಿಕಾರಗಳು ಹಾಗೂ ಕರ್ತವ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು. | |
| 58.4<br>ಎ) | | 58.4ಎ) **ವ್ಯವಸ್ಥಾಪನಾ ಮಂಡಳಿ ರಚನೆ, ನೇಮಕಾತಿ ವಿಧಾನ ಮತ್ತು ಸದಸ್ಯರ ಅರ್ಹತೆಗಳು:**<br>i) ಆಡಳಿತ ಮಂಡಳಿಯು ವ್ಯವಸ್ಥಾಪನಾ ಮಂಡಳಿಗೆ ಸದಸ್ಯರುಗಳನ್ನು ನೇಮಕ ಮಾಡಲಡಲು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ನಮೂನೆ - ಙಿರಲ್ಲಿ ವಾಗ್ದಾನ/ಮುಚ್ಚಳಿಕೆ ಸಮೇತ ಘೋಷಣಾ ಅರ್ಜಿಗಳನ್ನು ಪಡೆದುಕೊಂಡು ವಿವೇಚನಾಯುಕ ಪ್ರಕ್ರಿಯೆಯಿಂದ ಸದಸ್ಯರಾಗಬಯಸುವವರ ವಿದ್ಯಾರ್ಹತೆ, ಪರಿಣತಿ, ಹಿನ್ನಲೆ,ಸಮಗ್ರತೆ, ದೂರದೃಷ್ಟಿ ಮತ್ತು "ಯೋಗ್ಯತೆಗೆ ತಕ್ಕ ಮಾನದಂಡ" ಗಳನ್ನು ಹೊಂದಿರುವ ವ್ಯಕ್ತಿಗಳನ್ನು ಪರಿಶೀಲಿಸಿ ಸದಸ್ಯರುಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. | |

ii) ವಿದ್ಯಾರ್ಹತೆ ಮಾನದಂಡಕ್ಕಾಗಿ ಈ ಕೆಳಗೆ ಹೇಳಿದವುಗಳ ಪೈಕಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ವಿಶೇಷ ಜ್ಞಾನ ಹಾಗೂ ನುರಿತ ಅನುಭವದ ಸೂಕ್ತತೆ ಹೊಂದಿರುವ ಐದು (5) ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಮಂಡಳಿ ಇರತಕ್ಕದ್ದು.

ಎ) ಲೆಕ್ಕಶಾಸ್ತ್ರ
ಬಿ) ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆ
ಸಿ) ಬ್ಯಾಂಕಿಂಗ್
ಡಿ) ಸಹಕಾರ
ಇ) ಅರ್ಥಶಾಸ್ತ್ರ
ಎಫ್) ಹಣಕಾಸು
ಜಿ) ಕಾನೂನು
ಹೆಚ್) ಸಣ್ಣ ಕೈಗಾರಿಕೆ
ಐ) ಮಾಹಿತಿ ತಂತ್ರಜ್ಞಾನ
ಜೆ) ಭಾರತೀಯ ರಿಸರ್ವ್ ಬ್ಯಾಂಕಿನ ಅಭಿಪ್ರಾಯದಂತೆ ಸಹಕಾರ ಬ್ಯಾಂಕುಗಳಿಗೆ ಉಪಯುಕ್ತವಾಗುವ ಇನ್ನಿತರೆ ವಿಶೇಷ ಜ್ಞಾನ.

ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು 35 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 70ವರ್ಷ ಮೀರದ ವಯೋಮಿತನಾಗಿರುವವರಿಗೆ ಆದ್ಯತೆ.

iii) ತಕ್ಷಣದ ಅವಧಿಯ ಹಿಂದಿನ ಮೂರು ವರ್ಷಗಳಲ್ಲಿ ಬ್ಯಾಂಕಿನೊಂದಿಗೆ ವ್ಯವಹಾರಿಕ ಸಂಬಂಧ ಹೊಂದಿದ್ದ ಯಾವುದೇ ವ್ಯಕ್ತಿ ಸದಸ್ಯನಾಗಲು ಅರ್ಹನಾಗಿರತಕ್ಕುದಲ್ಲ. ಈ ಉದ್ದೇಶಕ್ಕಾಗಿ ಬ್ಯಾಂಕಿನೊಂದಿಗೆ ಠೇವಣಿ ಹೊಂದಿರುವ ವ್ಯಕ್ತಿಯನ್ನು ವ್ಯವಹಾರಿಕ ಸಂಬಂಧ ಹೊಂದಿದವನೆಂದು ವರ್ಗೀಕರಿಸುವಂತಿಲ್ಲ.

iv) ಮೇಲೆ ತಿಳಿಸಿದ ಮಾನದಂಡಗಳನ್ನು ಪೂರೈಸುತ್ತಿದ್ದಲ್ಲಿ ಶೇ 50ರಷ್ಟು ಮೀರದಂತೆ ವ್ಯವಸ್ಥಾಪನಾ ಮಂಡಳಿಗೆ ಕನಿಷ್ಠ ಮೂರು ಸದಸ್ಯರುಗಳನ್ನು ಆಡಳಿತ ಮಂಡಳಿ ಸದಸ್ಯರಿಂದ ಮತ್ತು ಇಬ್ಬರು ಸದಸ್ಯರುಗಳನ್ನು ಆಡಳಿತ ಮಂಡಳಿ ಸದಸ್ಯರಲ್ಲದವರನ್ನು ನೇಮಿಸಿಕೊಳ್ಳಬಹುದು.

v) ಆಡಳಿತ ಮಂಡಳಿಯಿಂದ ಪಡೆದುಕೊಂಡ ಸದಸ್ಯನನ್ನು ಹೊರತುಪಡಿಸಿ ವ್ಯವಸ್ಥಾಪನಾ ಮಂಡಳಿಯ ಸದಸ್ಯನ ಕಾರ್ಯವ್ಯಾಪ್ತಿಯು ಒಂದಕ್ಕೊಂದು ತಳುಕುಬಳುಕಾಗದಂತಹ ಒಂದಕ್ಕಿಂತ ಹೆಚ್ಚು ಗರಿಷ್ಠ ಮೂರು ಬ್ಯಾಂಕುಗಳ ವ್ಯವಸ್ಥಾಪನಾ ಮಂಡಳಿಯ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರುತ್ತಾನೆ.

vi) ಮುಖ್ಯ ಕಾರ್ಯನಿರ್ವಾಹಕನು ಮತದಾನದ ಹಕ್ಕಿಲ್ಲದ ಪದನಿಮಿತ್ತ ಸದಸ್ಯನಾಗಿರುತ್ತಾನೆ.

vii) ಕಾಯ್ದೆ ಹಾಗೂ ನಿಯಮಗಳಲ್ಲಿ ಆಡಳಿತ ಮಂಡಳಿ ಸದಸ್ಯನಿಗೆ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳು ವ್ಯವಸ್ಥಾಪನಾ ಮಂಡಳಿಯ ಸದಸ್ಯನಿಗೂ ಅನ್ವಯವಾಗುತ್ತವೆ.

viii) ವ್ಯವಸ್ಥಾಪನಾ ಮಂಡಳಿಯ ಅವಧಿಯು ಆಡಳಿತ ಮಂಡಳಿ ಅವಧಿಯೊಂದಿಗೆ ಜೊತೆಜೊತೆಯಾಗಿ ಮುಕ್ತಾಯವಾಗುತ್ತದೆ.

ix) ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನು ರಿಸರ್ವ್ ಬ್ಯಾಂಕ್ ನಿರ್ದಿಷ್ಟಪಡಿಸಿದ ಮಾನದಂಡಗಳನ್ನು ಪೂರೈಸುತ್ತಿಲ್ಲದಿದ್ದಲ್ಲಿ, ಅಥವಾ ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವಂತೆ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂಥ ಸದಸ್ಯನನ್ನು ರಿಸರ್ವ್ ಬ್ಯಾಂಕು ವಜಾ ಮಾಡುವ ಅಧಿಕಾರ ಹೊಂದಿರತಕ್ಕದ್ದು.

ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನನ್ನು ವಜಾ ಮಾಡುವ ಪೂರ್ವದಲ್ಲಿ, ವ್ಯವಸ್ಥಾಪನಾ ಮಂಡಳಿಯ ಯಾವುದೇ ಸದಸ್ಯನು ನೀಡಿದ ರಾಜೀನಾಮೆ ಅಂಗೀಕರಿಸುವ ಪೂರ್ವದಲ್ಲಿ, ಆಡಳಿತ ಮಂಡಳಿಯು ರಿಸರ್ವ್ ಬ್ಯಾಂಕಿನ ಸಹಮತ ಪಡೆದುಕೊಳ್ಳತಕ್ಕದ್ದು. ವ್ಯವಸ್ಥಾಪನಾ ಮಂಡಳಿಯ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿದ್ದಲ್ಲಿ, ವ್ಯವಸ್ಥಾಪನಾ ಮಂಡಳಿಯನ್ನು ವಜಾ ಮಾಡುವ ಅಧಿಕಾರ ರಿಸರ್ವ್‌ಬ್ಯಾಂಕಿಗೆ ಇರತಕ್ಕದ್ದು. ವ್ಯವಸ್ಥಾಪನಾ ಮಂಡಳಿಯ ಸದಸ್ಯನನ್ನು ವಜಾ ಮಾಡಿದ ಅಥವಾ ವ್ಯವಸ್ಥಾಪನಾ ಮಂಡಳಿಯನ್ನು ಕಿತ್ತು ಹಾಕಿದ ನಂತರ ಆಡಳಿತ ಮಂಡಳಿಯು ಅಂತಹ ಯಾವುದೇ ಪ್ರಕರಣದಲ್ಲಿ ಮೂರು ತಿಂಗಳ ಅವಧಿಯೊಳಗಾಗಿ ಹೊಸ ಸದಸ್ಯನನ್ನು ನೇಮಕ ಮಾಡತಕ್ಕದ್ದು, ಅಥವಾ ಹೊಸ ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು, ಮಧ್ಯಂತರ ವ್ಯವಸ್ಥೆಯಾಗಿ ಆಡಳಿತ ಮಂಡಳಿಯು ವ್ಯವಸ್ಥಾಪನಾ ಮಂಡಳಿಯ ಕಾರ್ಯಗಳನ್ನು ನಿರ್ವಹಿಸಬಹುದು.

| | | | |
|---|---|---|---|
| 58.4 ಬಿ) | | 58.4 ಬಿ) **ವ್ಯವಸ್ಥಾಪನಾ ಮಂಡಳಿಯ ಕಾರ್ಯಗಳು ಮತ್ತು ಅಧಿಕಾರಗಳು ಈ ಕೆಳಗಿನವುಗಳನ್ನು ಒಳಗೊಂಡಿರತಕ್ಕದ್ದು.**<br>i) ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ ಸಾಲದ ಪ್ರಸ್ತಾಪಗಳನ್ನು ಪರಿಗಣಿಸುವುದು ಮತ್ತು ಸಾಲ ಸಮಿತಿ ಅಥವಾ ನಿರ್ದೇಶಕ ಮಂಡಳಿಗೆ ಅನುಮೋಧನೆಗೆ ಶಿಫಾರಸ್ಸು ಮಾಡುವುದು.<br>ii) ಅನುತ್ಪಾದಕ ಆಸ್ತಿಗಳ ವಸೂಲಾತಿಗೆ ಶಿಫಾರಸ್ಸು ಮಾಡುವುದು: ಏಕಕಾಲಿಕ ತಿರುವಳಿ ಅಥವಾ ರಾಜಿ ಸಂಧಾನದ ಮೂಲಕ.<br>iii) ನಿಧಿ ಮತ್ತು ಸಾಲಗಳ ನಿರ್ವಹಣೆ.<br>iv) ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ ಹೂಡಿಕೆ ಪ್ರಸ್ತಾಪಗಳನ್ನು ಪರಿಗಣಿಸುವುದು ಮತ್ತು ಹೂಡಿಕೆ ಸಮಿತಿ ಅಥವಾ ನಿರ್ದೇಶಕ ಮಂಡಳಿಯು ಅನುಮೋಧನೆಗೆ ಶಿಫಾರಸ್ಸು ಮಾಡುವುದು.<br>v) ಉತ್ತಮ ಆಂತರಿಕ ನಿಯಂತ್ರಣ ಮತ್ತು ವ್ಯವಸ್ಥೆಯನ್ನು ಅಳವಡಿಸುವುದು ಮತ್ತು ಅಪಾಯ ನಿರ್ವಹಣಾ ನೀತಿಯ ಸಿದ್ಧತೆ/ಅನುಷ್ಠಾನ.<br>vi) ಗಣಕೀಕರಣ ಮತ್ತು ತಂತ್ರಜ್ಞಾನ ಅಳವಡಿಕೆ ಮತ್ತು ಈ ಕುರಿತ ಮೇಲ್ವಿಚಾರಣೆ.<br>vii) ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಕಾರ್ಯ ನೋಡಿಕೊಳ್ಳುವುದು ಮತ್ತು ಅನುಸರಣೆ/ಅನುಪಾಲನಾ ಕಾರ್ಯಗಳು.<br>viii) ಗ್ರಾಹಕರ ಸೇವೆ, ದೂರುಗಳ ನಿರ್ವಹಣೆ/ಕುಂದು ಕೊರತೆ ಪರಿಹಾರ.<br>ix) ಆಡಳಿತ ಮಂಡಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳಂತೆ ನೀತಿ/ನಿಯಮ ರೂ ಸಲು ಸಹಾಯ ಮಾಡುವುದು ಅದರಲ್ಲೂ ಪ್ರಮುಖವಾಗಿ ಸಾಲ ನಿಯಮಾವಳಿಗಳು, ಹೂಡಿಕೆ ನೀತಿ, ವಸೂಲಾತಿ ನಿಯಮಾವಳಿಗಳು ಆಸ್ತಿ–ಭಾದ್ಯತೆ ನಿರ್ವಹಣೆ, ಸಂಕಷ್ಟ ನಿರ್ವಹಣೆ ಇತ್ಯಾದಿ. | |

| | | | |
|---|---|---|---|
| | | x) ಆಡಳಿತ ಮಂಡಳಿಯಿಂದ ನಿಯೋಜಿಸಲಾದ ಇನ್ನಿತರ ಯಾವುದೇ ಜವಾಬ್ದಾರಿಗಳು.<br>ವ್ಯವಸ್ಥಾಪನಾ ಮಂಡಳಿಯ ಶಿಫಾರಸ್ಸು ಕುರಿತು ನಿರ್ದೇಶಕ ಮಂಡಳಿ ಭಿನ್ನಾಭಿಪ್ರಾಯ ಹೊಂದಿದ್ದ ಪಕ್ಷದಲ್ಲಿ, ಅದು ಈ ಕುರಿತು ಸಕಾರಣವನ್ನು ಲಿಖಿತವಾಗಿ ದಾಖಲಿಸುವ ಮೂಲಕ ಕ್ರಮ ಜರುಗಿಸಬಹುದಾಗಿದೆ. | |
| 58.4 ಸಿ) | | 58.4 ಸಿ) **ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರ ಆಯ್ಕೆ ವಿಧಾನ ಮತ್ತು ಸಭೆಗಳು ಹಾಗೂ ಭತ್ಯೆಗಳು:–**<br>i) ವ್ಯವಸ್ಥಾಪನಾ ಮಂಡಳಿಯ ಚೇರಮನ್‌ನನ್ನು ಆಡಳಿತ ಮಂಡಳಿ ಅಥವಾ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಚೇರಮನ್ ಅನ್ನು ನೇಮಕ ಮಾಡಿಕೊಳ್ಳಬಹುದು. ಆದಾಗ್ಯೂ ಮಂಡಳಿಯ ಚೇರಮನ್ ಅನ್ನು ವ್ಯವಸ್ಥಾಪನಾ ಮಂಡಳಿಯ ಚೇರಮನ್‌ನನ್ನಾಗಿ ನೇಮಕ ಮಾಡತಕ್ಕದ್ದಲ್ಲ. ಸಭೆಗೆ ಚೇರಮನ್ ಗೈರುಹಾಜರಿದ್ದಲ್ಲಿ ವ್ಯವಸ್ಥಾಪನಾ ಮಂಡಲಿಯ ಸದಸ್ಯರು ತಮ್ಮೊಳಗೆ ಒಬ್ಬರನ್ನು ಸಭೆಯ ಚೇರಮನ್ ಆಗಿ ಆಯ್ಕೆ ಮಾಡಿಕೊಳ್ಳಬಹುದು.<br>ii) ವ್ಯವಸ್ಥಾಪನಾ ಮಂಡಳಿಯು ಬಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಅಗತ್ಯವಿದ್ದಾಗ, ಯಾವಾಗಲಾದರೂ ಸಭೆ ಸೇರಬಹುದು. ಆದರೆ, ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು. ಸಭೆಯು ಯಥಾವತ್ ನಡುವಳಿಕೆಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು. ಮತ್ತು ಅದನ್ನು ಮಂಡಳಿಯ ಸಭೆಗೆ ಮಂಡಿಸತಕ್ಕದ್ದು.<br>iii) ವ್ಯವಸ್ಥಾಪನಾ ಮಂಡಳಿಯ ಒಟ್ಟು ಸದಸ್ಯರ ಪೈಕಿ 2/3 ಸದಸ್ಯರು ಸಭೆಯ ಅಗತ್ಯ ಸಂಖ್ಯಾಬಲ (ಕೋರಂ) ಆಗಿರತಕ್ಕದ್ದು.<br>iv) ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸೇವೆಗಾಗಿ ಆಡಳಿತ ಮಂಡಳಿ ಸದಸ್ಯರಿಗೆ ಕಾಲಕಾಲಕ್ಕೆ ನೀಡುವ ಭತ್ಯೆ/ಸಭಾಭತ್ಯೆಗಳನ್ನು ಪಾವತಿಸಬಹುದು.<br>v) ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಸೇವೆಗಾಗಿ ಸಹಕಾರ ಬ್ಯಾಂಕುಗಳ ಉಪವಿಧಿಗಳಲ್ಲಿ ನಿಗದಿಪಡಿಸಲಾದ ಅಥವಾ ನಿರ್ದೇಶಕ ಮಂಡಳಿಯು ಅನುಮೋದನೆ ನೀಡಿರುವ ಸಭಾಭತ್ಯೆ/ಇತರೆ ಭತ್ಯೆಗಳನ್ನು ಪಾವತಿಸಬಹುದಾಗಿದೆ. | |

| | | | |
|---|---|---|---|
| 58.4 ಡಿ) | | 58.4 ಡಿ) **ಭಾರತೀಯ ರಿಸರ್ವ್ ಬ್ಯಾಂಕಿಗೆ ವರದಿ:–**<br>ಈ ಸಂಬಂಧ ಈ ಬ್ಯಾಂಕು ಅಂಥ ನೇಮಕ ಹೊಂದಿದ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗಳ ಮೇಲ್ವಿಚಾರಣಾ ವಿಭಾಗಕ್ಕೆ ಮಾಹಿತಿಗಾಗಿ ಮತ್ತು ದಾಖಲೆಗಾಗಿ ಸಲ್ಲಿಸಬೇಕು. ಇದಲ್ಲದೆ, ಪ್ರತಿ ವರ್ಷ ಡಿಸೆಂಬರ್ 31ಕ್ಕೆ ನಿಗದಿತ ಅವಧಿಯು ಪೂರ್ಣಗೊಂಡ 15 ದಿನಗಳೊಳಗೆ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗೆ ಅನುಬಂಧ 3 ರಂತೆ ಸಲ್ಲಿಸಬೇಕು. | |
| 63.4) | **ಮುಖ್ಯ ಕಾರ್ಯ ನಿರ್ವಾಹಕನ ನೇಮಕಾತಿ;**<br>ಮುಖ್ಯ ಕಾರ್ಯನಿರ್ವಾಹಕನು ಅಂಗೀಕೃತ ವಿಶ್ವವಿದ್ಯಾಲಯದಪದವಿ ಪಡೆದಿರುವಂತವನಾಗಿದ್ದು ಕಾಯ್ದೆಯ ಕಲಂ 29 ಜಿ ಪ್ರಕಾರ ಮಂಡಳಿಯಿಂದ ನೇಮಕವಾದ ಪೂರ್ಣಾವಧಿಯ ವೇತನ ಪಡೆಯುವ ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮತ್ತು ಮುಖ್ಯ ಆಡಳಿತಾಧಿಕಾರಿಯಾಗಿ ರತಕ್ಕದ್ದು.<br>ಮಂಡಳಿಯು ಆಗಿಂದಾಗ್ಗೆ ವಹಿಸುವ ಕರ್ತವ್ಯಗಳ ಜೊತೆಗೆ, ಆತನ ಕರ್ತವ್ಯ ಮತ್ತು ಅಧಿಕಾರಗಳು ಈ ಕೆಳಗಿನಂತೆ ಇರತಕ್ಕದ್ದು. | 63.4) **ಮುಖ್ಯ ಕಾರ್ಯನಿರ್ವಾಹಕನ ನೇಮಕಾತಿ:**<br>**ಎ)** ಮುಖ್ಯಕಾರ್ಯನಿರ್ವಾಹಕನು ಕಲಂ 29 ಜಿ ಪ್ರಕಾರ ಹಾಗೂ ಮಹಾಸಭೆ ಹಾಗೂ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಮಂಡಳಿಯಿಂದ ನೇಮಿಸಲ್ಪಟ್ಟ ಮುಖ್ಯ ಕಾರ್ಯನಿರ್ವಾಹಕ ಮತ್ತು ಮುಖ್ಯ ಆಡಳಿತಾತ್ಮಕ ಅಧಿಕಾರಿಯಾಗಿರತಕ್ಕದ್ದು. ರಿಸರ್ವ್ ಬ್ಯಾಂಕಿನಿಂದ ಅಂಥ ಅನುಮತಿಯನ್ನು ಪ್ರಸ್ತುತ ಮುಖ್ಯ ಕಾರ್ಯನಿರ್ವಾಹಕನ ಅವಧಿಯು ಮುಕ್ತಾಯವಾಗುವ ಕನಿಷ್ಠ ಮೂರು ತಿಂಗಳ ಮೊದಲು ಕೋರತಕ್ಕದ್ದು. ಅವನು ಇವುಗಳ ಸಮೇತ ಪದವೀಧರನಾಗಿರತಕ್ಕದ್ದು.<br>ಬಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ನೇಮಿಸಿಕೊಳ್ಳಲು ಆಡಳಿತ ಮಂಡಳಿಯು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ನಮೂನೆ–ಙರಲ್ಲಿ ವಾಗ್ದಾನ/ಮುಚ್ಚಳಿಕೆ ಸಮೇತ ಘೋಷಣಾ ಅರ್ಜಿಗಳ ದಾಖಲೆಗಳೊಂದಿಗೆ ಪಡೆದುಕೊಂಡು ದಾಖಲೆಪಟ್ಟಿಯಲ್ಲಿನ ದಾಖಲೆಗಳೊಂದಿಗೆ ವಿವೇಚನಾಯುಕ್ತ ಪ್ರಕ್ರಿಯೆಯಿಂದ ಅರ್ಜಿದಾರರ ವಿದ್ಯಾರ್ಹತೆ, ಪರಿಣಿತಿ, ಅನುಭವವನ್ನು "ಅರ್ಹತೆ ಮತ್ತು ಯೋಗ್ಯತೆ" ಅಳತೆಗೋಲುಗಳನ್ನು ಪೂರೈಸಿದಲ್ಲಿ ಹಾಗೂ ಈ ಕೆಳಗಿನ ವಿದ್ಯಾರ್ಹತೆಗಳನ್ನು ಹೊಂದಿದ್ದಲ್ಲಿ ಆಯ್ಕೆ ಮಾಡಿಕೊಳ್ಳತಕ್ಕದ್ದು. | |

| | | | |
|---|---|---|---|
| | | i) ಸಿಎಐಐಬಿ/ಡಿಬಿಎಫ್/ಡಿಪ್ಲೋಮಾ ಇನ್ ಕೋ ಆಪರೇಟಿವ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (CAIIB/DBF/Diploma in Co.operative Business Management) ಅಥವಾ ತತ್ಸಮಾನ ಅರ್ಹತೆ; ಅಥವಾ<br>ii) ಚಾರ್ಟಡ್/ಕಾಸ್ಟ್ ಅಕೌಂಟೆಂಟ್;<br>iii) ನೇಮಕಾತಿ ಸಂದರ್ಭದಲ್ಲಿ ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಹಂತದಲ್ಲಿ ಕನಿಷ್ಟ ಎಂಟು ವರ್ಷಗಳ ಸೇವಾ ಅನುಭವ ಇರತಕ್ಕದ್ದು.<br>iv) ಯಾವುದೇ ಸ್ನಾತಕೋತ್ತರ ಪದವಿ, 35 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು 60 ವರ್ಷ ಮೀರದ ವಯೋಮಿತಿಯುವನಾಗಿರತಕ್ಕದ್ದು.<br>v) ಮುಖ್ಯ ಕಾರ್ಯನಿರ್ವಾಹಕನು ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಅಳತೆಗೋಲು (ಮಾನದಂಡ) ಪೂರೈಸದಿದ್ದಲ್ಲಿ, ಬ್ಯಾಂಕಿನ ಹಿತಾಸಕ್ತಿಗೆ ಅಥವಾ ಠೇವಣಿದಾರರಿಗೆ ಅಥವಾ ಇಬ್ಬರಿಗೂ ಮಾರಕವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಲ್ಲಿ ಅವನನ್ನು ತೆಗೆದುಹಾಕುವ (ವಜಾ ಮಾಡುವ) ಅಧಿಕಾರ ರಿಸರ್ವ್ ಬ್ಯಾಂಕಿಗೆ ಇರತಕ್ಕದ್ದು. ಹಾಗೆಂರ್ಯೇ ಮುಖ್ಯ ಕಾರ್ಯನಿರ್ವಾಹಕನನ್ನು ತೆಗೆದುಹಾಕಿದ/ವಜಾ ಮಾಡಿದ ಮೂರು ತಿಂಗಳ ಒಳಗಾಗಿ ಹೊಸ ಮುಖ್ಯ ಕಾರ್ಯನಿರ್ವಾಹಕನನ್ನು ನೇಮಕಾತಿ ಮಾಡತಕ್ಕದ್ದು. | |
| 62 | | 62 **ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯಗಳು ಮತ್ತು ಅಧಿಕಾರಗಳು:**<br>ಮಂಡಳಿಯು ಮುಖ್ಯಕಾರ್ಯನಿರ್ವಾಹಕನಿಗೆ ಕಾಲಕಾಲಕ್ಕೆ ಒಪ್ಪಿಸಿಕೊಟ್ಟ/ನೀಡಿದ ಅಧಿಕಾರಿಗಳ ಜೊತೆಗೆ ಈ ಕೆಳಗಿನ ಕರ್ತವ್ಯಗಳೂ ಸೇರತಕ್ಕದ್ದು; ಅವನು, | |

| | | | |
|---|---|---|---|
| 62.9) | ಸಾಮಾನ್ಯ ನಿಕಾಯದ, ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು, ಸದರಿ ಸಭೆಗಳಲ್ಲಿ ಅಗತ್ಯಪಡಿಸುವ ಕಾಗದಪತ್ರಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡೆವಳಿಗಳಿಗೆ ಸಹಿ ಮಾಡತಕ್ಕದ್ದು; | 62.9) ಸರ್ವಸಾಧಾರಣ ಮಂಡಳಿಯ, ವ್ಯವಸ್ಥಾಪನಾ ಮಂಡಳಿಯ ಮತ್ತು ಉಪಸಮಿತಿಯ ಎಲ್ಲಾ ಸಭೆಗಳಿಗೆ ಹಾಜರಿರತಕ್ಕದ್ದು, ಹಾಗೂ ಅಂಥ ಸಭೆಗಳಿಗೆ ಅಗತ್ಯವಿರುವ ಎಲ್ಲಾ ಕಾಗದ ಪತ್ರಗಳನ್ನು ಹಾಗೂ ಮಾಹಿತಿಯನ್ನು ಹಾಜರುಪಡಿಸತಕ್ಕದ್ದು, ಮತ್ತು ಚೇರ್ಮನ್‌ರೊಂದಿಗೆ ಅಂಥ ಸಭೆಯ ನಡವಳಿಗಳಿಗೆ ಸಹಿ ಮಾಡತಕ್ಕದ್ದು; | |
| 62.46) | ಬ್ಯಾಂಕಿನ ನೀತಿಗಳ, ಉದ್ದೇಶಗಳ ಮತ್ತು ಯೋಜನೆಯ ರಚನೆಯಲ್ಲಿ ಮಂಡಳಿಗೆ ಅಗತ್ಯ ನೆರವು ನೀಡುವುದು; | 62.46) ಬ್ಯಾಂಕಿನ ನೀತಿಗಳನ್ನು, ಉದ್ದೇಶಗಳನ್ನು ಹಾಗೂ ಯೋಜನೆ ರೂ ಸಲು ಮಂಡಳಿ ಹಾಗೂ ವ್ಯವಸ್ಥಾಪನಾ ಮಂಡಳಿಗೆ ಸಹಕರಿಸತಕ್ಕದ್ದು; | |
| 62.48) | ಹೊಸ ಸೇರ್ಪಡೆ | 62.48) ಮಂಡಳಿಯ ಕಾಯ್ದೆ, ನಿಯಮ ಹಾಗೂ ಉಪನಿಯಮಗಳಿಗೆ ವಿರುದ್ಧ ಕೈಗೂಡ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದಲ್ಲ ಹಾಗೂ ಈ ಬಗ್ಗೆ ನಿಬಂಧಕರಿಗೆ ವರದಿ ಮಾಡತಕ್ಕದ್ದು | |

**<u>ಹಾಲಿ ವಿವಿಧ ಸಾಲಗಳ ಗರಿಷ್ಠ ಮಿತಿ ಮತ್ತು ಬಡ್ಡಿದರ ಕೆಳಕಂಡಂತಿರುತ್ತದೆ</u>**

| ಕ್ರ. ಸಂ. | ಸಾಲದ ವಿಧಗಳ[redacted] |
|---|---|
| 1 | ಆಧಾರವಿಲ್ಲದ ಸಾಲಗಳು [redacted] |
| 2 | ಆಭರಣ ಸಾಲಗಳು [redacted] |
| 3 | ವಾಹನ ಸಾಲಗಳು [redacted] |
| 4 | ಓವರ್ ಡ್ರಾಫ್ಟ್ – ಸ್ವತ್ತಿನ [redacted] |
| 5 | ಓವರ್ ಡ್ರಾಫ್ಟ್ – ಠೇವಣ[redacted] |
| 6 | 1) ವ್ಯಾಪಾರ ಅಭಿವೃದ್ಧಿ [redacted]<br>2) ವಾಣಿಜ್ಯ ಸಂಕೀರ್ಣ [redacted]<br>( for group borrowe[redacted] |
| 7 | ಮನೆ ಕಟ್ಟಲು ಮತ್ತು ಮನ[redacted]<br>ನಿವೇಶನ ಕೊಳ್ಳಲು ಜೊತೆ[redacted] |
| 8 | ನಿವೇಶನ ಕೊಳ್ಳಲು [redacted] |
| 9 | ಸಾಲ ತೀರಿಸಲು [redacted] |
| 10 | ಮದುವೆ ಉದ್ದೇಶಕ್ಕೆ [redacted] |
| 11 | ರಿಪೇರಿ ಮತ್ತು ನವೀಕರಣ[redacted] |
| 12 | ವಿದ್ಯಾಭ್ಯಾಸಕ್ಕಾಗಿ [redacted] |
| 13 | ಸ್ವತ್ತಿನ ಮೇಲಿನ ಬಾಡಿಗೆ [redacted]<br>ಸಾಲಗಳು |

**2019–2020ನೇ ಸಾಲಿನ**

**ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆಗಳು**

**ಹಾಗೂ**

**ಲೆಕ್ಕಪರಿಶೋಧನಾ ವರದಿ ಮತ್ತು**

**ಅದರ ಅನುವರ್ತನಾ ವರದಿ**

# ದಿ ಭಾರತ್ ಕೋ-ಆಪರೇಟಿವ್

ಜಯನಗರ,

## 2019-2020ನೇ ಸಾಲಿನ ಲಾಭ

| 31.03.2019 ರೂ. ಪೈ | ವಿವರ | 31.03.2020 ರೂ. ಪೈ |
|---|---|---|
| 297681713.50 | **1. ಠೇವಣಿಗಳ ಮೇಲಿನ ಬಡ್ಡಿ** | 308369484.00 |
| 110274874.14 | **2. ನಿರ್ವಹಣಾ ವೆಚ್ಚಗಳು** | 117065622.77 |
| 19731475.00 | **3. ಆದಾಯ ತೆರಿಗೆ** | 13210202.00 |
| | **4. ಸವಕಳಿ :** | |
| 583417.00 | ಅ) ಕಟ್ಟಡದ ಮೇಲೆ - ಶೇ.10 | 525074.00 |
| 897644.50 | ಆ) ಮರಮುಟ್ಟುಗಳು ಮತ್ತು  ಠೋಪಕರಣಗಳ ಮೇಲೆ ಶೇ.10 | 833235.00 |
| 108867.00 | ಇ) ವಾಹನಗಳ ಮೇಲೆ ಶೇ.15 | 92537.00 |
| 522571.40 | ಈ) ಕಂಪ್ಯೂಟರ್‌ಗಳ ಮೇಲೆ ಶೇ.33.33 | 252186.00 |
| 602712.96 | ಉ) ಸಾಫ್ಟ್‌ವೇರ್ ಮೇಲೆ ಶೇ.33.33 | 398949.00 |
| 649055.50 | ಊ) ಕಛೇರಿ ಉಪಕರಣಗಳ ಮೇಲೆ ಶೇ.15 | 627866.34 |
| | **5. ಕಾದಿರಿಸಿರುವುದು :** | |
| 0.00 | ಅ) ಅನುತ್ಪಾದಕ ಆಸ್ತಿಗಳಿಗೆ | 20522785.00 |
| 0.00 | ಆ) ಸಾಮಾನ್ಯ ಅವಕಾಶ-ಆರ್.ಬಿ.ಐ. ನಿಯಂತ್ರಣ ಪ್ಯಾಕೇಜ್ | 3029000.00 |
| 1111981.00 | ಇ) ಸಿಬ್ಬಂದಿ ಎಕ್ಸ್‌ಗ್ರೇಷಿಯಾ | 1092699.00 |
| 0.00 | ಈ) ಸಿಬ್ಬಂದಿಗಳ ಗಳಿಕೆ ರಜೆ ನಗಧೀಕರಣಕ್ಕೆ | 1387272.00 |
| 334000.00 | ಉ) ಶಾಸನಬದ್ದ ಲೆಕ್ಕಪರಿಶೋಧನೆಗೆ | 334000.00 |
| 2225000.00 | ಊ) ಉತ್ಪಾದಕ ಆಸ್ತಿಗಳಿಗೆ | 0.00 |
| 4093201.00 | ಋ) ಸರ್ಕಾರಿ ಭದ್ರತೆಗಳ ಮೇಲೆ ಅಮಾರ್ಟೈಸೇಷನ್ ಚಾರ್ಜಸ್ | 3493377.00 |
| 33082424.23 | **6. ನಿವ್ವಳ ಲಾಭ C/D** | 3245071.66 |
| **471898937.23** | **ಒಟ್ಟು** | **474479360.77** |
| | ಹೂಡಿಕೆಗಳ ಮೇಲಿನ ಸವಕಳಿ ನಿಧಿಗೆ ವರ್ಗಾವಣೆಯಾದ ಮೊತ್ತ | 15777623.00 |
| | ನಿವ್ವಳ ಲಾಭ | 3245071.66 |
| | **ಒಟ್ಟು** | **19022694.66** |

ಸಹಿ/-
(ಎಸ್. ಅನುರಾಧ)
ಹಿರಿಯ ವ್ಯವಸ್ಥಾಪಕರು

ಸಹಿ/-
(ಡಿ.ಎ. ಅಮೃತ)
ಕಾರ್ಯದರ್ಶಿ

ಸಹಿ/-
( .ನರಸಿಂಹಮೂರ್ತಿ)
ನಿರ್ದೇಶಕರು

ದಿನಾಂಕ : 20.11.2020
ಸ್ಥಳ : ಬೆಂಗಳೂರು

**ಬ್ಯಾಂಕ್ ಲಿಮಿಟೆಡ್**

ಬೆಂಗಳೂರು – 560 011

**ಮತ್ತು ನಷ್ಟದ ತಃಖ್ತೆ**

| 31.03.2019 ರೂ. ಪೈ | ವಿವರ | 31.03.2020 ರೂ. ಪೈ |
|---|---|---|
| | **1. ಬಡ್ಡಿ ಆದಾಯ** | |
| 338839033.10 | ಅ) ಸಾಲ ಮತ್ತು ಮುಂಗಡಗಳಿಂದ ಬಂದ ಬಡ್ಡಿ | 368560308.31 |
| 119193450.16 | ಆ) ಹೂಡಿಕೆಗಳಿಂದ ಬಂದ ಬಡ್ಡಿ | 90757528.15 |
| 0.00 | ಇ) ಮ್ಯೂಚಲ್ ಫಂಡ್‌ಗಳಿಂದ ಬಂದ ಬಡ್ಡಿ | 1035623.63 |
| 0.00 | ಈ) ಕಮರ್ಷಿಯಲ್ ಪೇಪರ್ಸ್‌ನಿಂದ ಬಂದ ಬಡ್ಡಿ | 2379700.00 |
| 0.00 | ಉ) ಕಾಲ್ ಮನಿಯಿಂದ ಬಂದ ಬಡ್ಡಿ | 1350632.00 |
| | **2. ಇತರೆ ಆದಾಯಗಳು** | |
| 5292614.05 | ಅ) ಬ್ಯಾಂಕ್ ಶುಲ್ಕ | 2966218.69 |
| 1060831.00 | ಆ) ಸುಸ್ತಿ ಬಡ್ಡಿ | 1019705.79 |
| 398725.28 | ಇ) ಇತರೆ ಶಿಲ್ಕು | 60200.32 |
| 2566974.00 | ಈ) ಷೇರು ಶುಲ್ಕ ಮತ್ತು ಪ್ರವೇಶ ಧನ | 1083256.00 |
| 2112941.00 | ಉ) ಲಾಕರ್ ಬಾಡಿಗೆ | 2086600.00 |
| 65334432 | ಊ) ಕಮೀಷನ್ | 1099937.28 |
| 68377.32 | ಋ) ಚಾಲ್ತಿ ಖಾತೆಗಳ ಮೇಲಿನ ಪೋಲಿಯೋ ಶುಲ್ಕ | 69937.60 |
| 406428.00 | ೠ) ದಾವೆ/ಅಮಲ್ಜಾರಿ ವೆಚ್ಚಗಳ ವಸೂಲಿ | 1740416.00 |
| 205858.00 | ಎ) ಜನರಲ್ ಇನ್ಸೂರೆನ್ಸ್ ಕಂಪನಿಯಿಂದ – ಕಮೀಷನ್ | 194700.00 |
| 1044790.00 | ಏ) ಆದಾಯ ತೆರಿಗೆ ಇಲಾಖೆಯಿಂದ ವಾಪಸ್ಸಾದ ಮೊತ್ತ | – |
| 55571.00 | ಐ) ಬ್ಯಾಂಕಿನ ವಾಹನ ಮಾರಾಟದಿಂದ | – |
| 0.00 | ಒ) ನ್ಯಾಯಾಲಯದಿಂದ ವಾಪಸ್ಸಾದ ಶುಲ್ಕ | 54597.00 |
| 0.00 | ಓ) ಸರ್ಕಾರಿ ಭದ್ರತೆಗಳ ಮಾರಾಟದಿಂದ ಬಂದ ಆದಾಯ | 20000.00 |
| **471898937.23** | **ಒಟ್ಟು** | **474479360.77** |
| | ನಿವ್ವಳ ಲಾಭ B/D | 3245071.66 |
| | ಹೂಡಿಕೆಗಳ ಮೇಲಿನ ಏರಿಳಿತ ನಿಧಿಯಿಂದ ವರ್ಗಾವಣೆಯಾದ ಮೊತ್ತ | 15777623.00 |
| | **ಒಟ್ಟು** | **19022694.66** |

ಸಹಿ/–
(ವಿ.ಶ್ರೀನಿವಾಸಯ್ಯ)
ನಿರ್ದೇಶಕರು

ಸಹಿ/–
(ಡಾಃ ಎಂ.ವೀರಪ್ಪ)
ಉಪಾಧ್ಯಕ್ಷರು

ಸಹಿ/–
(ಡಾಃ ಎಂ.ಸಿ.ಜಗತ್)
ಅಧ್ಯಕ್ಷರು

'ಪರಿಶೀಲಿಸಿದೆ'
ಮೆಸರ್ಸ್ ಪಂಪಣ್ಣ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಹಿ/–
(ಪಂಪಣ್ಣ)
ಮಾಲೀಕರು

## ದಿ ಭಾರತ್ ಕೋ-ಆಪರೇಟಿವ್

ದಿನಾಂಕ : 31.03.2020ರ ಅಂತ್ಯಕ್ಕೆ ಇದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ

| 31.03.2019 ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | 31.03.2020 ರೂ. ಪೈ |
|---|---|---|
| | **1. ಷೇರು ಬಂಡವಾಳ** | |
| 150000000.00 | ಅ) ಅಧಿಕೃತ ಷೇರು ಬಂಡವಾಳ | 150000000.00 |
| | ಆ) ವಿಲೇವಾರಿಯಾಗಿರುವ ಷೇರುಗಳು : | |
| 105039725.00 | ಕ) ರೆಗ್ಯುಲರ್ ಷೇರುಗಳು – ವೈಯಕ್ತಿಕ | 111230325.00 |
| 165750.00 | ಖ) ರೆಗ್ಯುಲರ್ ಷೇರುಗಳು – ಸಂಘ ಸಂಸ್ಥೆಗಳು | 165750.00 |
| 6546600.00 | ಗ) ಅಸೋಸಿಯೇಟ್ ಷೇರುಗಳು | 6182700.00 |
| | | **117576775.00** |
| | **2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು** | |
| 89582558.03 | 1) ಕಾಯ್ದಿಟ್ಟ ನಿಧಿ : | 99500095.26 |
| | 2) ಇತರೆ ನಿಧಿಗಳು | |
| 42195323.55 | ಅ) ಕಟ್ಟಡದ ನಿಧಿ | 45805443.55 |
| 2304221.41 | ಆ) ಡಿವಿಡೆಂಡ್ ಸಮತೋಲನ ನಿಧಿ | 2304221.41 |
| 94862614.00 | ಇ) ಕರಡು ಮತ್ತು ಅನುಮಾನಾಸ್ಪದ ಸಾಲಗಳ ನಿಧಿ | 116498202.00 |
| 12025000.00 | ಈ) ಉತ್ಪಾದಕ ಸಾಲಗಳ ಮೇಲಿನ ಅವಕಾಶ | 12025000.00 |
| 16669876.00 | ಉ) ಸರ್ಕಾರಿ ಭದ್ರತೆಗಳ ಏರಿಳಿತ ನಿಧಿ | 2095626.00 |
| 2136820.00 | ಊ) ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | 3015193.00 |
| 3650273.78 | ಋ) ಸದಸ್ಯರುಗಳ ಮರಣ ಪರಿಹಾರ ನಿಧಿ | 4403469.78 |
| 12407190.00 | ೠ) ಸರ್ಕಾರಿ ಭದ್ರತೆಗಳ ಸವಕಳಿ ನಿಧಿ | 27884813.00 |
| 384532.00 | ಎ) ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 384532.00 |
| 197280.00 | ಏ) ಧಾರ್ಮಿಕ ಸಂಸ್ಥೆಗಳಿಗೆ ವಂತಿಗೆ ನಿಧಿ | 197280.00 |
| 2604639.00 | ಐ) ಮಹೋತ್ಸವ ನಿಧಿ | 5011385.00 |
| | | **319125261.00** |
| 0.00 | **3. ಪ್ರಮುಖ/ಅಂಗ ಸಂಸ್ಥೆ ರಾಜ್ಯಪಾಲುದಾರಿಕೆ ನಿಧಿ** | 0.00 |

## ಬ್ಯಾಂಕ್ ಲಿಮಿಟೆಡ್

(ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949ರ ಕಲಂ 29 ಫಾರಂ ಎ 3ನೇ ಷೆಡ್ಯೂಲ್ ಪ್ರಕಾರ)

| 31.03.2019 ರೂ. ಪೈ | ಆಸ್ತಿಗಳು | 31.03.2020 ರೂ. ಪೈ |
|---|---|---|
| | **1. ನಗದು, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿರುವ ಶಿಲ್ಕು** | |
| 16594479.00 | ಅ) ನಗದು ಶಿಲ್ಕು | 17336212.00 |
| 48526508.13 | ಆ) ಭಾರತೀಯ ರಿಸರ್ವ್ ಬ್ಯಾಂಕ್ | 55563510.31 |
| | | **72899722.31** |
| | **2. ಇತರೆ ಬ್ಯಾಂಕುಗಳಲ್ಲಿರುವ ಶಿಲ್ಕು** | |
| 2322534.07 | ಅ) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ – ಕೇಂದ್ರ ಕಛೇರಿ | 74093.96 |
| 2775672.71 | ಆ) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ – ಜಯನಗರ ಶಾಖೆ | 557312.09 |
| 8221229.72 | ಇ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ – ಜಯನಗರ ಶಾಖೆ | 6568186.52 |
| 552971.70 | ಈ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ – ಜಯನಗರ ಶಾಖೆ (SBM) | 0.00 |
| 7511.26 | ಉ) ಕೆನರಾ ಬ್ಯಾಂಕ್ – ವಿಜಯನಗರ ಶಾಖೆ | 7511.26 |
| 715371.00 | ಊ) ಕೆನರಾ ಬ್ಯಾಂಕ್–ಇಂದಿರಾನಗರ ಶಾಖೆ | 923371.00 |
| 34564.67 | ಋ) ಯುಕೋ ಬ್ಯಾಂಕ್–ಕೆಂಗೇರಿ ಶಾಖೆ | 34451.97 |
| 1588473.00 | ಋ) ಕೆನರಾ ಬ್ಯಾಂಕ್ –ಯಲಹಂಕ ಶಾಖೆ | 1088473.00 |
| 97244.00 | ಎ) ಕೆನರಾ ಬ್ಯಾಂಕ್ – ಬೇಗೂರು ಶಾಖೆ | 97244.00 |
| 6476354.40 | ಏ) ಕೆನರಾ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್)–ಯಡಿಯೂರು ಶಾಖೆ | 309569.22 |
| 2000.00 | ಐ) ಎಚ್.ಡಿ.ಎಫ್.ಸಿ. ಬ್ಯಾಂಕ್ | 2000.00 |
| 66911568.79 | ಒ) ಐ.ಡಿ.ಬಿ.ಐ.ಬ್ಯಾಂಕ್ | 37146187.28 |
| 4411112.04 | ಓ) ಐ.ಡಿ.ಬಿ.ಐ.ಬ್ಯಾಂಕ್ NEFT/RTGS inward | 2992756.76 |
| 12679027.09 | ಔ) ಐ.ಡಿ.ಬಿ.ಐ.ಬ್ಯಾಂಕ್ NEFT/RTGS Outward | 38747674.46 |
| 10819720.55 | ಅಂ) ಐ.ಡಿ.ಬಿ.ಐ.ಬ್ಯಾಂಕ್ ATM Pooling A/c | 32549740.72 |
| 15250117.04 | ಅಃ) ಐ.ಡಿ.ಬಿ.ಐ.ಬ್ಯಾಂಕ್ IMPS Pooling A/c | 11763073.04 |
| | | **132861645.28** |
| | 3. ಮನಿ ಎಟ್ ಕಾಲ್ ಅಂಡ್ ಶಾರ್ಟ್ ನೋಟೀಸ್ | |
| 0.00 | ಎಸ್.ಬಿ.ಐ–ಡಿ.ಎಫ್.ಹೆಚ್.ಐ | 51000000.00 |
| | **4. ಹೂಡಿಕೆಗಳು :** | |

| 31.03.2019 ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | 31.03.2020 ರೂ. ಪೈ |
|---|---|---|
| | **4. ಠೇವಣಿಗಳು ಮತ್ತು ಇತರೆ ಖಾತೆಗಳು :** | |
| | 1) ನಿಶ್ಚಿತ ಅವಧಿ ಠೇವಣಿಗಳು | |
| 1728050798.00 | ಅ) ವೈಯಕ್ತಿಕ | 1994248477.00 |
| 23698922.00 | ಆ) ಸಂಘ ಸಂಸ್ಥೆಗಳು | 34019703.00 |
| 1422693954.00 | ಇ) ಉದಯಭಾರತಿ ಠೇವಣಿಗಳು–ವೈಯಕ್ತಿಕ | 1284606558.00 |
| 17381895.00 | ಈ) ಉದಯಭಾರತಿ ಠೇವಣಿಗಳು–ಸಂಘ ಸಂಸ್ಥೆಗಳು | 14851473.00 |
| 53876969.00 | ಉ) ಸಂಚಿತ ಠೇವಣಿಗಳು | 51169041.00 |
| | **2) ಉಳಿತಾಯ ಠೇವಣಿಗಳು** | |
| 985997549.45 | ಅ) ವೈಯಕ್ತಿಕ | 1054014808.26 |
| 17727168.29 | ಆ) ಸಂಘ ಸಂಸ್ಥೆಗಳು | 22833067.97 |
| | **3) ಚಾಲ್ತಿ ಠೇವಣಿಗಳು** | |
| 49477421.97 | ಅ) ವೈಯಕ್ತಿಕ | 27686241.14 |
| 2216325.00 | ಆ) ಸಂಘ ಸಂಸ್ಥೆಗಳು | 2922915.43 |
| 615223.00 | ಇ) ಸಿಬ್ಬಂದಿ ಭದ್ರತಾ ಠೇವಣಿಗಳು | 608945.00 |
| 18515060.00 | 4) ಭಾರತೀಯ ನಿತ್ಯ ನಿಧಿ ಠೇವಣಿಗಳು : | 18873621.00 |
| 45698091.00 | 5) ಅವಧಿ ಮುಗಿದ ಠೇವಣಿಗಳು | 51770518.00 |
| | | **4557605368.80** |
| 0.00 | **5. ಶಾಖೆಗಳ ಹೊಂದಾಣಿಕೆಗಳು :** | 0.00 |
| 25889529.90 | **6. ಅನುತ್ಪಾದಕ ಸಾಲದ ಖಾತೆಗಳಿಂದ ಬರಬೇಕಾದ ಬಡ್ಡಿ (ಕಾಂಟ್ರ) :** | 46662117.90 |
| 17050243.00 | **7. ಠೇವಣಿಗಳ ಮೇಲೆ ಬಡ್ಡಿ ಪಾವತಿಸಬೇಕಾಗಿರುವುದು** | 24355685.00 |
| | **8. ಇತರೆ ಜವಾಬ್ದಾರಿಗಳು :** | |
| **2685682.60** | ಅ) ಪಾವತಿಸಬೇಕಾದ ಅವಧಿ ಮೀರಿದ ಫೇ ಆರ್ಡರ್ಸ್ ಶಿಲ್ಕು | 1713583.00 |
| 11325020.00 | ಆ) ಪಾವತಿಸಬೇಕಾದ ಫೇ ಆರ್ಡರ್ಸ್ ಶಿಲ್ಕು | 3286186.00 |
| 5238647.00 | ಇ) ಸಂಡ್ರಿ ಪರ್ಸನ್ಸ್ ರಿಸೀಟ್ಸ್ | 6378284.00 |
| 113600.00 | ಈ) ಕಾನೂನು ಮತ್ತು ತಾಂತ್ರಿಕ ಶಿಲ್ಕು | 99100.00 |

| 31.03.2019<br>ರೂ. ಪೈ | ಆಸ್ತಿಗಳು | 31.03.2020<br>ರೂ. ಪೈ |
|---:|---|---:|
| | **1) ಸರ್ಕಾರಿ ಭದ್ರತೆಗಳಲ್ಲಿ** | |
| 1077510413.00 | ಅ) ಪಕ್ವವಾಗುವವರೆಗೆ ಇಟ್ಟಿರುವುದು | 974017036.00 |
| 100300000.00 | ಆ) ಮಾರಾಟಕ್ಕಿರುವುದು | 0.00 |
| 1000000.00 | 2) ಅಪೆಕ್ಸ್ ಬ್ಯಾಂಕಿನಲ್ಲಿರುವ ಷೇರು | 1000000.00 |
| | 3) ಇತರೆ ಠೇವಣಿಗಳು | |
| 43084984.38 | ಅ) ಅಪೆಕ್ಸ್ ಬ್ಯಾಂಕಿನಲ್ಲಿರುವ ಆಪದ್ಧನ ಠೇವಣಿ | 1314836.00 |
| 25245000.00 | ಆ) ಅಪೆಕ್ಸ್ ಬ್ಯಾಂಕಿನಲ್ಲಿರುವ ಇತರೆ ಆಪದ್ಧನ ಠೇವಣಿ | 0.00 |
| 121300000.00 | ಇ) ಅಪೆಕ್ಸ್ ಬ್ಯಾಂಕಿನಲ್ಲಿರುವ ನಿಶ್ಚಿತ ಠೇವಣಿ | 211600000.00 |
| 70000000.00 | ಈ)ಎಸ್‌ಬಿಐ ಬ್ಯಾಂಕಿನಲ್ಲಿರುವ ನಿಶ್ಚಿತ ಠೇವಣಿ | 90000000.00 |
| 5000000.00 | ಉ) ಕೆನೆರಾ ಬ್ಯಾಂಕಿನಲ್ಲಿರುವ ನಿಶ್ಚಿತ ಠೇವಣಿ (ಸಿಂಡಿಕೇಟ್ ಬ್ಯಾಂಕ್) | 105000000.00 |
| 0.00 | ಊ)ಐ.ಡಿ.ಬಿ.ಐ. ಬ್ಯಾಂಕಿನಲ್ಲಿರುವ ನಿಶ್ಚಿತ ಠೇವಣಿ | 1000000.00 |
| 47620300.00 | ಋ) ಕಮರ್ಷಿಯಲ್ ಪೇಪರ್ಸ್ | 278848125.00 |
| | | **1662779997.00** |
| | 5. ಸಾಲ ಮತ್ತು ಮುಂಗಡಗಳು | |
| | 1) ಅಲ್ಪಾವದಿ ಸಾಲಗಳು | |
| 22908565.00 | ಅ) ಆಭರಣ ಸಾಲಗಳು | |
| 494405095.20 | ಆ) ಓವರ್ ಡ್ರಾಫ್ಟ್ ಸಾಲಗಳು | 16371613.00 |
| | 2) ಮಧ್ಯಮಾವಧಿ ಸಾಲಗಳು : | 459376707.38 |
| 194543.00 | ಅ) ಭದ್ರತಾ ಸಾಲಗಳು | 194543.00 |
| 21323999.00 | ಆ) ವಾಹನ ಸಾಲಗಳು | 19723958.00 |
| 60549589.00 | ಇ) ಅಭದ್ರತಾ ಸಾಲಗಳು | 57031446.00 |
| 28589786.00 | ಈ) ನಿಶ್ಚಿತ ಠೇವಣಿ ಮೇಲಿನ ಸಾಲಗಳು | 29562902.00 |
| 18448771.00 | ಉ) ಉದಯಭಾರತಿ ಠೇವಣಿ ಮೇಲಿನ ಸಾಲಗಳು | 14956719.00 |
| 885429.00 | ಊ) ಸಂಚಿತ ಠೇವಣಿ ಮೇಲಿನ ಸಾಲಗಳು | 1169954.00 |
| 1112276.00 | ಋ) ಓವರ್ ಡ್ರಾಫ್ಟ್ ಸಾಲಗಳು – ಠೇವಣಿಗಳ ಮೇಲೆ | 166194.70 |
| | 3) ದೀರ್ಘಾವಧಿ ಸಾಲಗಳು : | |
| 2360321989.30 | ಅ) ಸ್ಥಿರಾಸ್ತಿ ಮೇಲಿನ ಸಾಲಗಳು | 2367380150.58 |
| 84460173.00 | ಆ) ಸಿಬ್ಬಂದಿ ಮುಂಗಡಗಳು | 92776576.00 |
| | | **3058710763.66** |
| 0.00 | 6. ಶಾಖೆಗಳ ಹೊಂದಾಣಿಕೆಗಳು | 0.00 |
| 25889529.90 | 7. ಅನುತ್ಪಾದಕ ಸಾಲದ ಖಾತೆಗಳಿಂದ ಬರಬೇಕಾದ ಬಡ್ಡಿ (ಕಾಂಟ್ರ) | 46662117.90 |

| 31.03.2019 ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | 31.03.2020 ರೂ. ಪೈ |
|---|---|---|
| 249250.00 | ಉ) ನಾಮೀನಲ್ ಷೇರು | 261950.00 |
| 7891.00 | ಊ) ಅಮಾನತ್ತಿನಲ್ಲಿರುವ ಷೇರು | 24680.00 |
| 1900.00 | ಋ) ಅಮಾನತ್ತಿನಲ್ಲಿರುವ ನಾಮಿನಲ್ ಷೇರು | 2700.00 |
| 12500.00 | ೠ) ವಾಹನ ಸಾಲದ ಭದ್ರತಾ ಠೇವಣಿ | 9000.00 |
| 879000.00 | ಎ) ಸ್ಥಿರಾಸ್ತಿ ಸಾಲದ ಭದ್ರತಾ ಠೇವಣಿ | 744000.00 |
| 334000.00 | ಏ) ಶಾಸನಬದ್ಧ ಲೆ.ಪರಿಶೋಧಕರಿಗೆ ಪಾವತಿಸಬೇಕಾದ ಆಡಿಟ್ ಶುಲ್ಕ | 334000.00 |
| 1523332.00 | ಐ) ಪಾವತಿಸಬೇಕಾದ 2015–16ನೇ ಸಾಲಿನ ಡಿವಿಡೆಂಡ್ | 0.00 |
| 2556005.00 | ಒ) ಪಾವತಿಸಬೇಕಾದ 2016–17ನೇ ಸಾಲಿನ ಡಿವಿಡೆಂಡ್ | 2281579.00 |
| 2621652.00 | ಓ) ಪಾವತಿಸಬೇಕಾದ 2017–18ನೇ ಸಾಲಿನ ಡಿವಿಡೆಂಡ್ | 2154835.00 |
| 0.00 | ಔ) ಪಾವತಿಸಬೇಕಾದ 2018–19ನೇ ಸಾಲಿನ ಡಿವಿಡೆಂಡ್ | 2951781.00 |
| 1424297.00 | ಅಂ) ಪಾವತಿಸಬೇಕಾದ TDS | 1310973.00 |
| 1111981.00 | ಅಃ ಪಾವತಿಸಬೇಕಾದ ಬೋನಸ್/ಏಕ್ಸ್‌ಗ್ರೇಷಿಯಾ | 1092699.00 |
| 5101.00 | ಕ) ಹೆಚ್ಚುವರಿ ನಗದು | 2580.00 |
| 1377790.00 | ಖ) ಸಿಬ್ಬಂದಿಗಳ ಗಳಿಕೆ ರಜೆ ನಗಧೀಕರಣಕ್ಕೆ | 1387272.00 |
| 112500.00 | ಗ) IS ಆಡಿಟ್ ಶುಲ್ಕ | 0.00 |
| 6845030.00 | ಘ) ಪಾವತಿಸಬೇಕಾದ ಆದಾಯ ತೆರಿಗೆ | 0.00 |
| 0.00 | ಙ) ಕ್ಲಿಯರಿಂಗ್ ಸಸ್ಪೆನ್ಸ್ | 697218.00 |
| 0.00 | ಚ) ಸಾಮಾನ್ಯ ಅವಕಾಶ–ಆರ್ ಬಿ ಐ ನಿಯಂತ್ರಣ ಪ್ಯಾಕೇಜ್ | 3029000.00 |
| | | **27761420.00** |

| 31.03.2019 ರೂ. ಪೈ | ಆಸ್ತಿಗಳು | 31.03.2020 ರೂ. ಪೈ |
|---|---|---|
| | **8. ಕಟ್ಟಡದ ಲೆಕ್ಕ** | |
| 10175297.00 | ಕೇಂದ್ರ ಕಛೇರಿ / ಶಾಖೆಗಳ ಕಟ್ಟಡ | 10175297.00 |
| | ಸವಕಳಿ ಜಾತಾ ಶೇ.10 | 525074.00 |
| | | **9650223.00** |
| | **9. ಮರಮುಟ್ಟುಗಳು, ಉಪಕರಣಗಳು** | |
| 8109844.62 | ಅ) ಮರಮುಟ್ಟುಗಳು ಮತ್ತು ಉಪಕರಣಗಳು | 8332302.24 |
| | ಸವಕಳಿ ಜಾತಾ ಶೇ.10 | 833235.00 |
| | | **7499067.24** |
| 322797.00 | ಆ) ಕಂಪ್ಯೂಟರ್ಸ್ ಮತ್ತು ಪೆರಿ,ರಲ್ಸ್ | 322797.00 |
| | ಸವಕಳಿ ಜಾತಾ ಶೇ.33.33 | 252186.00 |
| | | 70611.00 |
| 616918.00 | ಇ) ವಾಹನಗಳು | 616918.00 |
| | ಸವಕಳಿ ಜಾತಾ ಶೇ.15 | 92537.00 |
| | | **524381.00** |
| 320616.00 | ಈ) ಸಾಫ್ಟ್‌ವೇರ್ | 665616.00 |
| | ಸವಕಳಿ ಜಾತಾ ಶೇ.33.33 | 398949.00 |
| | | **266667.00** |
| 4115520.10 | ಉ) ಕಛೇರಿ ಉಪಕರಣಗಳು | 4192610.44 |
| | ಸವಕಳಿ ಜಾತಾ ಶೇ.15 | 627866.34 |
| | | **3564744.10** |
| | **10. ಇತರೆ ಆಸ್ತಿಗಳು:** | |
| 23552.50 | ಅ) ದೂರವಾಣಿ ಮುಂಗಡ | 21972.50 |
| 1303650.00 | ಆ) ಶಾಖೆಗಳ ಬಾಡಿಗೆ ಮುಂಗಡ | 1393650.00 |
| 8000.00 | ಇ) ಸಂಡ್ರಿ ಪೇಮೆಂಟ್ | 358000.00 |

| 31.03.2019<br>ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | 31.03.2020<br>ರೂ. ಪೈ |
|---|---|---|
| | **9. ಲಾಭ ಮತ್ತು ನಷ್ಟ ಖಾತೆಃ** | |
| 33082424.23 | ನಿವ್ವಳ ಲಾಭ | 3245071.66 |
| **4871169155.21** | **ಒಟ್ಟು** | **5096333699.36** |

ಸಹಿ/–
(ಎಸ್. ಅನುರಾಧ)
ಹಿರಿಯ ವ್ಯವಸ್ಥಾಪಕರು

ಸಹಿ/–
(ಡಿ.ಎ. ಅಮೃತ)
ಕಾರ್ಯದರ್ಶಿ

ಸಹಿ/–
( .ನರಸಿಂಹಮೂರ್ತಿ)
ನಿರ್ದೇಶಕರು

ದಿನಾಂಕ : 20.11.2020
ಸ್ಥಳ : ಬೆಂಗಳೂರು

| 31.03.2019 ರೂ. ಪೈ | ಆಸ್ತಿಗಳು | 31.03.2020 ರೂ. ಪೈ |
|---|---|---|
| 578972.00 | ಈ) ಲೇಖನ ಸಾಮಗ್ರಿ | 679755.00 |
| 14965916.00 | ಉ) ಹೂಡಿಕೆಗಳ ಮೇಲೆ ಬರಬೇಕಾದ ಬಡ್ಡಿ | 12948059.44 |
| 99836.00 | ಊ) DEAF ಖಾತೆಯಿಂದ ಬರಬೇಕಾದ ಮೊತ್ತ | 10702.00 |
| 1989606.00 | ಋ) ಸಾಲಗಳ ಮೇಲಿನ ಇತರೆ ವೆಚ್ಚಗಳು | 2604894.00 |
| 9537.07 | ೠ) ಪೆಟ್ರೋ ಕಾರ್ಡ್ (ಬ್ಯಾಂಕಿನ ವಾಹನಗಳು) | 1663.32 |
| 17402523.97 | ಎ) ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ | 24935690.00 |
| 0.00 | ಏ) ಆದಾಯ ತೆರೆಗೆ ಇಲಾಖೆಯಿಂದ ಬರಬೇಕಾದ ಮೊತ್ತ | 6765149.00 |
| 0.00 | ಐ) ಎಸ್.ಜಿ.ಎಸ್.ಟಿ. (ಒಳ ತೆರಿಗೆ) | 41034.59 |
| 0.00 | ಒ) ಸಿ.ಜಿ.ಎಸ್.ಟಿ. (ಒಳ ತೆರಿಗೆ) | 41034.59 |
| 199667.00 | ಓ) ಐ.ಜಿ.ಎಸ್.ಟಿ. (ಒಳ ತೆರಿಗೆ) | 42155.43 |
| | | 49843759.87 |
| **4871169155.21** | ಒಟ್ಟು | **5096333699.36** |

ಸಹಿ/–
(ವಿ.ಶ್ರೀನಿವಾಸಯ್ಯ)
ನಿರ್ದೇಶಕರು

ಸಹಿ/–
(ಡಾಃ ಎಂ.ವೀರಪ್ಪ)
ಉಪಾಧ್ಯಕ್ಷರು

ಸಹಿ/–
(ಡಾಃ ಎಂ.ಸಿ.ಜಗತ್)
ಅಧ್ಯಕ್ಷರು

'ಪರಿಶೀಲಿಸಿದೆ'
ಮೆಸರ್ ಪಂಪಣ್ಣ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಹಿ/–
(ಪಂಪಣ್ಣ)
ಮಾಲೀಕರು

| ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ UBD.CO.BPD(PCB)Cir. 52 dated 25.03.2014 ರಂತೆ ಆಸ್ತಿ–ಜವಾಬ್ದಾರಿ ತಃಖ್ತೆಗಳಿಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿ: | | | |
|---|---|---|---|
| ಕ್ರ.ಸ. | ವಿವರ | | ಟಿಪ್ಪಣಿ |
| 1 | ಸಿ.ಆರ್.ಎ.ಆರ್ | ಶೇ 9.11 | |
| 2 | ಸಿ.ಆರ್.ಎ.ಆರ್ ಚಲನವಲನ | 31.03.2019 ಶೇ 9.88<br>31.03.2020 ಶೇ 9.11 | ಶೇ.0.77ರಷ್ಟು ಕಡಿಮೆಯಾಗಿರುತ್ತದೆ |
| 3. | ಹೂಡಿಕೆಗಳು : ಸರ್ಕಾರಿ ಭದ್ರತೆಗಳುಃ (ರೂ.ಲಕ್ಷಗಳಲ್ಲಿ)<br>ಪುಸ್ತಕ ಬೆಲೆ<br>ಮುಖ ಬೆಲೆ<br>ಮಾರುಕಟ್ಟೆ ಬೆಲೆ | <br>9740.17<br>9500.00<br>9740.17 | |
| 4. | ಅ. ರಿಯಲ್ ಎಸ್ಟೇಟ್ ನಿರ್ಮಾಣದ ವ್ಯವಹಾರಕ್ಕಾಗಿ<br>ಆ. ಮನೆ ನಿರ್ಮಾಣಕ್ಕಾಗಿ (ರೂ. ಲಕ್ಷಗಳಲ್ಲಿ) | – ಇಲ್ಲ –<br>6734.44 | ಮನೆ ನಿರ್ಮಾಣಕ್ಕೆ ನೀಡಲಾದ ಸಾಲದ ಮೊತ್ತವು ಆರ್.ಬಿ.ಐ.ಗೆ ಸಲ್ಲಿಸಲಾಗುತ್ತಿರುವ ನಿಯತಕಾಲಿಕ ಮಾಹಿತಿ ಆಧರಿಸಿದೆ |
| 5. | ಷೇರು ಮತ್ತು ಡಿಬೆಂಚರುಗಳ ಮೇಲಿನ ಮುಂಗಡ | – ಇಲ್ಲ – | |
| 6. | ಠೇವಣಿಗಳ ಮೇಲೆ ಸರಾಸರಿ ವೆಚ್ಚದ ಶೇ.26 ವಾರಗಳ (Fortnight) ಠೇವಣಿ ಸರಾಸರಿಯನ್ನು ಪರಿಗಣಿಸಿಕೊಳ್ಳಲಾಗಿದೆ. | ಶೇ 6.88 | ಇಂದು ಬ್ಯಾಂಕಿಂಗ್ ಕ್ಷೇತ್ರವು ಎದುರಿಸುತ್ತಿರುವ ಪೈಪೋಟಿಯಲ್ಲಿ ಇದನ್ನು ಕಡಿಮೆಗೊಳಿಸಬೇಕಾಗಿರುತ್ತದೆ. ಕಡಿಮೆ ವೆಚ್ಚದ ಠೇವಣಿಗಳ ಶೇಖರಣೆಗೆ ಮಾನ್ಯತೆ ನೀಡುವುದು. |
| 7. | ಅನುತ್ಪಾದಕ ಆಸ್ತಿ (ರೂ.ಲಕ್ಷಗಳಲ್ಲಿ)<br>ಒಟ್ಟು<br>ನಿವ್ವಳ | 31.03.2020 ರಲ್ಲಿದ್ದಂತೆ<br>ರೂ. 4893.04<br>ರೂ. 3728.06 | 1. ಹಿಂದಿನ ವರ್ಷಕ್ಕೆ ಹೋಲಿಸಿದಾಗ ಒಟ್ಟು ಮತ್ತು ನಿವ್ವಳ ಅನುತ್ಪಾದಕದ ಶೇಕಡ ಪ್ರಮಾಣ ಹೆಚ್ಚಳವಾಗಿರುತ್ತದೆ<br>2. ವಸೂಲಾತಿಯಲ್ಲಿ ತೀವ್ರತೆ ಅಗತ್ಯ |
| 8. | ಅನುತ್ಪಾದಕ ಆಸ್ತಿಗಳ ಚಲನವಲನ (ರೂ.ಲಕ್ಷಗಳಲ್ಲಿ)<br>ಒಟ್ಟು ಮೊತ್ತ<br>ನಿವ್ವಳ ಮೊತ್ತ | 31.03.2019 31.03.2020<br>1530.69 4893.04<br>582.06 3728.06 | ವರದಿ ಸಾಲಿನಲ್ಲಿ ಒಟ್ಟು ಮತ್ತು ನಿವ್ವಳ ಅನುತ್ಪಾದಕ ಆಸ್ತಿಗಳ ಮೊತ್ತ ಹೆಚ್ಚಳವಾಗಿರುತ್ತದೆ. |

| | | | |
|---|---|---|---|
| 9. | ಲಾಭದಾಯಕತೆ:<br>ಅ) ಬಡ್ಡಿ ಆದಾಯವು ಬ್ಯಾಂಕಿನ ದುಡಿಯುವ ಬಂಡವಾಳ ಹೋಲಿಕೆಗೆ<br>ಆ) ಇತರೆ ಆದಾಯವು ಬ್ಯಾಂಕಿನ ದುಡಿಯುವ ಬಂಡವಾಳ ಹೋಲಿಕೆಗೆ<br>ಇ) ಆಪರೇಟಿಂಗ್ ಲಾಭ ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ<br>ಈ) ಆಸ್ತಿಗಳ ಮೇಲೆ (ನಿವ್ವಳ ಲಾಭ)<br>ಉ) ಬ್ಯಾಂಕಿನ ವ್ಯವಹಾರ (ಠೇವಣಿ ಮತ್ತು ಸಾಲಗಳು) ಪ್ರತಿ ಸಿಬ್ಬಂದಿಗೆ<br>ಊ) ನಿವ್ವಳ ಲಾಭ – ಪ್ರತಿ ಸಿಬ್ಬಂದಿಗೆ | 31.03.2020 ಕ್ಕೆ<br>ಶೇ 9.19<br>ಶೇ 0.21<br>ಶೇ 1.86<br>ಶೇ 0.06<br>ರೂ. 777.18 ಲಕ್ಷಗಳು<br>ರೂ. 0.32 ಲಕ್ಷಗಳು | ಅ) ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.0.26 ಕಡಿಮೆಯಾಗಿರುವುದನ್ನು ಗಮನಿಸಿದೆ |
| 10. | ದಿನಾಂಕ 31.03.20ಕ್ಕೆ ಅವಕಾಶಗಳು (ರೂ.ಲಕ್ಷಗಳಲ್ಲಿ)<br>ಅ. ಅನುತ್ಪಾದಕ ಆಸ್ತಿಗಳು<br>ಆ. ಸರ್ಕಾರಿ ಭದ್ರತೆಗಳ ಸವಕಳಿ ನಿಧಿ<br>ಇ. ಉತ್ಪಾದಕ ಆಸ್ತಿಗಳು | 31.03.2020 ಕ್ಕೆ<br>1164.98<br>278.85<br>120.25 | ಕೊರತೆಗೆ ಅವಕಾಶ ಕಲ್ಪಿಸಿದೆ |
| 11. | ಅವಕಾಶಗಳ ಚಲನವಲನ (ರೂ. ಲಕ್ಷಗಳಲ್ಲಿ)<br>ಅ. ಅನುತ್ಪಾದಕ ಆಸ್ತಿಗಳಿಗೆ<br>ಆ. ಹೂಡಿಕೆ ಮೇಲೆ ಸವಕಳಿ<br>ಇ. ಉತ್ಪಾದಕ ಆಸ್ತಿಗಳ ಮೇಲೆ | 31.03.2019 31.03.2020<br>948.63 1164.98<br>124.07 278.85<br>120.25 120.25 | 31.3.2020ರ ಅಂತ್ಯಕ್ಕೆ ಇದ್ದ Non SLR ಹೂಡಿಕೆಗಳು ರೂ2798.48 ಲಕ್ಷಗಳು 31.3.2020ರ ಅಂತ್ಯಕ್ಕೆ ಇದ್ದ ಅನುತ್ಪಾದಕ Non SLR ಹೂಡಿಕೆಗಳು ರೂ2798.48ಲಕ್ಷಗಳು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ (RBI ನಿರ್ದೇಶನ ರೀತಿ) ಪ್ರತ್ಯೇಕವಾಗಿ ಪ್ರತಿಬಿಂಬಿಸಿದೆ. |
| 12. | Foreign Currency ಆಸ್ತಿ ಮತ್ತು ಜವಾಬ್ದಾರಿಗಳು | ಅನ್ವಯಿಸುವುದಿಲ್ಲ | |
| 13. | ಡೆಪಾಸಿಟ್ ಇನ್‌ಶೂರೆನ್ಸ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್/ ವಿಮೆ ಪಾವತಿ ಬಗ್ಗೆ. | ಮೊದಲನೇ ಕಂತು<br>ರೂ. 22,05,280.00<br>ಎರಡನೇ ಕಂತು<br>ರೂ. 22,99,970.00 | ದಿನಾಂಕ : 30.09.2019ರ ಅರ್ಧ ವಾರ್ಷಿಕ ಅವಧಿಗೆ<br>ದಿನಾಂಕ : 31.3.2020ರ ಅರ್ಧ ವಾರ್ಷಿಕ ಅವಧಿಗೆ |
| 14. | ಆರ್.ಬಿ.ಐ ಗೆ ದಂಡ ಪಾವತಿಸಿರುವುದು. | ಯಾವುದು ಇರುವುದಿಲ್ಲ | |

| | | | |
|---|---|---|---|
| 15. | ಪುನಶ್ಚೇತನಗೊಂಡ ಖಾತೆಗಳು | ಯಾವುದು ಇರುವುದಿಲ್ಲ | |
| 16. | ಸ್ಥಿರಾಸ್ತಿಗಳ ಮೌಲ್ಯ/ ಮರು ಮೌಲ್ಯ | - | ವರದಿ ಸಾಲಿನಲ್ಲಿ ಮೌಲೀಕರಣ ಪದ್ಧತಿಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ ಮತ್ತು ಯಾವುದೇ ಆಸ್ತಿಗಳನ್ನು ಮರುಮೌಲೀಕರಣ ಮಾಡಿರುವುದಿಲ್ಲ. |
| 17. | ಠೇವಣಿದಾರರ ಶಿಕ್ಷಣ ಮತ್ತು ಜಾಗೃತ ನಿಧಿ (DEAF) | ಅ) DEAF ಗೆ ವರ್ಗಾಯಿಸಿದ ಆರಂಭದ ಮೊತ್ತ ರೂ. 80,48,788.00<br>ಆ) ವರದಿ ಸಾಲಿನಲ್ಲಿ ವರ್ಗಾಯಿಸಿದ ಮೊತ್ತ ರೂ. 38,72,059.60<br>ಇ) DEAF ನಿಂದ ವಾಪಸ್ಸಾದ ಮೊತ್ತ ರೂ. 2,29,469.00<br>ಈ) DEAF ನಲ್ಲಿದ್ದ ಅಂತಿಮ ಮೊತ್ತ ರೂ. 1,16,91,378.60 | |
| 18. | ಕೋವಿಡ್–19 ರೆಗ್ಯೂಲೇಟರಿ ಪ್ಯಾಕೇಜ್ ಅನ್ವಯ ಮಾರೊಟೋರಿಯಮ್ ಸೌಲಭ್ಯ ವಿಸ್ತರಿಸಿದ ಮತ್ತು ಮುದ್ದತ್ತು ಮೀರಿದ ಮೊತ್ತಗಳಿಗೆ ಕಲ್ಪಿಸಿದ ಅವಕಾಶದ ವಿವರಗಳು ಈ ಕೆಳಗಿನಂತಿರುತ್ತವೆ | | |
| | 1. ಮಾರೊಟೋರಿಯಮ್ ಸೌಲಭ್ಯ ಒದಗಿಸಿದ ಖಾತೆಗಳಿಗೆ ಸಂಬಂಧಿಸಿದಂತೆ ಖಾತೆಗಳಲ್ಲಿದ್ದ ಒಟ್ಟು ಬಾಕಿ ಮೊತ್ತ | ರೂ. 2214.46 | |
| | 2. ಆಸ್ತಿಗಳ ವರ್ಗೀಕರಣದ ಅನುಕೂಲತೆ ಪಡೆದ ಖಾತೆಗಳಲ್ಲಿದ್ದ ಬಾಕಿ ಮೊತ್ತ | ರೂ. 605.80 | |
| | 3. ದಿ.31.03.2020ಕ್ಕೆ ಈ ಮೇಲಿನ ಖಾತೆಗಳಿಗೆ ಕಲ್ಪಿಸಿದ ಸಾಮಾನ್ಯ ಅವಕಾಶ (ಶೇ.5 ರಂತೆ) | ರೂ. 30.29 | |
| | 4. ಕಲ್ಪಿಸಿದ ಸಾಮಾನ್ಯ ಅವಕಾಶ ಮೊತ್ತದಿಂದ ಹೊಂದಾಣಿಕೆ ಮಾಡಿಕೊಂಡ ಮೊತ್ತ | ಯಾವುದು ಇರುವುದಿಲ್ಲ | |

ಸಹಿ/–
**(ಎಸ್. ಅನುರಾಧ)**
ಹಿರಿಯ ವ್ಯವಸ್ಥಾಪಕರು

ಸಹಿ/–
**(ಡಿ.ಎ. ಅಮೃತ)**
ಕಾರ್ಯದರ್ಶಿ

ಸಹಿ/–
**( .ನರಸಿಂಹಮೂರ್ತಿ)**
ನಿರ್ದೇಶಕರು

ಸಹಿ/–
**(ವಿ. ಶ್ರೀನಿವಾಸಯ್ಯ)**
ನಿರ್ದೇಶಕರು

ಸಹಿ/–
**(ಡಾ಼ಃ ಎಂ.ವೀರಪ್ಪ)**
ಉಪಾಧ್ಯಕ್ಷರು

ಸಹಿ/–
**(ಡಾಃ ಎಂ.ಸಿ.ಜಗತ್)**
ಅಧ್ಯಕ್ಷರು

## ಲೆಕ್ಕಪರಿಶೋಧನಾ ದೃಢೀಕರಣ ಪತ್ರ

ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಬೆಂಗಳೂರು ಇದರ ದಿನಾಂಕ 31.03.2020 ರಲ್ಲಿದ್ದಂತೆ ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ಬ್ಯಾಂಕಿನ ಲೆಕ್ಕ ಪುಸ್ತಕ ಮತ್ತು ದಾಖಲೆಗಳನ್ನು ಆದರಿಸಿ ಹಾಗೂ ಅಗತ್ಯವಿದ್ದಲ್ಲಿ ಬ್ಯಾಂಕಿನ ಸಂಬಂಧಿಸಿದ ಅಧಿಕಾರಿಗಳ ಸಮಜಾಯಿಷಿಯನ್ನು ಪಡೆದು ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಈ ಪ್ರಮಾಣ ಪತ್ರಕ್ಕೆ ಅನುಬಂಧಿಸಿದ ನನ್ನ ಪ್ರತ್ಯೇಕ ವರದಿಯ ಗಮನಿಕೆಗಳಗೊಳಪಟ್ಟ ಹಾಗೂ ದಿನಾಂಕ 31.03.2020 ರಲ್ಲಿದ್ದಂತೆ ನಿಜವಾದ ಮತ್ತು ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತೇನೆ.

**'ಪರಿಶೀಲಿಸಿದೆ'**
ಮೆಸರ್ಸ್ ಪಂಪಣ್ಣ ಅಂಡ್ ಕಂಪನಿ
ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ
ಸಹಿ/–
(ಪಂಪಣ್ಣ)
ಮಾಲೀಕರು

ದಿನಾಂಕ : 20.11.2020
ಸ್ಥಳ : ಬೆಂಗಳೂರು

# ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಜಯನಗರ, ಬೆಂಗಳೂರು – 560 011 ಇದರ**

ಸನ್ 2019–2020ನೇ ಸಾಲಿನ ಲೆಕ್ಕಪರಿಶೋಧನಾ ವರದಿ

**(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನ್ಯತೆಗಳ ಬಗ್ಗೆ 37ನೇ ಕಂಡಿಕೆಯನ್ನು ಓದುವುದು)**

ಭಾಗ – 1

## 'ಶಾಸನಬದ್ಧ ಲೆಕ್ಕ ಪರಿಶೋಧಕರ ಸ್ವತಂತ್ರ ವರದಿ'

**1) ಆರ್ಥಿಕ ತ:ಖ್ತೆಗಳ ಬಗ್ಗೆ ವರದಿ :**

ನಾವು **"ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ",**ಇದರ ಸನ್ 2019–20 ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 63(1) ರಲ್ಲಿ ಪ್ರದಪ್ತವಾದ ಅಧಿಕಾರದಂತೆ ಕೈಕೊಂಡಿದ್ದು ಅದರಲ್ಲಿ ಬ್ಯಾಂಕಿನ 8 ಶಾಖೆಗಳ ಲೆಕ್ಕ ಪರಿಶೋಧಿತ ತ:ಖ್ತೆಗಳು ಸೇರಿದಂತೆ ದಿ. 31–03–2020 ರಂತ್ಯದ ಲಾಭ ಹಾನಿ ತ:ಖ್ತೆಯು ಹಾಗೂ ದಿ. 31–03–2020 ಕ್ಕೆ ಇರುವ ಸಾಲ ಜಿಂದಗಿ ತ:ಖ್ತೆಯು ಅಲ್ಲದೆ, ಬ್ಯಾಂಕಿನ ಲೆಕ್ಕ ಪತ್ರಗಳ ಪದ್ಧತಿಗಳ ಸಂಕ್ಷಿಪ್ತ ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡಿರುತ್ತದೆ.

**2) ಆರ್ಥಿಕ ತ:ಖ್ತೆಗಳ ಕುರಿತು ಆಡಳಿತ ಮಂಡಳಿಯ ಜವಾಬ್ದಾರಿ :**

ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರಲ್ಲಿರುವ ಅವಕಾಶಗಳಂತೆ ಅಲ್ಲದೆ ರಿಸರ್ವ ಬ್ಯಾಂಕು, ನಾಬಾರ್ಡ, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಆರ್ಥಿಕ ತಖ್ತೆಗಳನ್ನು ಸಿದ್ದಪಡಿಸುವುದು ಬ್ಯಾಂಕಿನ ಆಡಳಿತ ಮಂಡಳಿಯ ಜವಾಬ್ದಾರಿಯಾಗುತ್ತದೆ.

**3) ಶಾಸನಬದ್ಧ ಲೆಕ್ಕ ಪರಿಶೋಧಕರ ಜವಾಬ್ದಾರಿ :**

ನಾವು ಭಾರತೀಯ ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಯವರು ನಿರ್ದೇಶಿಸಿರುವ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಸನ್ 2019–20 ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನೆ ಕೈಕೊಂಡಿದ್ದು, ಸದರಿ ಮಾರ್ಗಸೂಚಿಗಳ ಪ್ರಕಾರ ಬ್ಯಾಂಕಿನ ಲೆಕ್ಕ ಪರಿಶೋಧಿತ ಆರ್ಥಿಕ ತ:ಖ್ತೆಗಳು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ ನೈತಿಕ ಅಗತ್ಯತೆಗಳ ಮೇರೆಗೆ ಖಚಿತ ಅಭಿಪ್ರಾಯ ನೀಡುವುದು ನಮ್ಮ ಮುಖ್ಯ ಜವಾಬ್ದಾರಿಯಾಗುತ್ತದೆ.

**4)** ನಮ್ಮ ಲೆಕ್ಕ ಪರಿಶೋಧನೆಯ ವ್ಯಾ್ತಯು ಬ್ಯಾಂಕಿನ ಆರ್ಥಿಕ ತ:ಖ್ತೆಗಳು ಬ್ಯಾಂಕಿನ ಕಾರ್ಯವಿಧಾನವನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಕುರಿತು ಬಹಿರಂಗ ಪಡಿಸುವುದು, ಅಲ್ಲದೆ ಲೆಕ್ಕ ಪರಿಶೋಧಕರ ತೀ ೯ನಲ್ಲಿ ಅಪಾಯದ ಮೌಲ್ಯಮಾಪನ ಮತ್ತು ವಾಸ್ತವಿಕ ತಪ್ಪು ಹೇಳಿಕೆಗಳು ನೀಡುತ್ತಿರುವುದಿಲ್ಲವೆಂಬ ಬಗ್ಗೆ, ಬ್ಯಾಂಕಿನ ಆಂತರಿಕ ನಿಯಂತ್ರಣ ಪದ್ಧತಿಯಂತೆ ಬ್ಯಾಂಕು ಕ್ರಮ ಕೈಕೊಂಡು ಆರ್ಥಿಕ ತ:ಖ್ತೆಗಳನ್ನು ತಯಾರಿಸುವ ಬಗ್ಗೆ, ಬ್ಯಾಂಕು ಅಳವಡಿಸಿರುವ ಲೆಕ್ಕ ಪತ್ರಗಳ ಪದ್ಧತಿಯ ಮೌಲೀಕರಣ ಬಗ್ಗೆ, ಅಲ್ಲದೆ ಆಡಳಿತ ಮಂಡಳಿಯವರ ಲೆಕ್ಕಗಳ ಅಂದಾಜುಗಳು ಸಮಂಜಸವಾಗಿರುವ ಬಗ್ಗೆ ಹಾಗೂ ಬ್ಯಾಂಕಿನ ಆರ್ಥಿಕ ತ:ಖ್ತೆಗಳ ಒಟ್ಟಾರೆ ಪ್ರಸ್ತುತಿ ಬಗ್ಗೆ ವಿಮರ್ಷೆ ಮುಂತಾದವುಗಳನ್ನು ಒಳಗೊಂಡಿರುತ್ತದೆ.

5) ಬ್ಯಾಂಕಿನ ಲೆಕ್ಕ ಪರಿಶೋಧನೆಗೆ ಲಭ್ಯವಾಗಿರುವ ದಾಖಲಾತಿಗಳು ಲೆಕ್ಕ ಪರಿಶೋಧನೆಯ ಬಗ್ಗೆ ನಮ್ಮ ಅಭಿಪ್ರಾಯ ನೀಡಲು ಸಾಕಷ್ಟು ಇರುವುದು ಎಂದು ನಾವು ನಂಬುತ್ತೇವೆ.

6) **ಅಭಿಪ್ರಾಯ :**

ನಮ್ಮ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳಂತೆ, ಬ್ಯಾಂಕಿನ ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಹಾಗೂ ಮಾಹಿತಿಗಳ ಮೇಲಿನ ಟಿಪ್ಪಣಿಗಳು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರಲ್ಲಿರುವ ಅವಕಾಶಗಳಂತೆ ಅಲ್ಲದೆ ರಿಸರ್ವ್ ಬ್ಯಾಂಕು, ನಾಬಾರ್ಡ, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಹಾಗೂ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲಿನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಸಿದ್ದಪಡಿಸುವುದು ಬ್ಯಾಂಕಿನ

1) ದಿನಾಂಕ 31.03.2020 ರಂತ್ಯಕ್ಕೆ ಇರುವ ಆಘಾವೆ ಪತ್ರಿಕೆಯು,
2) ಸನ್ 2019–2020 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಬ್ಯಾಂಕಿನ ನಿಜವಾದ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭವನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇವೆ.

7) **ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳ ವರದಿ :**

ಬ್ಯಾಂಕಿನ ಸಾಲ ಜಿಂದಗಿ ತ:ಖ್ತೆಯು ಹಾಗೂ ಲಾಭಹಾನಿ ತ:ಖ್ತೆಯು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರ ಬ್ಯಾಂಕುಗಳಿಗೆ ಅನ್ವಯವಾಗುವಂತೆ) ರಲ್ಲಿ ಪ್ರತ್ಯೇಕವಾಗಿ ನಿಗದಿಪಡಿಸಿರುವ ನಮೂನೆ 'ಎ' ಮತ್ತು 'ಬಿ' ರಂತೆ ಇರುತ್ತದೆ.

8) ನಾವು ವರದಿಸುವುದೇನೆಂದರೆ :

ಎ) ಲೆಕ್ಕ ಪರಿಶೋಧನಾ ಕಾಲಕ್ಕೆ ನಾನು ಎಲ್ಲ ಅವಶ್ಯಕ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದಿದ್ದು, ಅವುಗಳು ನನ್ನ ಜ್ಞಾನ ಹಾಗೂ ನಂಬಿಕೆಯ ಪ್ರಕಾರ ತೃ ್ತಕರವಾಗಿ ಇರುತ್ತದೆ.

ಬಿ) ಬ್ಯಾಂಕಿನ ಶಾಖೆಗಳಿಂದ ಹಾಗೂ ಕಚೇರಿಯಿಂದ ಸ್ವೀಕೃತವಾಗಿರುವ ತ:ಖ್ತೆಗಳು ಹಾಗೂ ಬ್ಯಾಂಕಿನಲ್ಲಿ ಇಟ್ಟಿರುವ ಲೆಕ್ಕ ಪುಸ್ತಕಗಳು ಕಾನೂನು ಬದ್ಧವಾಗಿ ಇರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

ಸಿ) ನಮ್ಮ ತಿಳವಳಿಕೆ ಪ್ರಕಾರ ಬ್ಯಾಂಕಿನ ವ್ಯವಹಾರಗಳು ಬ್ಯಾಂಕಿನ ಲೆಕ್ಕ ಪುಸ್ತಕಗಳ ಜೊತೆ ಹಾಗೂ
ನಿಯತಕಾಲಿಕೆಗಳೊಂದಿಗೆ ಹೊಂದಾಣಿಕೆ ಇರುತ್ತದೆ.

ಡಿ) ಭಾರತದಲ್ಲಿ ಸರ್ವಸಾಧಾರಣವಾಗಿ ಉಪಯೋಗಿಸುವ ಲೆಕ್ಕಪತ್ರ ಮಾನದಂಡವು ಬ್ಯಾಂಕ್ ಅಳವಡಿಸಿದೆ.

9) ನಮ್ಮ ಅಭಿಪ್ರಾಯದಲ್ಲಿ ಈ ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯತಿರಿಕ್ತ ಶರಾ ಇರುವುದಿಲ್ಲ .

ಎ) ಕಾನೂನು, ನಿಯಮಗಳು ಹಾಗೂ ಉಪನಿಯಮಗಳ ವ್ಯತಿರಿಕ್ತವಾಗಿ ಕೈಕೊಂಡಿರುವ ಎಲ್ಲ ವ್ಯವಹಾರಗಳು.

ಆರ್.ಬಿ.ಐ. ನ ಮಾರ್ಗಸೂಚಿಗಳ ಪ್ರಕಾರ Non-SLR ಹೂಡಿಕೆಗಳು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ. 10ಕ್ಕೆ ಮೀರದಂತೆ ಮತ್ತು ಕಳೆದ ಸಾಲಿನ ಅಂತ್ಯಗೊಂಡ ದಿನದ ಬಂಡವಾಳ ನಿಧಿಯ ಶೇ. 15 ಕ್ಕೆ ಮೀರದಂತೆ ಏಕ ಸಂಸ್ಥೆಯಲ್ಲಿ ಹೂಡಿಕೆ ಇರಬಹುದಾಗಿದ್ದು, ಬ್ಯಾಂಕಿನ ವರ್ಷಾಂತ್ಯದ Non-SLR ಹೂಡಿಕೆಗಳು ಕಳೆದು ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ. 6.41 ಇರುವುದನ್ನು ಗಮನಿಸಲಾಗಿದೆ. ಆದರೆ ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್ಸ್‌ನಲ್ಲಿ ಗರಿಷ್ಠ ರೂ. 436.69 ಲಕ್ಷಗಳ ಬದಲಾಗಿ ರೂ. 2788.48 ಲಕ್ಷಗಳಷ್ಟು ಹೂಡಿಕೆ ಮಾಡಲಾಗಿದ್ದು, ಇದು ರೂ. 2351.79 ಲಕ್ಷಗಳಷ್ಟು ಹೆಚ್ಚು ಇರುತ್ತದೆ ಮತ್ತು ಈ ಕಮರ್ಷಿಯಲ್ ಪೇಪರ್ಸ್‌ಗಳ ಮೇಲೆ ನವೆಂಬರ್ 2019 ರಿಂದ ಬಡ್ಡಿ ಬರದೇ ಇರುವುದರಿಂದ ಇದು ಅನುತ್ಪಾದಕ Non-SLR ಹೂಡಿಕೆಯಾಗಿರುತ್ತದೆ. ಆರ್.ಬಿ.ಐ.ನ ಮಾರ್ಗಸೂಚಿಗಳ ಪಾಲನೇ ಮಾಡದೇ ಇರುವುದರಿಂದ ಈ ಅನುತ್ಪಾದಕ Non-SLR ಹೂಡಿಕೆಗೆ ಸಂಬಂಧಿಸಿದಂತೆ ರೂ. 43.67 ಲಕ್ಷಗಳ ಬದಲಾಗಿ ರೂ. 278.85 ಲಕ್ಷಗಳಷ್ಟು ಅಂದರೆ ರೂ. 235.18 ಲಕ್ಷಗಳಷ್ಟು ಹೆಚ್ಚು ಅವಕಾಶ ಕಲ್ಪಿಸಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ. 1,57,77,623/– ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಬಿ) ಬ್ಯಾಂಕಿನ ಲೆಕ್ಕ ಪುಸ್ತಕದಲ್ಲಿ ಕೈಬಿಟ್ಟಿರುವ ಎಲ್ಲ ವ್ಯವಹಾರಗಳು : ವ್ಯತಿರಿಕ್ತ ಷರಾ ಕಂಡು ಬಂದಿರುವುದಿಲ್ಲ.

ಸಿ) ಬ್ಯಾಂಕಿನ ವೆಚ್ಚಗಳ ಹಾಗೂ ಬರತಕ್ಕ ಇರುವ ಅಂಶಗಳಲ್ಲಿ ಇರುವ ನ್ಯೂನ್ಯತೆಗಳು: ವ್ಯತಿರಿಕ್ತ ಷರಾ ಕಂಡು ಬಂದಿರುವುದಿಲ್ಲ.

ಡಿ) ಬ್ಯಾಂಕಿನ ಯಾವುದೇ ಆಸಿಗಳು ಹಾಗೂ ಬ್ಯಾಂಕಿಗೆ ಬರತಕ್ಕ ಇರುವ ಯಾವುದೇ ಬಾಬ್ತು ಮುಳುಗುವ ಹಾಗೂ ಸಂಶಯಾತ್ಮಕ ಆಸ್ತಿ ಎಂದು ಲೆಕ್ಕ ಪರಿಶೋಧಕರು ಪರಿಗಣಿಸಿದಲ್ಲಿ ಅವುಗಳ ಸಂಪೂರ್ಣ ವಿವರ: ವ್ಯತಿರಿಕ್ತ ಷರಾ ಕಂಡು ಬಂದಿರುವುದಿಲ್ಲ.

ಇ) ನಿಬಂಧಕರಿಂದ ಗೊತ್ತುಪಡಿಸಿರುವ ಇನ್ನಿತರ ಯಾವುದೇ ಅಂಶಗಳು: ವ್ಯತಿರಿಕ್ತ ಷರಾ ಕಂಡು ಬಂದಿರುವುದಿಲ್ಲ.

10) ಬ್ಯಾಂಕನ್ನು ಸನ್ 2019-2020ನೇ ಸಾಲಿನಲ್ಲಿ "ಸಿ" ವರ್ಗದಲ್ಲಿ ವರ್ಗೀಕರಿಸಲಾಗಿದೆ.

ಪಂಪಣ್ಣ ಮತ್ತು ಕಂಪನಿ,
ಸನ್ನದು ಲೆಕ್ಕಪರಿಶೋಧಕರ ಪರವಾಗಿ,
ಸಂಸ್ಥೆಯ ನೋಂದಣಿ ಸಂಖ್ಯೆ 010225S

ದಿನಾಂಕ:20.11.2020
ಸ್ಥಳ :ಬೆಂಗಳೂರು

ಸಹಿ/–
(ಪಂಪಣ್ಣ)ಮಾಲೀಕರು
ಸದಸ್ಯತ್ವದ ಸಂಖ್ಯೆ :207100
UDIN : 20207100AAAABE2947

## ಭಾಗ –2

## ಬ್ಯಾಂಕಿನ ಪರಿಚಯಾತ್ಮಕ ವಿವರಗಳು

(1)<u>ಬ್ಯಾಂಕಿನ ವಿವರಗಳು:</u>

| | | |
|---|---|---|
| 1) | ಬ್ಯಾಂಕಿನ ಹೆಸರು | ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ |
| 2) | ಬ್ಯಾಂಕಿನ ವಿಳಾಸ | 30, 15ನೇ ಅಡ್ಡರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು560011 |
| 3) | ಬ್ಯಾಂಕಿನ ನೋಂದಣಿ ಸಂಖ್ಯೆ ಹಾಗೂ ದಿನಾಂಕ | ಸಿ4/ಆರ್ ಸಿ ಎಸ್/2764/74–75 ದಿನಾಂಕ 21.08.1974 |
| 4) | ರಿಸರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್‌ಲೈಸನ್ಸ್ ಕ್ರಮಾಂಕ ಹಾಗೂ ದಿನಾಂಕ | |
| | ಆಡಳಿತ ಕಛೇರಿ/ ಜಯನಗರ ಶಾಖೆ | ಎ.ಸಿ.ಡಿ.ಎಮ್.ವೈ. 50 ದಿನಾಂಕ 03/01/1975 |
| | ಮತ್ತೀಕೆರೆ ಶಾಖೆ | ಯುಬಿಡಿ(ಬಿ ಎಲ್)1987 ದಿನಾಂಕ 27/11/1987 |
| | ವಿಜಯನಗರ ಶಾಖೆ | ಯುಬಿಡಿ (ಬಿ ಎಲ್)(6243)07.01.01/95–96 ದಿನಾಂಕ 05/06/1996 |
| | ಇಂದಿರಾನಗರ ಶಾಖೆ | ಯುಬಿಡಿ (ಬಿ ಎಲ್)(1452)07.01.01/96–97 ದಿನಾಂಕ 25/11/1996 |
| | ಕೆಂಗೇರಿ ಶಾಖೆ | ಯುಬಿಡಿ (ಬಿ ಎಲ್)196 ದಿನಾಂಕ 29/03/1997 |
| | ಯಲಹಂಕ ಶಾಖೆ | ಯುಬಿಡಿ (ಬಿ ಎಲ್)3151 ಒ ಕೆ ದಿನಾಂಕ 09/02/1998 |
| | ಬಿ.ಇ.ಎಸ್. ಕಾಲೇಜು | ಯುಬಿಡಿ (ಬಿ ಎಲ್)3556/07.02.013/2008–09 ದಿನಾಂಕ 03/03/2009 |
| | ಬೇಗೂರು | ಡಿಸಿಬಿಎಸ್ (ಬಿ ಎಲ್)(1414)07.02.013/2017–18 ದಿನಾಂಕ 07/12/2017 |
| 5) | ಬ್ಯಾಂಕಿನ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಉಪನಿಯಮ ಸಂಖ್ಯೆ 3ರ ಪ್ರಕಾರ ಬ್ಯಾಂಕಿನ ಕಾರ್ಯ ವ್ಯಾಪ್ತಿಯು ಕರ್ನಾಟಕ ರಾಜ್ಯದ 5 ಜಿಲ್ಲೆಗಳು ಅಂದರೆ ಬೆಂಗಳೂರು. ಬೆಂಗಳೂರು ಗ್ರಾಮಾಂತರ, ರಾಮನಗರ, ಮೈಸೂರು ಹಾಗೂ ಹಾಸನ ಜಿಲ್ಲೆಗಳಿಗೆ ಸೀಮಿತವಾಗಿರುತ್ತದೆ . |

**2. ಬ್ಯಾಂಕಿನ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಬ್ಯಾಂಕಿನ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)**

ಬ್ಯಾಂಕಿನ ಉಪ ನಿಯಮ 5 ರನ್ವಯ ಬ್ಯಾಂಕಿನ ಕೆಲವು ಪ್ರಮುಖ ಧ್ಯೇಯ ಮತ್ತು ಉದ್ದೇಶಗಳು ಈ ಕೆಳಗಿನಂತಿರುತ್ತವೆ

| ಬೈಲಾ ಸಂ. | ಉದ್ದೇಶಗಳು |
|---|---|
| 5.1 | ಬ್ಯಾಂಕಿನ ಸದಸ್ಯರು/ಸಹ ಸದಸ್ಯರು, ನಾಮ ಮಾತ್ರ ಸದಸ್ಯರು ಮತ್ತು ಬ್ಯಾಂಕಿನ ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಹಿಸುವುದು. |
| 5.2 | 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ಸಹಕಾರ ಸಂಘಗಳಿಗೆ ಅನ್ವಯವಾಗುವ) ಕಲಂ 5 (ಬಿ)ನಲ್ಲಿ ವಿವರಿಸಿದಂತೆ, ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು ಮತ್ತು ಸದರಿ ಕಾಯ್ದೆಯ ಕಲಂ 6ರ ಪ್ರಕಾರ ಇತರೆ ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು. |
| 5.3 | ಹಣವನ್ನು ಸಂಗ್ರಹಿಸುವುದು ಅಥವಾ ಸಾಲವಾಗಿ ಪಡೆಯುವುದು. |
| 5.4 | ಸದಸ್ಯರ ಮತ್ತು ಸಮಾಜದಲ್ಲಿನ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಯೋಜನೆಗಳನ್ನು ತಯಾರಿಸುವುದು ಮತ್ತು ಹಣಕಾಸಿನ ಸಹಾಯ ಮಾಡುವುದು. |
| 5.9 | ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲಗಳನ್ನು ಸರ್ಕಾರದ ಪ್ರಾಮಿಸರಿ ನೋಟುಗಳಲ್ಲಿ, ಋಣ ಪತ್ರಗಳಲ್ಲಿ, ಷೇರುಗಳಲ್ಲಿ ಮತ್ತು ಸರಕಾರದ ಖಾತರಿ ಹೊಂದಿದ ಸಹಕಾರ ಸಂಘಗಳ ಸಾಲ ಪತ್ರಗಳಲ್ಲಿ ಮತ್ತು ಕಾಯ್ದೆಯ ಕಲಂ 58ರನ್ವಯ ಇತರೆ ಸಂಸ್ಥೆಗಳಲ್ಲಿ ತೊಡಗಿಸುವುದು. |

## 3. ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ : (ದಿನಾಂಕ : 31.03.2020ರಲ್ಲಿದ್ದಂತೆ)

| | |
|---|---|
| 1) ಅಧ್ಯಕ್ಷರು | ಡಾ: ಎಂ.ಸಿ. ಜಗತ್ |
| 2) ಉಪಾಧ್ಯಕ್ಷರು | ಡಾ: ಎಂ. ವೀರಪ್ಪ |
| | 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು. | ಬೋನಸ್ ಕಾಯಿದೆ ಅನ್ವಯಿಸುವುದಿಲ್ಲ. ಆದರೆ ಎಕ್ಸ್‌ಗ್ರೇಷಿಯಾ ನೀಡಲು ರೂ..10,92,699/– ಗಳ ಅವಕಾಶವನ್ನು ಕಲ್ಪಿಸಿಕೊಂಡಿರುತ್ತಾರೆ. |
| | 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆಯಾಗಿರುತ್ತದೆ. |
| | 11 | ಸಿಬ್ಬಂದಿಗಾಗಿ ಖರ್ಚುವಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ? | ಮಿತಿಯೊಳಗಿರುತ್ತದೆ. |

**ಸಿಬ್ಬಂದಿಗಳಿಗೆ ಮತ್ತು ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ**

| | |
|---|---|
| ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ದಿನಾಂಕ 28.05.2019 ರಂದು ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳಿಯವರು "ಪ್ರೋಗ್ರಾಮ್ ಆನ್ ಕ್ರೆಡಿಟ್ ಮ್ಯಾನೇಜ್‌ಮೆಂಟ್, ಇನ್ವೆಸ್ಟ್‌ಮೆಂಟ್, ರಿಸೆಂಟ್ ಆರ್.ಬಿ.ಐ. ಪಾಲೀಸೀಸ್ ಮತ್ತು ಟ್ಯಾಕ್ಸ್ ಇಸ್ಯೂಸ್" ವಿಷಯದ ಮೇಲೆ ನಡೆಸಿದ ಒಂದು ದಿನದ ತರಬೇತಿ ಕಾರ್ಯಕ್ರಮಕ್ಕೆ<br>ಶ್ರೀಮತಿ. ಸಪ್ನಾ ಬಿ.ಕೆ. –ಎಫ್.ಡಿ.ಸಿ. ಇವರು ಹಾಜರಾಗಿರುವುದಾಗಿ ತಿಳಿಸಿರುತ್ತಾರೆ. |

| | |
|---|---|
| ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ ಯಾವುದೂ ಇರುವುದಿಲ್ಲ. |
| ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ವರದಿ ಸಾಲಿನಲ್ಲಿ ಸದಸ್ಯರಿಗೆ ಯಾವುದೇ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿ ರುವುದಿಲ್ಲ. |
| ಸದಸ್ಯರಿಗೆ ನಡೆದ ತರಬೇತಿ ಕಾರ್ಯ ಕ್ರಮಗಳಿಗೆ ಆದ ವೆಚ್ಚ | ಅನ್ವಯಿಸುವುದಿಲ್ಲ. |

**ಬ್ಯಾಂಕಿನ ಆರ್ಥಿಕ ಫಲಿತಾಂಶಗಳ ವಿವರಗಳು**

**ಹಣಕಾಸಿನ ವರದಿಯ ವಿಶ್ಲೇಷಣೆ**

| | **ಪ್ರಸಕ್ತ ಸಾಲು (ರೂ.ಲಕ್ಷಗಳಲ್ಲಿ)** | **ಹಿಂದಿನ ಸಾಲು (ರೂ.ಲಕ್ಷಗಳಲ್ಲಿ)** |
|---|---|---|
| ಬ್ಯಾಂಕಿನ ಒಟ್ಟು ವಹಿವಾಟು (ಪಡೆದ ಠೇವಣಿ + ಕೊಟ್ಟ ಸಾಲ ಮತ್ತು ಮುಂಗಡ) | ಅನ್ವಯಿಸುವುದಿಲ್ಲ. | ಅನ್ವಯಿಸುವುದಿಲ್ಲ. |
| ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳ | 50496.72 | 48452.80 |
| ಬ್ಯಾಂಕಿನ ಲಾಭ ಅಥವಾ ನಷ್ಟ | 32.45 | 330.82 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | 32.45 | 330.82 |

**33 ತಲಾ ಷೇರಿನ ಗಳಿಕೆ:**

| | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
|---|---|---|
| ನಿವ್ವಳ ಲಾಭ | ರೂ.32.45ಲಕ್ಷಗಳು | ರೂ. 330.82ಲಕ್ಷಗಳು |
| ಒಟ್ಟು ಷೇರುಗಳು | 235158 | 223504 |
| ತಲಾ ಷೇರಿನ ಗಳಿಕೆ | 13.80 | 148.02 |

ಕೆಲವು ಸದಸ್ಯರಿಂದ ಈ ಹಿಂದೆ ಪ್ರತಿ ಷೇರಿಗೆ ರೂ.25 ರಂತೆ ಸಂಗಹಿಸಲಾಗಿದ್ದು, ಅವುಗಳು ಹಾಗೆಯೇ ಮುಂದುವರೆದಿದ್ದರಿಂದ, ಒಟ್ಟು ಷೇರು ಬಂಡವಾಳವನ್ನು ಪ್ರತಿ ಷೇರಿಗೆ ರೂ.500 ರಂತೆ ಗಣನೆಗೆ ತೆಗೆದುಕೊಂಡು ಒಟ್ಟು ಷೇರುಗಳನ್ನು ಮತ್ತು ತಲಾ ಷೇರಿನ ಗಳಿಕೆಯನ್ನು ನಿರ್ಧರಿಸಲಾಗಿರುತ್ತದೆ.

| ಶಾಖೆಗಳು : | | | | | | (ರೂ. ಲಕ್ಷಗಳಲ್ಲಿ) |
|---|---|---|---|---|---|---|
| ಕ್ರ. ಸಂ. | ಶಾಖೆ | ವ್ಯಾಪಾರ ಲಾಭ /ಹಾನಿ | ನಿವ್ವಳ ಲಾಭ/ ಹಾನಿ | ಠೇವಣಿಗಳು | ಸಾಲಗಳು | ಶಾಖಾ ಹೊಂದಾಣಿಕೆ |
| 1 | ಕೇಂದ್ರ ಕಛೇರಿ | – | – | – | – | +15499.67 |
| | ಜಯನಗರ | | (12.30) | 19039.77 | 9864.86 | –9284.76 |
| 2 | ಮತ್ತೀಕೆರೆ | – | 172.55 | 8951.57 | 8574.19 | –472.10 |
| 3 | ವಿಜಯನಗರ | – | (166.63) | 4454.97 | 3218.49 | –1473.66 |
| 4 | ಇಂದಿರಾನಗರ | – | 17.49 | 3327.43 | 2021.42 | –1344.53 |
| 5 | ಕೆಂಗೇರಿ | – | 27.70 | 1852.17 | 1740.19 | –183.74 |
| 6 | ಯಲಹಂಕ | – | 40.08 | 5027.64 | 3513.67 | –1497.12 |
| 7 | ಬಿ.ಇ.ಎಸ್. ಕಾಲೇಜು | – | (29.14) | 2433.48 | 973.11 | –1457.22 |
| 8 | ಬೇಗೂರು | – | (17.30) | 489.02 | 681.18 | +213.46 |
| | ಒಟ್ಟು | | 32.45 | 45576.05 | 30587.11 | |

**ಎ ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ**

| | | |
|---|---|---|
| 1 | ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ, ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಪರೀಕ್ಷಾರ್ಥವಾಗಿ ಪರಿಶೀಲಿಸಿದಾಗ ಅಂತಹ ಯಾವುದೇ ಅಸಮಾನ್ಯ ಎಂಟ್ರಿಗಳನ್ನು ಹಾಕಿರುವುದು ಕಂಡುಬಂದಿರುವುದಿಲ್ಲ. |
| 2 | ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಪ್ರಧಾನ ಕಛೇರಿಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. |
| 3 | ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಸಮನ್ವಯಗಳನ್ನು ತಹಲ್‌ವರೆಗೆ ಮಾಡಿರುತ್ತಾರೆ. |

| | | |
|---|---|---|
| ಬಿ | **ಶಾಖೆಗಳ ಪರಿವೀಕ್ಷಣೆ:** | |
| 1 | ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖೆ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಆಂತರಿಕ ಲೆಕ್ಕಪರಿಶೊಧಕರು ಎಲ್ಲಾ ಶಾಖೆಗಳ ವ್ಯವಹಾರಗಳನ್ನು ಪರಿಶೋಧಿಸಿ ಪ್ರತಿ ತ್ರೈಮಾಸಿಕವಾಗಿ ವರದಿ ಸಲ್ಲಿಸುತ್ತಿದ್ದು , ದಿಃ 31.03.2020 ರವರಿಗೆ ಎಲ್ಲಾ ಶಾಖೆಗಳ ವರದಿಗಳನ್ನು ನೀಡಿರುತ್ತಾರೆ. |
| 2 | ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ವರದಿಗಳಿಗೆ ಹಿಂಬಾಲಿಕೆ ಕ್ರಮವಾಗಿ ಸಂಬಂಧಪಟ್ಟ ಶಾಖೆಗಳ ಅನುಪಾಲನೆ ವರದಿಯನ್ನು ಪಡೆದು ,ಅದನ್ನು ಲೆಕ್ಕ ಮತ್ತು ಲೆಕ್ಕಪರಿಶೋಧನಾ ಉಪಸಮಿತಿಯಲ್ಲಿ ಪರಾಮರ್ಶಿಸಿ, ಆಡಳಿತ ಮಂಡಳಿ ಸಭೆಯಲ್ಲಿ ಅನುಮೋಧನೆ ಪಡೆಯಲಾಗುತ್ತಿದೆ. |
| 3 | ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? | ಶಾಖೆಗಳು ನಿಯುತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿರುತ್ತವೆ. |
| 4 | ಹೊಂದಾಣಿಕೆ ಲೆಕ್ಕಗಳ ಬಗ್ಗೆ –"ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ" – ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ | ಶಾಖೆಗಳ ಡ್ರಾಯಿಂಗ್ ಖಾತೆಗಳನ್ನು ಕೇಂದ್ರ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಡ್ರಾಯಿಂಗ್ ಖಾತೆಗೆ ಪ್ರತಿ ಮಾಸಾಂತ್ಯಕ್ಕೆ ತಾಳೆ ಮಾಡಿಕೊಳ್ಳುವ ಪದ್ದತಿ ಜಾರಿಯಲ್ಲಿದೆ . ದಿನಾಂಕ 31.03.2020 ಕ್ಕೆ ಎಲ್ಲ ಶಾಖೆಗಳ ಡ್ರಾಯಿಂಗ್ ಖಾತೆಯ ಮೊತ್ತಕ್ಕೆ ತಾಳೆ ಇರುತ್ತದೆ. |
| | **ಇತರೆ ಷರಾ/ ಇತರೆ ವಿಷಯಗಳು:** | |
| 1 | ಲೆಕ್ಕನಿರ್ವಹಣಾ ಕಾರ್ಯನೀತಿ/ ಅದು ಲೆಕ್ಕನಿರ್ವಹಣಾ ಪ್ರಮಾಣಕ್ಕನುಗುಣ ವಾಗಿದೆಯೇ? | ಲೆಕ್ಕ ಕಾರ್ಯನಿರ್ವಹಣೆಯ ನೀತಿಯು ಸಾಮಾನ್ಯವಾಗಿ ಲೆಕ್ಕನಿರ್ವಹಣಾ ಮಟ್ಟಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕರ್ನಾಟಕ ಸಹಕಾರ ಸಂಘಗಳ ಇಲಾಖೆಯ ಮಾರ್ಗ ಸೂಚಿಗಳ ಪ್ರಕಾರ ನಿರ್ವಹಿಸಬೇಕಾಗಿದ್ದು, ಅಂತಹ ಲೆಕ್ಕ ನಿರ್ವಹಣಾ ಮಟ್ಟಗಳನ್ನು ಆ ಮಾರ್ಗಸೂಚಿಯಂತೆ ಪರಿಷ್ಕರಿಸಿ ಕೊಂಡಿರುತ್ತಾರೆ. |

| | | |
|---|---|---|
| 2 | ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | ಕ್ರೋಢೀಕರಿಸುವಾಗ ಯಾವುದೇ ಗಮನಾರ್ಹ ಅಂಶಗಳು ಕಂಡು ಬಂದಿರುವುದಿಲ್ಲ. |
| 3 | ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ | ಬ್ಯಾಂಕ್ ಶಿಲ್ಕುಗಳಿಗೆ ಸಂಬಂಧಪಟ್ಟಂತೆ ಸದರಿ ಬ್ಯಾಂಕುಗಳಿಂದ ದೃಢೀಕರಣ ಪತ್ರ ಪಡೆಯಲಾಗಿದ್ದು, ಮತ್ತು ಬ್ಯಾಂಕ್ ಸಮನ್ವಯ ತಃಖ್ತೆಯನ್ನು ತಯಾರಿಸಿದ್ದು , ಆಸ್ತಿ ಮೊತ್ತಕ್ಕೆ ತಾಳೆ ಇದ್ದು, ವರದಿಗೆ ಲಗತ್ತಿಸಲಾಗಿದೆ. |
| 4 | NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವಾರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ದತಿ ಬಗ್ಗೆ | ಅನ್ವಯಿಸುವುದಿಲ್ಲ. |
| 5 | CRAR ನ ಬಗ್ಗೆ ವಿಶ್ಲೇಷಣೆ | ಬ್ಯಾಂಕಿನ ಸ್ವಂತ ಬಂಡವಾಳ / ಆಸ್ತಿಯು ಅರ್.ಬಿ.ಐ ನಿರ್ದೇಶನಗಳ ರೀತಿ ಆಪಾಯದ ಪ್ರಭಾವವಿರುವ ಆಸ್ತಿಗಳಿಗೆ ಹೋಲಿಸಿದಾಗ ಶೆ. 9ರ ಕನಿಷ್ಟ ಮಟ್ಟದ ಮೇಲಿರಬೇಕಾಗಿದ್ದು, ಅದು ವರದಿ ಸಾಲಿನಾಂತ್ಯಕ್ಕೆ ಶೇ. 9.11 ರಷ್ಟು ಇರುತ್ತದೆ |
| 6 | ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | ಹಿಂದಿನ ಸಾಲಿನ ಲಾಭದ ಶೇ. 1 ಕ್ಕಿಂತ ಹೆಚ್ಚಿಗೆ ಕೊಡುಗೆ / ದಾನ ಕೊಟ್ಟಿರುವುದಿಲ್ಲ. |
| 7 | ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಸರಾಸರಿ ವೆಚ್ಚವು (Cost of Deposjt) ಶೇ. 6.88 ರಷ್ಟಿದ್ದು, ಸಾಲಗಳ ಮೇಲಿನ ಸರಾಸರಿ ಆದಾಯವು(Yield on Advançe) ಶೇ. 11.82 ರಷ್ಟಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಅನುಪಾತವು ಸಮರ್ಪಕವಾಗಿರುತ್ತದೆ. |

| | | |
|---|---|---|
| 8 | ಗಣಕೀಕರಣದ ಅಳವಡಿಕೆ ಮತ್ತು ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ. | ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿದ್ದು, ಕೋರ್ ಬ್ಯಾಂಕಿಂಗ್ ಸೇವೆಯ ಲಾಭವನ್ನು ಸಮಂಜಸವಾಗಿ ಪಡೆಯಲಾಗುತ್ತಿರುವುದನ್ನು ಗಮನಿಸಲಾಗಿದೆ. ಆರ್.ಬಿ.ಐ ನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ ಶಾಸನ ಬದ್ದ ಲೆಕ್ಕಪರಿಶೋಧನೆಗೆ ಮುಂಚೆಯೆ ಮಾಹಿತಿ ತಂತ್ರಜ್ಞಾನ (ಇನ್‌ಫಾರ್ಮೇಷನ್ ಸಿಸ್ಟಮ್) ಆಡಿಟ್‌ನ್ನು ಮಾಡಿಸಬೇಕಾಗಿದ್ದು, 2019–20ನೇ ಸಾಲಿಗೆ ಸಂಬಂಧಿಸಿದಂತೆ ಇನ್‌ಫಾರ್ಮೇಷನ್ ಸಿಸ್ಟಮ್ ಆಡಿಟ್‌ನ್ನು ಮಾಡಿಸಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ.<br>**ಅನುವರ್ತನೆ : ಕೋವಿಡ್–19 ಪ್ರಯುಕ್ತ 2019–20ನೇ ಸಾಲಿನ ಐ.ಎಸ್. ಆಡಿಟ್ ಮಾಡಿಸಲಾಗಿರುವುದಿಲ್ಲ. ಐ.ಎಸ್. ಆಡಿಟ್ ಮಾಡಿಸಲು ಕ್ರಮಕೈಗೊಳ್ಳಲಾಗುವುದು.** |
| 9 | ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ. | ಕಂಡಿಕೆ ಸಂಖ್ಯೆ 36 ಮತ್ತು 37 ರಲ್ಲಿ ತಿಳಿಸಿದ ವಿಷಯಗಳನ್ನು ಗಮನಿಸುವುದು ಮತ್ತು ಅನುಪಾಲನೆ ಮಾಡುವುದು ಅವಶ್ಯವಾಗಿರುತ್ತದೆ. |

**34. ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ವಿಮರ್ಷೆ/ವಿಶ್ಲೇಷಣೆ**

ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಕ್ಕೂ ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆ ವಿಮರ್ಷೆ :

(ರೂ. ಲಕ್ಷಗಳಲ್ಲಿ)

| ವಿವರ | | | | | ಪ್ರತಿಶತ ಪ್ರಮಾಣ | | | |
|---|---|---|---|---|---|---|---|---|
| | | ಪ್ರಸಕ್ತ ಸಾಲಿನ ಮೊತ್ತ | ಹಿಂದಿನ ಸಾಲಿನ ಮೊತ್ತ | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | ಹೆಚ್ಚು | ಕಡಿಮೆ |
| 1 | ಒಟ್ಟು ಮಾರಾಟ | – | – | – | | – | – | – |
| | ವ್ಯಾಪಾರ ಲಾಭ | – | – | ಒಟ್ಟು ಮಾರಾಟ | | – | – | – |
| | ವ್ಯಾಪಾರ ನಷ್ಟ | – | – | | | – | – | – |
| 2 | ಒಟ್ಟು ಸರಾಸರಿ ಗುಂತಾವಣಿಗಳು | 16066.85 | 14910.61 | | | – | – | – |
| | ಗುಂತಾವಣಿಗಳು ಮೇಲೆ ಸ್ವೀಕರಿಸಿದ ಬಡ್ಡಿ | 955.24 | 1191.93 | ಒಟ್ಟು | 5.95 | 7.99 | – | 2.04 |
| 3 | ಒಟ್ಟು ನೀಡಿದ ಸಾಲ | 31183.91 | 30959.00 | | | – | – | – |
| | ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ | 3685.60 | 3388.39 | ಒಟ್ಟು ನೀಡಿದ ಸಾಲ | 11.82 | 10.94 | 0.88 | – |
| 4 | ದುಡಿಯುವ ಬಂಡವಾಳ | 50496.72 | 48452.80 | | – | – | – | – |
| | ಇತರೆ ಆದಾಯ | 103.96 | 138.66 | ದುಡಿಯುವ ಬಂಡವಾಳ | 0.21 | 0.29 | – | 0.08 |
| | ಒಟ್ಟು ಪಡೆದ ಸಾಲ | – | – | | | – | – | – |
| 5 | ಸಾಲಗಳ ಮೇಲೆ ಪಾವತಿಸಿದ ಬಡ್ಡಿ | – | – | ಒಟ್ಟು ಪಡೆದ ಸಾಲ | | – | – | – |
| 6 | ಒಟ್ಟು ಠೇವಣಿ | 44789.02 | 43659.49 | | | – | – | – |
| | ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 3083.69 | 2976.82 | ಒಟ್ಟು ಠೇವಣಿ | 6.88 | 6.82 | 0.06 | – |
| | | | | | | | | |

| | | | | | | | | |
|---|---|---|---|---|---|---|---|---|
| | ದುಡಿಯುವ ಬಂಡವಾಳ | 50496.72 | 48452.80 | | – | – | – | – |
| 7 | ಸಿಬ್ಬಂದಿ ವೆಚ್ಚ | 933.39 | 877.75 | | 1.85 | 1.81 | 0.04 | – |
| 8 | ಆಡಳಿತ ವೆಚ್ಚ | 365.04 | 208.96 | | 0.72 | 0.43 | 0.29 | – |
| 9 | ಇತರೆ ವೆಚ್ಚ | 4.34 | 16.04 | | 0.01 | 0.03 | – | 0.02 |
| 10 | ಸವಕಳಿಗಳು | 27.30 | 33.64 | | 0.05 | 0.07 | – | 0.02 |
| 11 | ಅವಕಾಶಗಳು | 298.59 | 77.64 | | 0.59 | 0.16 | 0.43 | – |
| 12 | ನಿವ್ವಳ ಲಾಭ | 32.45 | 330.82 | | 0.06 | 0.68 | – | 0.62 |
| | ನಿವ್ವಳ ನಷ್ಟ | | – | | | – | – | – |

| | | |
|---|---|---|
| | ಈ ಮೇಲಿನ ತುಲನಾತ್ಮಕ ಅಂಕಿ ಸಂಖ್ಯೆಗಳ ಬಗ್ಗೆ ವಿಮರ್ಶೆ : | ವರದಿ ಸಾಲಿನಲ್ಲಿ ಪ್ರಮುಖವಾಗಿ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅನುತ್ಪಾದಕ ಆಸ್ತಿಗಳಿಗೆ ರೂ.205.23 ಲಕ್ಷಗಳಷ್ಟು ಅವಕಾಶ ಕಲ್ಪಿಸಿರುವುದರಿಂದ ಮತ್ತು ಕೋವಿಡ್–19 ರೆಗ್ಯೂಲೇಟರಿ ಪ್ಯಾಕೇಜ್ ಅನ್ವಯ ಸಾಲಗಾರರಿಗೆ ಮಾರ್ಚ್ 2020 ಕ್ಕೆ ಮೊರೋಟೋರಿಯಮ್‌ಗಳ ಸೌಲಭ್ಯವನ್ನು ವಿಸ್ತರಿಸಲಾಗಿದ್ದು, ಈ ಪ್ಯಾಕೇಜ್ ಅನ್ವಯ ಲಾಭ ಪಡೆದ ಖಾತೆಗಳಿಗೆ ಸಂಬಂಧಿಸಿದಂತೆ ರೂ.30.29 ಲಕ್ಷಗಳಷ್ಟು ಅವಕಾಶ ಕಲ್ಪಿಸಿರುವುದರಿಂದ ಮತ್ತು ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿ. ನ ಕಮರ್ಷಿಯಲ್ ಪೇಪರ್ಸ್‌ಗಳ ರೂ. 2788.48 ಲಕ್ಷಗಳ ಮೇಲೆ ನವೆಂಬರ್ 2019 ರಿಂದ ಬಡ್ಡಿ ಬರದೇ ಇರುವುದರಿಂದ ವರದಿ ಸಾಲಿನ ಲಾಭದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿರುತ್ತದೆ.<br>ಅದಲ್ಲದೇ ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ.1,57,77,623/– ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಹೂಡಿಕೆಗಳಿಗೆ ಸಂಬಂಧಿಸಿದಂತೆ ಅವಕಾಶವನ್ನು ಕಲ್ಪಿಸಲಾಗಿರುವುದರಿಂದ |

| | | |
|---|---|---|
| | | ವರ್ಷಾಂತ್ಯಕ್ಕೆ ನಿವ್ವಳ ಲಾಭ ತೋರಿಸಲು ಸಾಧ್ಯವಾಗಿರುತ್ತದೆ.<br>ವರದಿ ಸಾಲಿನ ಪರೀಷ್ಕೃತ ಬಡ್ಡಿಯ ದರಗಳಿಂದಾಗಿ ಬಡ್ಡಿಯ ಆದಾಯ ಮತ್ತು ವೆಚ್ಚದಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ. ಹಾಗೆಯೇ ಗುಂತಾವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿಯ ಪ್ರಮಾಣದಲ್ಲಿ ಇಳಿಕೆಯಾಗಿರುತ್ತದೆ. ಈ ಮೇಲಿನ ಪ್ರಮುಖ ಅಂಶಗಳು ಹಿಂದಿನ ಸಾಲಿನ ಮತ್ತು ವರದಿ ಸಾಲಿನ ಲಾಭ-ನಷ್ಟ ಗಳ ವ್ಯತ್ಯಾಸಕ್ಕೆ ಕಾರಣಗಳಾಗಿರುತ್ತವೆ. |
| | **ಲಾಭ-ನಷ್ಟದ ತ:ಖ್ತೆ**<br>ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ | ನಿವ್ವಳ ಲಾಭ ರೂ. 32.45 ಲಕ್ಷಗಳು |
| 1 | ಸಂಘವು ಪ್ರಸಕ್ತ 2019-2020 ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣೀಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಷೆ. | ಎಲ್ಲಾ ವೆಚ್ಚಗಳನ್ನು ಮತ್ತು ಕೊಡತಕ್ಕ ವೆಚ್ಚಗಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿಕೊಳ್ಳುವುದರ ಮೂಲಕ ಎಲ್ಲಾ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಲಾಭವನ್ನು ನಿರ್ಧರಿಸಿರುವುದನ್ನು ಗಮನಿಸ ಲಾಗಿದೆ. |
| 2 | ವಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ)ರನ್ವಯ ನಿಬಂದಕರ ಮಂಜೂರಿ ಪಡೆಯಲಾಗಿದೆಯೇ ? | ವರದಿ ಸಾಲಿನಲ್ಲಿ ಉತ್ಪಾದಕ ಸಾಲಗಳ ಮೇಲೆ ಬರಬೇಕಾದ ಬಡ್ಡಿ ಮೊತ್ತ ರೂ.2,49,35,690/- ಗಳನ್ನು ಭಾರತೀಯ ರಿಸರ್ವ ಬ್ಯಾಂಕಿನ ಸುತ್ತೋಲೆ ಸಂಖ್ಯೆ: DCBR BPO (PCB) MC NO. 129109 .14.000/2015-16 ಪ್ರಕಾರ ಆದಾಯ ವೆಂದು ಪರಿಗಣಿಸಿದೆ. |
| 3 | ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು/ಕಡಿಮೆ ಇರುವುದರ ಬಗ್ಗೆ ವಿಮರ್ಷೆ | ಬ್ಯಾಂಕು ಕಳೆದ ಸಾಲಿನಲ್ಲಿ ರೂ. 330.82 ಲಕ್ಷಗಳಷ್ಟು ಲಾಭ ಗಳಿಸಿದ್ದು, ವರದಿ ಸಾಲಿನಲ್ಲಿ ಬ್ಯಾಂಕು ರೂ.32.45 ಲಕ್ಷಗಳಷ್ಟು ನಿವ್ವಳ ಲಾಭ ಗಳಿಸಿರುತ್ತದೆ. ಕಳೆದ ಸಾಲಿಗೆ ಇದನ್ನು ಹೋಲಿಸಿದಾಗ ರೂ.298.37 ಲಕ್ಷಗಳಷ್ಟು ಲಾಭ ಕಡಿಮೆಯಾಗಿರುತ್ತದೆ. |

| | | |
|---|---|---|
| 4 | ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡ ಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ | ಬ್ಯಾಂಕಿನ ಉಪನಿಯಮದನ್ವಯ ಲಾಭಾಂಶ ವನ್ನು ಘೋಷಿಸಿದ ದಿನಾಂಕ ದಿಂದ 3 ವರ್ಷ ಗತಿಸಿದ ನಂತರ, 3 ತಿಂಗಳ ಸೂಚನಾ ಪತ್ರವನ್ನು ನೀಡಿದಾಗ್ಯೂ, ಲಾಭಾಂಶವನ್ನು ಪಡೆಯದೇ ಇದ್ದಲ್ಲಿ, ಅಂತಹ ಸದಸ್ಯರ ಲಾಭಾಂಶವನ್ನು ಆಪದ್ಧನ ನಿಧಿಗೆ ವರ್ಗಾಯಿಸಬಹುದಾಗಿದ್ದು, ಈ ಪ್ರಕಾರ ಕ್ರಮ ಇಡಲಾಗಿರುತ್ತದೆ. |
| 5 | ನಷ್ಟವಾಗಿದ್ದಲ್ಲಿ ಕಾರಣಗಳು : | ಅನ್ವಯಿಸುವುದಿಲ್ಲ |

**35. ಇತರೆ ಷರಾ ಹಾಗೂ ಬಾಬ್ತುಗಳು :**

ವರದಿ ಸಾಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಅನುಪಾತಗಳನ್ನು ಗಮನಿಸಲಾಗಿದೆ :

| | |
|---|---|
| (1) ಠೇವಣಿಗಳ ಮೇಲಿನ ಸರಾಸರಿ ವೆಚ್ಚ | ಶೇ. 6.88 |
| (2) ಒಟ್ಟು ನಿಧಿಗಳ (ಪಡೆದ ಠೇವಣಿ+ಪಡೆದ ಸಾಲ) ಮೇಲಿನ ಸರಾಸರಿ ವೆಚ್ಚ | ಶೇ. 6.88 |
| (3) ಸಾಲಗಳ ಮೇಲಿನ ಸರಾಸರಿ ಆದಾಯ | ಶೇ. 11.82 |
| (4) ಹೂಡಿಕೆಗಳ ಮೇಲಿನ ಸರಾಸರಿ ಆದಾಯ | ಶೇ. 5.95 |
| (5) ಒಟ್ಟು ನಿಧಿಗಳ (ಕೊಟ್ಟ ಸಾಲ+ಹೂಡಿಕೆ) ಮೇಲಿನ ಸರಾಸರಿ ಆದಾಯ | ಶೇ. 9.82 |
| (6) ಮಾರ್ಜಿನ್ (5 –2) | ಶೇ. 2.94 |

(ರೂ.ಲಕ್ಷಗಳಲ್ಲಿ)

| ವಿವರ | 31.03.2019 | 31.03.2020 | ಶೇಕಡಾವಾರು ಹೆಚ್ಚಳ(ಇಳಿಕೆ) |
|---|---|---|---|
| ಸಾಲಗಳು | 30959.00 | 30587.11 | (1.20%) |
| ಠೇವಣಿಗಳು | 43659.49 | 45576.05 | 4.39% |
| ಸಾಲ ಮತ್ತು ಠೇವಣಿಗಳ ಅನುಪಾತ | 70.91 | 67.11 | (3.80%) |

ಸಾಲ ಮತ್ತು ಠೇವಣಿಗಳ ಅನುಪಾತವು ಕಳೆದ ವರ್ಷಕ್ಕೆ ಹೋಲಿಸಿದಾಗ ಇಳಿಕೆಯಾಗಿದ್ದು, ನಮ್ಮ ಅಭಿಪ್ರಾಯದಲ್ಲಿ ಸದಸ್ಯರನ್ನು ಸಾಲದ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಸಾಲ ಮತ್ತು ಠೇವಣಿಗಳ ಅನುಪಾತವನ್ನು ಇನ್ನೂ ಹೆಚ್ಚಿಸಿಕೊಳ್ಳಲು ಕ್ರಮವಿಡುವುದು ಅಗತ್ಯ.

**ಅನುವರ್ತನೆ : ಅನುಪಾತವನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗುವುದು.**

**36 ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:**

1. ಕೆಲವು ಬ್ಯಾಂಕುಗಳು ಇನ್ನೊಂದು ಬ್ಯಾಂಕಿನೊದಿಗೆ ವಿಲೀನಗೊಂಡಿರುವುದರಿಂದ, ಸಾಲಗಾರರಿಂದ ಪಡೆದ ವಿಲೀನಗೊಂಡ ಬ್ಯಾಂಕಿನ ಚೆಕ್ಕುಗಳನ್ನು ಬದಲಾಯಿಸಿಕೊಳ್ಳಲು ಕ್ರಮವಿಡುವುದು ಅವಶ್ಯ. (ಉದಾಹರಣೆಗೆ: ಸಿಂಡಿಕೇಟ್ ಬ್ಯಾಂಕು, ಕೆನರಾ ಬ್ಯಾಂಕಿನೊಂದಿಗೆ ವಿಲೀನಗೊಂಡಿರುತ್ತದೆ. ಅದೇ ರೀತಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಂಡಿರುತ್ತದೆ.)

**ಅನುವರ್ತನೆ : ಕ್ರಮವಿಡಲಾಗುವುದು.**

2. ಸ್ಥಿರಾಸ್ತಿಗಳ ಆಧಾರದ ಮೇಲೆ ಮಂಜೂರು ಮಾಡಬೇಕಾದ ಸಾಲದ ಮೊತ್ತವನ್ನು ನಿಗದಿಪಡಿಸುವಾಗ ಸಾಲಕ್ಕಾಗಿ ಸಲ್ಲಿಸಿದ ಅರ್ಜಿದಾರರ ಆದಾಯ ಅಥವಾ ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟು ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಆ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಆದರೆ ನಮ್ಮ ಅಭಿಪ್ರಾಯದಲ್ಲಿ ಸಾಲ ಮಂಜೂರಾತಿ ಮೊತ್ತವನ್ನು ನಿಗದಿಮಾಡುವಾಗ ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ:

(ಅ) ಸಾಲಗಾರರು ತಮ್ಮ ಮರುಪಾವತಿ ಸಾಮರ್ಥ್ಯವನ್ನು ದೃಢೀಕರಿಸಲು ಆದಾಯ ತೆರಿಗೆ ರಿಟರ್ನ್ಸ್ ಪ್ರತಿಯೊಂದಿಗೆ ಸ್ವಘೋಷಿತ ಆದಾಯ ಪತ್ರವನ್ನು ಸಹ ಕೊಟ್ಟಿರುತ್ತಾರೆ. ಆ ಸ್ವಘೋಷಿತ ಆದಾಯ ಪತ್ರದಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ಘೋಷಿಸದ ಬಾಡಿಗೆ ಆದಾಯ, ಇತ್ಯಾದಿಗಳನ್ನು ತೋರಿಸಿರುತ್ತಾರೆ. ಬ್ಯಾಂಕು ಸಾಲ ಮಂಜೂರು ಮಾಡುವಾಗ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೇ, ಸ್ವಘೋಷಿತ ಆದಾಯ ಪತ್ರದ ಆದಾಯವನ್ನು ಗಣನೆಗೆ ತೆಗೆದುಕೊಂಡಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳುವುದು ಸರಿಯಾದ ಕ್ರಮವಾಗಿರುತ್ತದೆ.

**ಅನುವರ್ತನೆ : ಕ್ರಮವಿಡಲಾಗುವುದು.**

(ಬ)ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟನ್ನು ಬ್ಯಾಂಕು ಸಾಲ ಮಂಜೂರು ಮಾಡುವಾಗ ಗಣನೆಗೆ ತೆಗೆದುಕೊಂಡಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಮಂಜೂರು ಮಾಡಬೇಕಾದ ಸಾಲದ ಮೊತ್ತವು ಸ್ಥಿರಾಸ್ತಿಯ ಮಾರ್ಗಸೂಚಿ ಮೌಲ್ಯಕ್ಕಿಂತ ಆಧಿಕವಾಗಿರದಂತೆ ನೋಡಿಕೊಳ್ಳುವುದು ಸೂಕ್ತ. ಅಂದರೆ ಸಾಲಗಾರರ ಆದಾಯ ಅಥವಾ ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯಕ್ಕೆ ಶೇ.60 ರಷ್ಟು ಅಥವಾ ಸ್ಥಿರಾಸ್ತಿಯ ಮಾರ್ಗಸೂಚಿ ಮೌಲ್ಯ ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಆ ಮೊತ್ತಕ್ಕೆ ಸಾಲ ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ.

**ಅನುವರ್ತನೆ : ಕ್ರಮವಿಡಲಾಗುವುದು.**

3. ಬ್ಯಾಂಕಿನಲ್ಲಿ ಮಂಜೂರು ಮಾಡಿದ ಸಾಲವನ್ನು ಬಿಡುಗಡೆ ಮಾಡುವಾಗ ಸಾಲದ ಮೊತ್ತವನ್ನು ಸಾಲದ ಖಾತೆಗೆ ಖರ್ಚು ಹಾಕಿ ಮತ್ತು ಸಾಲಗಾರರ ಉಳಿತಾಯ/ಚಾಲ್ತಿ ಖಾತೆಗಳಿಗೆ ಜಮೆ ಹಾಕಿ, ಆ ಉಳಿತಾಯ/ಚಾಲ್ತಿ ಖಾತೆಗಳಲ್ಲಿ ಚೆಕ್/ಪೇ ಆರ್ಡರ್ / ನಗದು / ವರ್ಗಾವಣೆಗಳ ಮೂಲಕ

ವ್ಯವಹಾರಗಳು ನಡೆಯುತ್ತಿರುವ ಪದ್ದತಿ ಜಾರಿಯಲ್ಲಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಸಾಲವನ್ನು ಯಾವ ಉದ್ದೇಶಕ್ಕಾಗಿ ಪಡೆದಿರುತ್ತಾರೋ ಅದೇ ಉದ್ದೇಶಕ್ಕೆ ಸಾಲವನ್ನು ಉಪಯೋಗಿಸಿಕೊಂಡ ಬಗ್ಗೆ ಖಾತರಿಪಡಿಸಿಕೊಳ್ಳಲು ಮಂಜೂರು ಮಾಡಿದ ಮೊತ್ತವನ್ನು ಸಾಲದ ಖಾತೆಗೆ ಖರ್ಚು ಹಾಕಿ ಆ ಉದ್ದೇಶಗಳಿಗೆ ಸಂಬಂಧಿಸಿದಂತೆ ಚೆಕ್/ಪೇ ಆರ್ಡರ್‌ಗಳನ್ನು ನೀಡುವುದು ಸೂಕ್ತವಾಗಿರುತ್ತದೆ.
**ಅನುವರ್ತನೆ : ಕ್ರಮವಿಡಲಾಗುವುದು.**

4. ಅಡಮಾನ ಸಾಲ ಪಡೆದ ಎಲ್ಲಾ ಸಾಲಗಾರರಿಂದ ಸಾಲ ಮುಕ್ತಾಯವಾಗುವವರೆಗೆ ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸಿದ ರಶೀದಿ ಮತ್ತು ಋಣಭಾರ ಪತ್ರ ಪಡೆಯಲು ಕ್ರಮವಿಡುವುದು ಅಗತ್ಯ. ಹಾಗೆಯೇ ಆಸ್ತಿ ತೆರಿಗೆ ಪಾವತಿಸಿದ ರಶೀದಿಗಳಲ್ಲಿ ಸಂಬಂಧಪಟ್ಟ ಸಾಲಗಾರರ ಹೆಸರು ನಮೂದಾಗಿರುವುದನ್ನೂ ಮತ್ತು ಋಣಭಾರ ಪತ್ರಗಳಲ್ಲಿ ಯಾವುದೇ ವ್ಯತಿರಿಕ್ತ ವ್ಯವಹಾರ ನಡೆಯದೇ ಇರುವುದನ್ನೂ ಖಾತ್ರಿಮಾಡಿಕೊಳ್ಳಬೇಕಾಗಿರುವುದು ಅಷ್ಟೇ ಅಗತ್ಯ.
**ಅನುವರ್ತನೆ : ಕ್ರಮಕೈಗೊಳ್ಳಲಾಗುವುದು.**

5. ಬ್ಯಾಂಕು ಗ್ರಾಹಕರಿಂದ ಮತ್ತು ಸಾಲಗಾರರಿಂದ ಪಡೆದ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಎಲ್ಲಾ ಪ್ರಕರಣಗಳಲ್ಲಿ ಮೂಲ ಪ್ರತಿಗಳೊಂದಿಗೆ ಪರಿಶೀಲಿಸಿ ದೃಢೀಕರಿಸುವುದು ಅಗತ್ಯ. ಹಾಗೆಯೇ ಬಾಡಿಗೆ ಆದಾಯಕ್ಕೆ ಪುರಾವೆಯಾಗಿ ಸಾಲಗಾರರು ಸಲ್ಲಿಸಿದ ಬಾಡಿಗೆ ಕರಾರು ಪತ್ರಗಳನ್ನು ಕಾಲ ಕಾಲಕ್ಕೆ ನವೀಕರಿಸಿರುವ ಬಗ್ಗೆ ಅಥವಾ ಹೊಸ ಬಾಡಿಗೆದಾರರೊಂದಿಗೆ ಹೊಸ ಬಾಡಿಗೆ ಕರಾರು ಪತ್ರಗಳನ್ನು ಮಾಡಿಕೊಂಡ ಬಗ್ಗೆ ಖಾತ್ರಿಮಾಡಿಕೊಳ್ಳಬೇಕಾಗಿರುವುದು ಅಗತ್ಯ.
**ಅನುವರ್ತನೆ : ಕ್ರಮಕೈಗೊಳ್ಳಲಾಗುವುದು.**

6. ವಿಮೆ ಪಾಲಿಸಿಯಲ್ಲಿ ವಿಮೆಗೆ ಒಳಪಟ್ಟ ಸ್ಥಿರಾಸ್ತಿಯ (ಬ್ಯಾಂಕಿಗೆ ಅಡಮಾನವಾಗಿ ಕೊಟ್ಟ ಸ್ಥಿರಾಸ್ತಿ) ವಿಳಾಸ ಸರಿಯಿರುವ ಬಗ್ಗೆ ಮತ್ತು ಸಂಬಂಧಪಟ್ಟ ಬ್ಯಾಂಕಿನ ಶಾಖೆಯ ಹೆಸರು ಸರಿಯಾಗಿ ನಮೂದಾಗಿರುವ ಬಗ್ಗೆ ಖಾತ್ರಿಮಾಡಿಕೊಳ್ಳಬೇಕಾಗಿರುವುದು ಅಷ್ಟೇ ಅಗತ್ಯ.
**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

7. ನಮ್ಮ ಅಭಿಪ್ರಾಯದಲ್ಲಿ ಸಾಲದ ಅರ್ಜಿದಾರರು ತಮ್ಮ ಮರುಪಾವತಿ ಸಾಮರ್ಥ್ಯವನ್ನು ದೃಢೀಕರಿಸಲು ಸಲ್ಲಿಸುವ ಆದಾಯ ತೆರಿಗೆ ರಿಟರ್ನ್ಸ್‌ಗಳ ನೈಜತೆಯನ್ನು ಪರಿಶೀಲಿಸಿಕೊಳ್ಳಲು ಆದಾಯ ತೆರಿಗೆ ಇಲಾಖೆಯ ವೆಬ್ ಸೈಟ್‌ನಿಂದ ಆದಾಯ ತೆರಿಗೆ ರಿಟರ್ನ್ಸ್‌ಗಳನ್ನು ಮತ್ತು ನಮೂನೆ 26AS ಗಳನ್ನು ಬ್ಯಾಂಕಿನಲ್ಲಿಯೇ ಬ್ಯಾಂಕಿನ ಅಧಿಕಾರಿಗಳ ಸಮಕ್ಷಮದಲ್ಲಿ ಅರ್ಜಿದಾರರಿಂದ ಡೌನ್ ಲೋಡ್ ಮಾಡಿಸಿಕೊಳ್ಳುವುದು ಸೂಕ್ತ.
**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

8. ಕ್ರೆಡಿಟ್ ರೇಟಿಂಗ್‌ನಲ್ಲಿ ಹೈ ರಿಸ್ಕ್ / ವೇರಿ ಹೈ ರಿಸ್ಕ್ ಇದ್ದಾಗ ಅತಿಯಾದ ಮುಂಜಾಗೃತೆಯೊಂದಿಗೆ ನೈಜ ಕಾರಣಗಳನ್ನು ತಿಳಿದುಕೊಂಡು ಮತ್ತು ಆ ಕಾರಣಗಳಿಗೆ ಸೂಕ್ತ ದಾಖಲಾತಿ

ಗಳನ್ನು ಪಡೆದು ಪರಿಶೀಲಿಸಿದ ನಂತರವೇ ಸಾಲ ಮಂಜೂರಾತಿ ಮಾಡುವ ಬಗ್ಗೆ ತೀರ್ಮಾನಿಸುವುದು ಅತ್ಯಗತ್ಯ.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

9. ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಲಗಾರರು ಭದ್ರತೆಯಾಗಿ ನೀಡಿರುವ ಆಸ್ತಿಗಳ ಮೌಲ್ಯವನ್ನು ಪ್ರತಿ 3 ವರ್ಷಗಳಿಗೊಮ್ಮೆ ಪುನರ್‌ಮೌಲ್ಯೀಕರಿಸುವ ಕ್ರಮ ಅಗತ್ಯ.

**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**

**37. ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು :**

| ಕ್ರ.ಸಂ. | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ | ನ್ಯೂನತೆಯು ಸಂಕ್ಷಿಪ್ತ ವಿವರ |
|---|---|---|---|
| **1** | **13** | **73** | ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದುರಷ್ಟರನ್ನು ಮೀರತಕ್ಕಲ್ಲ, ಆದರೆ ವರ್ಷಾಂತ್ಯಕ್ಕೆ ಸದರಿ ಪ್ರಮಾಣವು ಶೇ. 18.56 ರಷ್ಟಿರುತ್ತದೆ. ಆದ್ದರಿಂದ ಸಹ ಸದಸ್ಯತ್ವವನ್ನು ಶೇ. 15 ರ ಮಿತಿಯೊಳಗೆ ತರಲು ಕ್ರಮ ಅಗತ್ಯ.<br>**ಅನುವರ್ತನೆ : ಸಹಸದಸ್ಯತ್ವವನ್ನು ಹೊಂದಿದ ಎಲ್ಲಾ ಸದಸ್ಯರುಗಳಿಗೂ ಸದಸ್ಯತ್ವಕ್ಕೆ ಪರಿವರ್ತನೆ ಮಾಡಿಕೊಳ್ಳಲು ಪತ್ರದ ಮೂಲಕ ತಿಳಿಸಲಾಗಿದೆ. ಶೇ. 15ರ ಮಿತಿಯೊಳಗೆ ತರಲು ಕ್ರಮಕೈಗೊಳ್ಳಲಾಗಿದೆ.** |
| **2** | **13** | **74** | ಕೆಲವು ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆಯುವುದು ಬಾಕಿಯಿರುತ್ತದೆ. ಅಂತಹ ಸದಸ್ಯರಿಂದ ದಾಖಲಾತಿಗಳನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.**<br>ಮುಂದುವರೆದು, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಎಲ್ಲಾ ಗ್ರಾಹಕರ/ಸದಸ್ಯರುಗಳ ಕೆ.ವೈ.ಸಿ. ದಾಖಲೆಗಳನ್ನು ಕಾಲ ಕಾಲಕ್ಕೆ ಅಪ್‌ಡೇಟ್ ಮಾಡುವ ಮತ್ತು ಎಲ್ಲಾ ಖಾತೆಗಳನ್ನು ಲೋ ರಿಸ್ಕ್, ಮೀಡಿಯಮ್ ರಿಸ್ಕ್ ಮತ್ತು ಹೈ ರಿಸ್ಕ್ ಪ್ರಕಾರ ವರ್ಗೀಕರಿಸುವ ಹಾಗೂ ಆ ಖಾತೆಗಳಿಗೆ ವಾರ್ಷಿಕ ವ್ಯವಹಾರದ ಗರಿಷ್ಠ ಮೊತ್ತವನ್ನು ನಿಗದಿಪಡಿಸುವ ಬಗ್ಗೆ ನಿರಂತರ ಕ್ರಮ ಅಗತ್ಯ.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.** |

| | | | |
|---|---|---|---|
| **3** | **14** | **76** | ಬ್ಯಾಂಕಿನ ಉಪನಿಯಮ ಸಂಖ್ಯೆ 10ರ ಪ್ರಕಾರ ಬ್ಯಾಂಕಿನ ಪ್ರತಿ ಷೇರಿನ ಮುಖ ಬೆಲೆಯು ರೂ. 500 ಆಗಿದ್ದು, ಇನ್ನು ಕೆಲವು ಹಿಂದಿನ ಸದಸ್ಯರುಗಳಿಂದ ಪ್ರತಿ ಷೇರಿಗೆ ರೂ.25 ರಂತೆ ಮತ್ತು ರೂ.250 ರಂತೆ ಪಡೆದ ಷೇರು ಬಂಡವಾಳವು ಮುಂದುವರೆದಿರುವುದನ್ನು ಗಮನಿಸಲಾಗಿದೆ. ಅಂತಹ ಸದಸ್ಯರುಗಳಿಂದ ವ್ಯತ್ಯಾಸದ ಮೊತ್ತವನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : ರೂ. 500/–ಗಳ ಷೇರು ಮೊಬಲಗನ್ನು ಹೊಂದಿಲ್ಲದ ಸದಸ್ಯರುಗಳಿಗೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಪತ್ರ ಬರೆಯಲಾಗಿದೆ.**<br>ಬ್ಯಾಂಕಿನಲ್ಲಿ ಷೇರು ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮವಿಟ್ಟಿರುತ್ತಾರೆ. ಆದರೆ ಬ್ಯಾಂಕಿನ ಉಪನಿಯಮ ಸಂಖ್ಯೆ 12ರ ಪ್ರಕಾರ ಇನ್ನೂ ಕೆಲ ಅರ್ಹ ಸದಸ್ಯರಿಗೆ ಷೇರು ಪ್ರಮಾಣ ಪತ್ರಗಳನ್ನು ವಿತರಿಸುವುದು ಬಾಕಿ ಇರುತ್ತದೆ. ಬಾಕಿ ಷೇರು ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮ ಅಗತ್ಯ.<br>**ಅನುವರ್ತನೆ : ಷೇರು ಪ್ರಮಾಣ ಪತ್ರವನ್ನು ಪಡೆಯಲು ಪತ್ರ ಮುಖೇನ ತಿಳಿಸಲಾಗಿದೆ ಹಾಗೂ ಪ್ರತಿ ವಾರ್ಷಿಕ ಮಹಾಸಭೆಯ ಸೂಚನಾ ಪತ್ರದಲ್ಲಿಯೂ ತಿಳಿಸಲಾಗುತ್ತದೆ.** |
| **4** | **17(3)** | **84** | ಸದಸ್ಯರಲ್ಲದವರಿಂದ ಸಹ ಠೇವಣಿ ಸ್ವೀಕರಿಸಲಾಗಿದೆ. ಆದರೆ ಇವರುಗಳಿಂದ ಪಡೆದ ಠೇವಣಿಗಳ ವಿವರವು ಲಭ್ಯವಿರುವುದಿಲ್ಲ. ಸದಸ್ಯರಿಂದ ಮತ್ತು ಸದಸ್ಯರಲ್ಲದವರಿಂದ ಪಡೆದ ಠೇವಣಿಗಳ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ಕ್ರಮ ಅಗತ್ಯ.<br>**ಅನುವರ್ತನೆ : ಪ್ರತ್ಯೇಕವಾಗಿ ನಿರ್ವಹಿಸಲು ಕ್ರಮಕೈಗೊಂಡಿದೆ.** |
| **5** | **17(3)** | **85–86** | ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯ ಪ್ರಕಾರ ಚಾಲ್ತಿ ಖಾತೆಗಳನ್ನು ತೆರೆಯುವ ಗ್ರಾಹಕರಿಂದ ತಾನು ಯಾವುದೇ ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದಿರುವುದಿಲ್ಲವೆಂಬ ಘೋಷಣಾ ಪತ್ರವನ್ನು ಅಥವಾ ಇತರೆ ಬ್ಯಾಂಕುಗಳಿಂದ ಒಂದು ವೇಳೆ ಸಾಲ ಪಡೆದಿದ್ದರೆ, ಸಾಲ ಸೌಲಭ್ಯದ ವಿವರಗಳನ್ನು ಒಳಗೊಂಡ ಘೋಷಣಾ ಪತ್ರವನ್ನು ತಪ್ಪದೇ ಪಡೆಯುವುದು ಅಗತ್ಯ. ಮುಂದುವರೆದು, ಗ್ರಾಹಕರು ಒಂದು ವೇಳೆ ಇತರೆ |

| | | | |
|---|---|---|---|
| | | | ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆದಿರುವುದಾಗಿ ತಿಳಿಸಿದ್ದಲ್ಲಿ, ಅಂತಹ ಬ್ಯಾಂಕುಗಳಿಂದ ನಿರಪೇಕ್ಷಣಾ ಪತ್ರವನ್ನು ತಪ್ಪದೇ ಪಡೆಯುವುದು ಕೂಡ ಅಗತ್ಯ. ಈ ಬಗ್ಗೆ ಬ್ಯಾಂಕಿನವರು ಎಲ್ಲಾ ಶಾಖೆಗಳಲ್ಲಿ ಕಟ್ಟುನಿಟ್ಟಿನ ಕ್ರಮವಿಡಬೇಕಾಗಿರುತ್ತದೆ.<br>**ಅನುವರ್ತನೆ : ಬೇರೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಪಡೆದಿಲ್ಲವೆಂಬ ಘೋಷಣಾ ಪತ್ರವನ್ನು ಪಡೆಯಲಾಗುತ್ತಿದೆ.** |
| **6** | **24** E **(1)** | **103–104** | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗು ತ್ತಿದ್ದರೂ, ನಮ್ಮ ಗಮನಕ್ಕೆ ಬಂದ ಪ್ರಕಾರ ಓವರ್ ಡ್ರಾಫ್ಟ್ ಖಾತೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ **"ಔಟ್ ಆಫ್ ಆರ್ಡರ್"** ಆಧಾರದ ಮೇಲೆ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲಾಗುತ್ತಿಲ್ಲ. ಇದನ್ನು ಸರಿಪಡಿಸಿಕೊಳ್ಳಲು ಕ್ರಮ ಅಗತ್ಯ.<br>**ಅನುವರ್ತನೆ : ಸರಿಪಡಿಸಿಕೊಳ್ಳಲಾಗುವುದು.** |
| **7** | **24** E **(5)** | **105** | ಸಾಲ ಮತ್ತು ಮುಂಗಡಗಳಿಂದ ಬಂದ ಬಡ್ಡಿ ಖಾತೆಗೆ ಖರ್ಚು ಹಾಕಿ ಈ ಕೆಳಗಿನ ಸಾಲಗಾರರ ಬಡ್ಡಿ ಮನ್ನಾ ಮಾಡಿರುವುದನ್ನು ನಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುತ್ತದೆ. ಆದರೆ ಈ ರೀತಿಯ ಮನ್ನಾ ಉಚಿತ ಪ್ರಾಧಿಕಾರದಡಿ ಅಂಗೀಕಾರವಾದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ.<br><br>ಜಯನಗರ ಶಾಖೆ :ಸಾಲ ಖಾತೆ ಸಂ. 4667 ಶ್ರೀಮತಿ ಅನು ವಿ. ರೂ.29,284/–<br>ಜಯನಗರ ಶಾಖೆ: ಸಾಲ ಖಾತೆ ಸಂ. 28132 ಶ್ರೀ ವೆಂಕಟೇಶ್ ರೂ.68,536/–<br>ವಿಜಯನಗರ ಶಾಖೆ: ಸಾಲ ಖಾತೆ ಸಂ. 2180 ಶೀ ಹನುಮಂತರಾಯಪ್ಪ ರೂ.1,986/–<br>ಒಟ್ಟು ಖರ್ಚು ಹಾಕಿದ ಮೊತ್ತ ರೂ.99,806/– ಆಗಿರುತ್ತದೆ..<br>**ಅನುವರ್ತನೆ : ಕ್ರಮವಿಡಲಾಗುವುದು.** |

| | | | |
|---|---|---|---|
| **8** | **24** E | | ಸಾಲ ಖಾತೆಗಳಲ್ಲಿ ಕಂಡು ಬಂದ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಅಗತ್ಯ.<br>**ಅನುವರ್ತನೆ : ಕ್ರಮವಿಡಲಾಗುವುದು.** |
| **9** | **33(8)** | **143** | ಆರ್.ಬಿ.ಐ ನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ ಶಾಸನ ಬದ್ದ ಲೆಕ್ಕಪರಿಶೋಧನೆಗೆ ಮುಂಚೆಯೇ ಮಾಹಿತಿ ತಂತ್ರಜ್ಞಾನ (ಇನ್‌ಫಾರ್ಮೇಷನ್ ಸಿಸ್ಟಮ್) ಆಡಿಟ್‌ನ್ನು ಮಾಡಿಸಬೇಕಾಗಿದ್ದು, 2019–20ನೇ ಸಾಲಿಗೆ ಸಂಬಂಧಿಸಿದಂತೆ ಇನ್‌ಫಾರ್ಮೇಷನ್ ಸಿಸ್ಟಮ್ ಆಡಿಟ್‌ನ್ನು ಮಾಡಿಸಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ.<br>**ಅನುವರ್ತನೆ : ಕೋವಿಡ್–19 ಪ್ರಯುಕ್ತ 2019–20ನೇ ಸಾಲಿನ ಐ.ಎಸ್. ಆಡಿಟ್ ಮಾಡಿಸಲಾಗಿರುವುದಿಲ್ಲ. ಐ.ಎಸ್. ಆಡಿಟ್ ಮಾಡಿಸಲು ಕ್ರಮಕೈಗೊಳ್ಳಲಾಗುವುದು.** |
| **10** | **ಅನುಬಂಧ 1**<br>**27 ಎಫ್ (12)** | **179** | ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಅಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನಲ್ಲಿ ಪ್ರತ್ಯೇಕ ನಿಯಮಗಳನ್ನು ರೂ ಸಿಕೊಳ್ಳಲು ಕ್ರಮ ಅಗತ್ಯ.<br>ಮುಂದುವರೆದು, ನಮ್ಮ ಅಭಿಪ್ರಾಯದಲ್ಲಿ ಸಂಶಯಾತ್ಮಕ ಆಸ್ತಿಗಳಾಗಿ ವರ್ಗೀಕರಿಸಲ್ಪಟ್ಟ ಸಾಲ ಖಾತೆಗಳಿಗೆ ಸಂಬಂಧಪಟ್ಟಂತೆ ಸಾಲಗಾರರು ನೀಡಿದ ದಾಖಲಾತಿಗಳ ನೈಜತೆಯನ್ನು ಪುನರ್ ಪರಿಶೀಲಿಸುವ ಮತ್ತು ಆ ಖಾತೆಗಳು ವಂಚನೆ ಪ್ರಕರಣಗಳಾಗಿರದೇ ಇರುವುದನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆ ಜಾರಿಗೊಳಿಸುವುದು ಕೂಡ ಅವಶ್ಯ.<br>**ಅನುವರ್ತನೆ : ಕ್ರಮವಿಡಲಾಗುವುದು.** |

**38. ಕಡ್ಡಾಯ ಲಗತ್ತುಗಳು :**

| | | |
|---|---|---|
| 1 | ಜಮಾ ಖರ್ಚು ತಃಖ್ತೆ | ಲಗತ್ತಿಸಿದೆ |
| 2 | ವ್ಯಾಪಾರ ತಃಖ್ತೆ | ಅನ್ವಯಿಸುವುದಿಲ್ಲ |
| 3 | ಲಾಭ–ಹಾನಿ ತಃಖ್ತೆ | ಲಗತ್ತಿಸಿದೆ |
| 4 | ಆಸ್ತಿ–ಜವಾಬ್ದಾರಿ ತಃಖ್ತೆ | ಲಗತ್ತಿಸಿದೆ |
| 5 | ಕುಳುವಾರು ಪಟ್ಟಿಗಳು,<br>ದೃಢೀಕರಣಗಳು,<br>ಬ್ಯಾಂಕ್ ಸಮನ್ವಯ ತಃಖ್ತೆ | ಲಗತ್ತಿಸಿದೆ |
| 6 | ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆಯ<br>ಛಾಯಾ ಪ್ರತಿಯನ್ನು ಲೆಕ್ಕಪರಿಶೋಧಕರು<br>ದೃಢೀಕರಿಸಿ ಕಡ್ಡಾಯವಾಗಿ ವರದಿಗೆ<br>ಲಗತ್ತಿಸತಕ್ಕದ್ದು. | ಲಗತ್ತಿಸಿದೆ |

ಪಂಪಣ್ಣ ಮತ್ತು ಕಂಪನಿ,
ಸನ್ನದು ಲೆಕ್ಕಪರಿಶೋಧಕರ ಪರವಾಗಿ,
ಸಂಸ್ಥೆಯ ನೋಂದಣಿ ಸಂಖ್ಯೆ 010225S

ದಿನಾಂಕ : 20–11–2020
ಸ್ಥಳ : ಬೆಂಗಳೂರು

ಸಹಿ/–
(ಪಂಪಣ್ಣ )
ಮಾಲೀಕರು
ಸದಸ್ಯತ್ವದ ಸಂಖ್ಯೆ :207100

ಅನುಬಂಧ–1

(ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಲೆಪಶಾ/ಸಸಬ್ಯಾ/3/2006–07 ದಿನಾಂಕ: 22–06–2006ಕ್ಕೆ ಅನುಬಂಧ)

## ಲೆಕ್ಕಪರಿಶೋಧನಾ ವರದಿಯ ವಿಸ್ತೃತ ನಮೂನೆ (LFAR)

# ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ಜಯನಗರ, ಬೆಂಗಳೂರು –560 011 ಇದರ

2019–20ನೇ ಸಾಲಿನ ಲೆಕ್ಕಪರಿಶೋಧನಾ ವರದಿ

ಭಾಗ–1

| | | |
|---|---|---|
| (ಹಣ ದುರುಪಯೋಗ ಹಾಗೂ ಇನ್ನಿತರೆ ಗಂಭೀರ ನ್ಯೂನತೆಗಳಿಗೆ ಮುಖ್ಯ ವರದಿಯ ಕಂಡಿಕೆ ಸಂಖ್ಯೆ 37 ನೋಡುವುದು: | | |
| 1 | ಎ) ಬ್ಯಾಂಕಿನ ಹೆಸರು | **ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ** |
| | ತಾಲ್ಲೂಕು | ಬೆಂಗಳೂರು |
| | ಜಿಲ್ಲೆ | ಬೆಂಗಳೂರು |
| | ಶಾಖೆಗಳ ಸಂಖ್ಯೆ | 8 |
| 2 | ಎ) ನೋಂದಣಿ ಸಂಖ್ಯೆ ಮತ್ತು ದಿನಾಂಕ | ಸಿ4/ಆರ್‌ಸಿಎಸ್/2764/74–75<br>ದಿನಾಂಕ 21.08.1974 |

| | |
|---|---|
| **ಬಿ) ಆರ್.ಬಿ.ಐ.ಯವರ ಲೈಸೆನ್ಸ್ ಸಂಖ್ಯೆ ಮತ್ತು ದಿನಾಂಕ** | |
| ಆಡಳಿತ ಕಛೇರಿ/ಜಯನಗರ ಶಾಖೆ | ಎ.ಸಿ.ಡಿ.ಎಮ್.ವೈ. 50 ದಿನಾಂಕ 03/01/1975 |
| ಮತ್ತೀಕೆರೆ ಶಾಖೆ | ಯುಬಿಡಿ (ಬಿ ಎಲ್)1987 ದಿನಾಂಕ 27/11/1987 |
| ವಿಜಯನಗರ ಶಾಖೆ | ಯುಬಿಡಿ (ಬಿ ಎಲ್)(6243)07.01.01/95–96<br>ದಿನಾಂಕ 05/06/1996 |
| ಇಂದಿರಾನಗರ ಶಾಖೆ | ಯುಬಿಡಿ (ಬಿ ಎಲ್)(1452)07.01.01/96–97<br>ದಿನಾಂಕ 25/11/1996 |
| ಕೆಂಗೇರಿ ಶಾಖೆ | ಯುಬಿಡಿ (ಬಿಎಲ್)196 ದಿನಾಂಕ 29/03/1997 |
| ಯಲಹಂಕ ಶಾಖೆ | ಯುಬಿಡಿ (ಬಿಎಲ್)3151 ಒಕೆ ದಿ: 09/02/1998 |
| ಬಿ.ಇ.ಎಸ್. ಕಾಲೇಜು | ಯುಬಿಡಿ (ಬಿಎಲ್)3556/07.02.013/2008–09 ದಿ: 03/03/2009 |
| ಬೇಗೂರು | ಡಿಸಿಬಿಎಸ್ (ಬಿ ಎಲ್)(1414)07.02.013/2017–18<br>ದಿನಾಂಕ 07/12/2017 |

| 3 | ಬ್ಯಾಂಕ್‌ನ ಪದಾಧಿಕಾರಿಗಳ ಹೆಸರು (ದಿನಾಂಕ 31-03-2020 ರಲ್ಲಿದ್ದಂತೆ) | |
|---|---|---|
| 1 | 1) ಅಧ್ಯಕ್ಷರು | ಡಾ: ಎಂ.ಸಿ. ಜಗತ್ |
| | 2) ಉಪಾಧ್ಯಕ್ಷರು | ಡಾ: ಎಂ. ವೀರಪ್ಪ |
| | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು | ಶ್ರೀಮತಿ ಅಮೃತ ಡಿ. ಎ |
| 4 | ಹಿಂದಿನ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ | ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್<br>ಚಾರ್ಟರ್ಡ್ ಅಕೌಂಟೆಂಟ್ಸ್,<br>ಪ್ರಣವ ಕಾಂಪ್ಲೆಕ್ಸ್, 5ನೇ ಅಡ್ಡರಸ್ತೆ,<br>ಬೆಂಗಳೂರು -560003<br>2018-19 ನೇ ಸಾಲಿನ ಅವಧಿ |
| 5 | ಎ) ಪ್ರಸಕ್ತ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ<br>ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವದಿ | ಪಂಪಣ್ಣ, ಮಾಲೀಕರು<br>ಪಂಪಣ್ಣ ಅಂಡ್ ಕಂಪನಿ<br>ಚಾರ್ಟರ್ಡ್ ಅಕೌಂಟೆಂಟ್ಸ್<br>339/31, 9ನೇ ಮುಖ್ಯರಸ್ತೆ, ಗೋಕುಲ 1ನೇ ಸ್ಟೇಜ್ 2ನೇ ಹಂತ, ಶಂಕರ ಇಂಗ್ಲೀಷ್ ಸ್ಕೂಲ್ ಹತ್ತಿರ, ಮತ್ತೀಕೆರೆ, ಬೆಂಗಳೂರು-560 054.<br>2019-20 ನೇ ಸಾಲಿನ ಅವಧಿ |
| | ಬಿ) ಲೆಕ್ಕಪರಿಶೋಧನೆ ಮಾಡಲು ನೀಡಿದ ಆದೇಶ ಸಂಖ್ಯೆ ಮತ್ತು ದಿನಾಂಕ | ಬಿಸಿಬಿ/838/2019-20<br>ದಿನಾಂಕ 24/09/2019 |

6 ಸಂಘದ ಲೆಕ್ಕಪುಸ್ತಕಗಳನ್ನು ಹಾಜರು ಪಡಿಸಿದವರ ಹೆಸರು ಮತ್ತು ಹುದ್ದೆ.

| ಹೆಸರು | ಹುದ್ದೆ | ಕಛೇರಿ |
|---|---|---|
| ಶ್ರೀಮತಿ ಅಮೃತ ಡಿ. ಎ | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು | ಕೇಂದ್ರ ಕಛೇರಿ |
| ಶ್ರೀಮತಿ. ಎಸ್ ಅನುರಾಧ | ಶಾಖಾ ವ್ಯವಸ್ಥಾಪಕರು | ಜಯನಗರ ಶಾಖೆ |
| ಶ್ರೀ. ಗಂಗರಂಗಯ್ಯ | ಶಾಖಾ ವ್ಯವಸ್ಥಾಪಕರು | ಮತ್ತೀಕೆರೆ ಶಾಖೆ |
| ಶ್ರೀ. ಎಸ್. ಎ. ನಾಗರಾಜ್ | ಶಾಖಾ ವ್ಯವಸ್ಥಾಪಕರು | ವಿಜಯನಗರ ಶಾಖೆ |
| ಶ್ರೀ. ಬಿ.ಎಂ. ರವಿಶಂಕರ್ | ಶಾಖಾ ವ್ಯವಸ್ಥಾಪಕರು | ಇಂದಿರಾನಗರಶಾಖೆ |
| ಶ್ರೀಮತಿ. ಕೆ. ಶೈಲಜ | ಶಾಖಾ ವ್ಯವಸ್ಥಾಪಕರು | ಕೆಂಗೇರಿ ಶಾಖೆ |
| ಶ್ರೀ. ಜಿ.ವೆಂಕಟೇಶ್ | ಶಾಖಾ ವ್ಯವಸ್ಥಾಪಕರು | ಯಲಹಂಕ ಶಾಖೆ |
| ಶ್ರೀ. ಕೆ. ಹನುಮಂತಯ್ಯ | ಶಾಖಾ ವ್ಯವಸ್ಥಾಪಕರು | ಬಿ.ಇ.ಎಸ್. ಕಾಲೇಜು ಶಾಖೆ |
| ಶ್ರೀ. ಜಿ. ಸುರೇಶ್ | ಶಾಖಾ ವ್ಯವಸ್ಥಾಪಕರು | ಬೇಗೂರು ಶಾಖೆ |

| | | |
|---|---|---|
| 7 | ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ಅವಧಿ, ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ದಿನಾಂಕ ಲೆಕ್ಕಪರಿಶೋಧನೆಗೆ ತೆಗೆದುಕೊಂಡ ದಿನಗಳು | |
| | ಲೆಕ್ಕಪರಿಶೋಧನಾ ಅವಧಿ | 2019–20 |
| | ಲೆಕ್ಕಪರಿಶೋಧನೆಯ ಆರಂಭದ ದಿನಾಂಕ | 08.06.2020 |
| | ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ | 09.11.2020 |
| | ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು | 60 ಮಾನವ–ದಿನಗಳು |
| 8 | ನ್ಯೂನತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ: | |
| | ಎ) ಹಿಂದಿನ ಸಾಲು/ ಸಾಲುಗಳ ಲೆಕ್ಕಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆಯೇ? | ಹಿಂದಿನ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನತೆಗಳನ್ನು ಸರಿ ಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆ. |
| | ಬಿ) ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ ಕೊಳ್ಳಲಾಗಿದೆಯೇ?<br>(ಉಳಿದ ಪ್ರಮುಖ ನ್ಯೂನತೆಗಳ ಬಗ್ಗೆ ವಿವರ ನೀಡುವುದು) | ಸರಿಪಡಿಸಿಕೊಳ್ಳದೇ ಮುಂದುವರೆದ ಪ್ರಮುಖ ನ್ಯೂನತೆಗಳನ್ನು ಈ ಕೆಳಗಿನ ಶಿರ್ಷಿಕೆಯಲ್ಲಿ ವಿವರಿಸಲಾಗಿದೆ. |

ಸಿ) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.

| ಕ್ರ. ಸಂ. | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 ಮತ್ತು 2 | 29 | 24 ಇ (6) | ಈ ಕೆಳಗೆ ವಿವರಿಸಲಾಗಿದೆ | ಕ್ರಮ ಕೈಗೊಳ್ಳಲಾಗುವುದು | ಹಾಗೆಯೇ ಮುಂದುವರೆದಿರುತ್ತದೆ |

1. ಜಯನಗರ ಶಾಖೆಯ ಅಡಮಾನ ಸಾಲದ ಖಾತೆ ಸಂಖ್ಯೆ.33167 ಶ್ರೀ ಹೆಚ್. ಜಿ. ಕೇಶವಮೂರ್ತಿ, ಇವರ ಸಾಲ ಸಂಶಯಾತ್ಮಕ ಸಾಲವಾಗಿ ಪರಿವರ್ತನೆಗೊಂಡಿದ್ದು, ಈ ಸಾಲಕ್ಕೆ ಅಡಮಾನ ಮಾಡಿದ್ದ ಸ್ವತ್ತಿಗೆ ಬೆಲೆಯನ್ನು ನಿಗದಿಪಡಿಸದೇ, ಬ್ಯಾಂಕಿನ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳದೇ, ಸ್ವಾಧೀನಪಡಿಸಿ ಕೊಳ್ಳದೇ ಹಾಗೂ ಸಾಲದ ಖಾತೆಯನ್ನು

| | | |
|---|---|---|
| ಮುಕ್ತಾಯಗೊಳಿಸದೇ ಕೇವಲ ಬ್ಯಾಂಕಿನ ಹೆಸರಿಗೆ ಖಾತೆಯನ್ನು ವರ್ಗಾಯಿಸಿಕೊಂಡಿರುವುದು ಸರಿಯಾದ ಕ್ರಮವಾಗಿರುವುದಿಲ್ಲ. ಆದುದರಿಂದ ಈ ಖಾತೆಯನ್ನು ಬ್ಯಾಂಕಿಂಗೇತರ ಆಸ್ತಿ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಅಗತ್ಯ .<br>**ಅನುವರ್ತನೆ : ಕರ್ನಾಟಕ ರಾಜ್ಯ ಪತ್ರ ದಿನಾಂಕ 8–3–2018ರ ಪ್ರಕಾರ ಬ್ಯಾಂಕಿನ ಹೆಸರಿಗೆ ಖಾತೆಯನ್ನು ವರ್ಗಾಹಿಸಿಕೊಳ್ಳಲಾಗಿದೆ.**<br>2. ಜಯನಗರ ಶಾಖೆಯ ಅಡಮಾನ ಸಾಲದ ಖಾತೆ ಸಂಖ್ಯೆ: 944662 ಶ್ರೀ. ಜಿ. ಲೋಕೇಶ್ ಇವರಿಂದ ರೂ. 1,79,50,650/– ಮೊತ್ತ ಬ್ಯಾಂಕಿಗೆ ಬರಲು ಬಾಕಿ ಇದ್ದು, ಈ ಸ್ವತ್ತನ್ನು ಹರಾಜು ಮಾಡಿ ರೂ.1,38,50,000/– ಗಳನ್ನು ವಸೂಲಿ ಮಾಡಿಕೊಳ್ಳಲಾಗಿದೆ. ಉಳಿದ ಬಾಕಿ ಮೊತ್ತ ರೂ.40,75,650/– ಗಳ ವಸೂಲಾತಿಗಾಗಿ ಕಾನೂನು ಕ್ರಮ ತೆಗೆದುಕೊಳ್ಳಲು ಬಾಕಿ ಇರುತ್ತದೆ.<br>**ಅನುವರ್ತನೆ : ಕ್ರಮಕೈಗೊಳ್ಳಲಾಗಿದೆ.** | | |
| 9 | ಬ್ಯಾಂಕ್ ಅಧಿಕೃತ ಉಪನಿಯಮ, ಕಾಯಿದೆ, ನಿಯಮಗಳ ಪ್ರತಿಗಳನ್ನು ಹೊಂದಿದೆಯೇ? ಉಪನಿಯುಮಗಳ ಅಥವಾ ಕಾಯಿದೆ ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ ಅವುಗಳ ವಿವರ ನೀಡುವುದು. | ಬ್ಯಾಂಕ್ ಅಧಿಕೃತ ಉಪನಿಯಮ, ಕಾಯಿದೆ, ನಿಯಮಗಳ ಪ್ರತಿಗಳನ್ನು ಹೊಂದಿದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಸಹಕಾರಿ ಸಂಘಗಳ ಕಾಯ್ದೆ , ನಿಯಮಗಳ ಪಾಲನೆ ಒಟ್ಟಾರೆಯಾಗಿ ಸಮರ್ಪಕವಾಗಿರುತ್ತದೆ. ನಮಗೆ ಲೋಪಗಳೇನಾದರು ಕಂಡುಬಂದಿದ್ದಲ್ಲಿ, ಅವುಗಳನ್ನು ಈ ವರದಿಯ ಆಯಾಯ ಕಂಡಿಕೆಯಲ್ಲಿ ವಿವರಿಸಲಾಗಿದೆ. |
| 10 | ಆಂತರಿಕ ಲೆಕ್ಕಪರಿಶೋಧನೆ ಹಾಗೂ ಸದರಿ ವರದಿಯ ಪರಿಶೀಲನೆ ಹಾಗೂ ಅನುಸರಣೆ ಆಗಿದೆಯೇ? | ಬ್ಯಾಂಕಿನ ಹಾಲಿ ಅಧಿಕಾರಿಯನ್ನು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ನೇಮಿಸುವುದರ ಮುಖಾಂತರ ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆ ಆಂತರಿಕ ಲೆಕ್ಕಪರಿಶೋಧನೆಯನ್ನು ತ್ರೈಮಾಸಿಕವಾಗಿ ಕಾರ್ಯನಿರ್ವಹಿಸಿ ವರದಿ ನೀಡುತ್ತಾರೆ. ವರದಿಗಳನ್ನು ಪರಿಶೀಲಿಸಿ, ನ್ಯೂನ್ಯತೆಗಳನ್ನು ಸರಿ ಪಡಿಸಿಕೊಳ್ಳಲು ಕ್ರಮವಿಡಲಾಗಿದೆ. ಪರಿಶೋಧನಾ ವರದಿಯಲ್ಲಿ ಗಂಭೀರ ನ್ಯೂನತೆಗಳು ಇರುವುದಿಲ್ಲ. |

## ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಪುಸ್ತಕಗಳ ವಿವರ

### ಭಾಗ–2

| | | |
|---|---|---|
| 10 | ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಲೆಕ್ಕಪುಸ್ತಕಗಳ ವಿವರ | ಗಣಕಯಂತ್ರದಲ್ಲಿ ನಗದು ಪುಸ್ತಕ ಮತ್ತು ಇತರೆ ಬ್ಯಾಂಕಿನ ಹಾಗೂ ಗ್ರಾಹಕರ ಖಾತೆಗಳನ್ನು ಪರೀಕ್ಷಾರ್ಥ ಆಧಾರದ ಮೇಲೆ ಸಂಬಂಧಪಟ್ಟ ದಾಖಲಾತಿ ಮತ್ತು ವೋಚರ್‌ಗಳೊಂದಿಗೆ ಪರಿಶೀಲಿಸಲಾಗಿದೆ. |
| 11 | **ಸದಸ್ಯತ್ವ:** (ಹಿಂದಿನ ಎರಡು ಸಾಲುಗಳ ಹೋಲಿಕೆಯ ವಿವರಗಳನ್ನು ನೀಡುವುದು) | |

| ಸದಸ್ಯತ್ವ | 31.03.2018ರ ಅಂತ್ಯಕ್ಕೆ | 31.03.2019ರ ಅಂತ್ಯಕ್ಕೆ | 31.03.2020ರ ಅಂತ್ಯಕ್ಕೆ |
|---|---|---|---|
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 43824 | 44101 | 44832 |
| ಸೇರ್ಪಡೆಯಾದ ಸದಸ್ಯರು | 973 | 1238 | 544 |
| ಸದಸ್ಯತ್ವ ಹಿಂದಕ್ಕೆ ಪಡೆದವರು | 696 | 507 | 426 |
| ಸಾಲಾಖೈರಿಗೆ ಇರುವ ಸದಸ್ಯರು | 44101 | 44832 | 44950 |

| | | |
|---|---|---|
| 12 | ಸದಸ್ಯತ್ವದ ಬಗ್ಗೆ ವಿಮರ್ಶೆ | ವರದಿ ಸಾಲಿನ ಅಂತ್ಯಕ್ಕೆ 33983 ಸಾಮಾನ್ಯ ಸದಸ್ಯರಿದ್ದು, 8341ಸಹ ಸದಸ್ಯರುಗಳಿದ್ದು ಮತ್ತು ನಾಮಮಾತ್ರ 2626ಸದಸ್ಯರುಗಳು ಇರುತ್ತಾರೆ. ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಸಂಖ್ಯೆಗಳಿಗೆ ಹೋಲಿಸಿದಾಗ, ಸಾಮಾನ್ಯ ಸದಸ್ಯತ್ವದಲ್ಲಿ ಶೇ. 0.13 ಏರಿಕೆ ಯಾಗಿರುತ್ತದೆ, ನಾಮಮಾತ್ರ ಸದಸ್ಯತ್ವದಲ್ಲಿ ಶೇ. 6.79 ಏರಿಕೆ ಯಾಗಿರುತ್ತದೆ ಮತ್ತು ಸಹ ಸದಸ್ಯತ್ವದಲ್ಲಿ ಶೇ. 1.10 ಇಳಿಕೆಯಾಗಿರುತ್ತದೆ.<br>ಸಾಮಾನ್ಯವಾಗಿ ಬ್ಯಾಂಕಿನ ಉಪನಿಯ ಮಾನುಸಾರ ಸದಸ್ಯತ್ವವನ್ನು ನೀಡಿರು ವುದನ್ನು ಗಮನಿಸಲಾಗಿದೆ. |

| 13 | **ಷೇರು ಬಂಡವಾಳ:**<br>ದಿನಾಂಕ 31–03–2020 ರ ಅಂತ್ಯಕ್ಕೆ ಪಾವತಿಯಾದ ಷೇರು ಬಂಡವಾಳ(ಹಿಂದಿನ ಮೂರು ಸಾಲುಗಳ ಹೋಲಿಕೆಯ ವಿವರಗಳನ್ನು ನೀಡುವುದು) | | | |
|---|---|---|---|---|
| | **ಷೇರು ಬಂಡವಾಳ** | 31.03.2018 ರ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) | 31.03.2019 ರ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) | 31.03.2020 ರ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) |
| | ವರ್ಷಾರಂಭದಲ್ಲಿದ್ದಂತೆ | 642.27 | 859.31 | 1117.52 |
| | ಪ್ರಸಕ್ತ ಸಾಲಿನಲ್ಲಿನ ಜಮಾ | 260.07 | 315.74 | 133.54 |
| | ಪ್ರಸಕ್ತ ಸಾಲಿನಲ್ಲಿನ ಖರ್ಚು | 43.03 | 57.53 | 75.27 |
| | ಸಾಲಾಖ್ಯೆರಿಗೆ ಇದ್ದಂತೆ | 859.31 | 1117.52 | 1175. 79 |

| | | |
|---|---|---|
| 14 | ಷೇರು ಬಂಡವಾಳದ ಮೇಲೆ ವಿಮರ್ಶೆ | ದಿನಾಂಕ 31.03.2020ರ ಅಂತ್ಯಕ್ಕೆ ಒಟ್ಟು ಷೇರು ಬಂಡವಾಳವು ರೂ. 1175.79 ಲಕ್ಷಗಳಾಗಿದ್ದು, ಇದು ಹಿಂದಿನ ವರ್ಷದ ಬಂಡವಾಳಕ್ಕೆ ಹೋಲಿಸಿದಾಗ ಶೇ. 5.21 ರಷ್ಟು ಹೆಚ್ಚು ಆಗಿರುತ್ತದೆ. ದಿನಾಂಕ 31.03.2020ರ ಅಂತ್ಯಕ್ಕೆ ಸಂದಾಯವಾದ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯೊಳಗೆ ಇರುತ್ತದೆ.<br>ಬ್ಯಾಂಕಿನ ಉಪನಿಯಮ ಸಂಖ್ಯೆ 10ರ ಪ್ರಕಾರ ಬ್ಯಾಂಕಿನ ಪ್ರತಿ ಷೇರಿನ ಮುಖ ಬೆಲೆಯು ರೂ. 500 ಆಗಿದ್ದು, ಇನ್ನು ಕೆಲವು ಹಿಂದಿನ ಸದಸ್ಯರುಗಳಿಂದ ಪ್ರತಿ ಷೇರಿಗೆ ರೂ.25 ರಂತೆ ಮತ್ತು ರೂ.250 ರಂತೆ ಪಡೆದ ಷೇರು ಬಂಡವಾಳವು ಮುಂದುವರೆದಿರುವುದನ್ನು ಗಮನಿಸಲಾಗಿದೆ. ಅಂತಹ ಸದಸ್ಯರುಗಳಿಂದ ವ್ಯತ್ಯಾಸದ ಮೊತ್ತವನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : ರೂ. 500/– ಗಳ ಷೇರು ಮೊಬಲಗನ್ನು ಹೊಂದಿಲ್ಲದ ಸದಸ್ಯರುಗಳಿಗೆ** |

| | | |
|---|---|---|
| | | **ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಪತ್ರ ಬರೆಯಲಾಗಿದೆ.**<br>ಬ್ಯಾಂಕಿನಲ್ಲಿ ಷೇರು ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮವಿಟ್ಟಿರುತ್ತಾರೆ. ಆದರೆ ಬ್ಯಾಂಕಿನ ಉಪನಿಯಮ ಸಂಖ್ಯೆ 12ರ ಪ್ರಕಾರ ಇನ್ನೂ ಕೆಲ ಅರ್ಹ ಸದಸ್ಯರಿಗೆ ಷೇರು ಪ್ರಮಾಣ ಪತ್ರಗಳನ್ನು ವಿತರಿಸುವುದು ಬಾಕಿ ಇರುತ್ತದೆ. ಬಾಕಿ ಷೇರು ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮ ಅಗತ್ಯ.<br>ಸದಸ್ಯರ ವಿವರಗಳು ಗಣಕೀಕೃತಗೊಂಡಿರುತ್ತದೆ<br>**ಅನುವರ್ತನೆ : ಷೇರು ಪ್ರಮಾಣ ಪತ್ರವನ್ನು ಪಡೆಯಲು ಪತ್ರ ಮುಖೇನ ತಿಳಿಸಲಾಗಿದೆ ಹಾಗೂ ಪ್ರತಿ ವಾರ್ಷಿಕ ಮಹಾಸಭೆಯ ಪತ್ರದಲ್ಲಿಯೂ ತಿಳಿಸಲಾಗುತ್ತಿದೆ.** |
| 15 | ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುವುದೇ? | ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುತ್ತದೆ. |
| 16 | ಹೊರಗಿನಿಂದ ಪಡೆದ ಸಾಲಗಳು: ಅವುಗಳ ಬಗ್ಗೆ ವಿಮರ್ಶೆ | ದಿನಾಂಕ 31.03.2020ರ ಅಂತ್ಯಕ್ಕೆ ಬ್ಯಾಂಕು ಹೊರಗಿನಿಂದ ಪಡೆದ ಸಾಲದ ಬಾಕಿ ಯಾವುದೂ ಇರುವುದಿಲ್ಲ ಮತ್ತು ನಿರ್ವಹಿಸಿರುವ ಠೇವಣಿಗಳಿಗೆ ಸಂಬಂಧ ಪಟ್ಟಂತೆ ಪ್ರತ್ಯೇಕ ಕುಳವಾರು ಪಟ್ಟಿಗಳನ್ನು ಹಾಜರುಪಡಿಸಿದ್ದು, ಎಲ್ಲಾ ಖಾತೆಗಳ ಕುಳುವಾರು ಪಟ್ಟಿಗಳು ಆಸ್ತಿ–ಜವಾಬ್ದಾರಿ ತ:ಖ್ತೆಗೆ ತಾಳೆ ಇರುತ್ತದೆ. |
| 17 | **ಠೇವಣಿಗಳು:**<br>ಬ್ಯಾಂಕ್ ಪಡೆದ ವಿವಿಧ ರೀತಿಯ ಠೇವಣಿಗಳ ಬಗ್ಗೆ ವಿವರಗಳು | |

| **ಠೇವಣಿ ವಿವರಗಳು** | 2019–20ಕ್ಕೆ | 2018–19ಕ್ಕೆ | ಶೇಕಡಾವಾರು ವ್ಯತ್ಯಾಸ |
|---|---|---|---|
| **ಗಡು ಠೇವಣಿಗಳು:** | | | |
| ಅ. ವೈಯಕ್ತಿಕ | 19942.48 | 17280.51 | (+) **15.40** |
| ಆ. ಇತರೆ ಸಂಸ್ಥೆಗಳು | 340.20 | 236.99 | (+) **43.55** |
| ಇ. ಸಿಬ್ಬಂದಿ ಭದ್ರತಾ ಠೇವಣಿ | 6.09 | 6.15 | **(–)0.98** |
| ಈ) ಉದಯಭಾರತಿ ಠೇವಣಿಗಳು | | | |
| ಕ) ವೈಯಕ್ತಿಕ | 12846.07 | 14226.94 | **(–)9.71** |
| ಖ) ಇತರೆ ಸಂಸ್ಥೆಗಳು | 148.51 | 173.82 | **(–)14.56** |
| ಉ) ಸಂಚಿತ ಠೇವಣಿಗಳು | 511.70 | 538.77 | **(–)5.02** |
| **ಉಳಿತಾಯ ಠೇವಣಿಗಳು** | | | |
| ಕ. ವೈಯಕ್ತಿಕ | 10540.15 | 9859.98 | (+)**6.90** |
| ಖ) ಇತರೆ ಸಂಸ್ಥೆಗಳು | 228.33 | 177.27 | (+)**28.80** |
| **ಚಾಲ್ತಿ ಖಾತೆಗಳು** | | | |
| ಕ) ವೈಯಕ್ತಿಕ | 276.86 | 494.74 | **(–)44.03** |
| ಖ) ಇತರೆ ಸಂಸ್ಥೆಗಳು | 29.23 | 22.16 | (+)**31.90** |
| ಬಿ ಎನ್ ಎನ್ ಠೇವಣಿಗಳು | 188.73 | 185.15 | (+) **1.93** |
| ಅವಧಿ ಮುಗಿದ ಠೇವಣಿಗಳು | 517.70 | 456.98 | (+)**13.29** |
| **ಒಟ್ಟು ಮೊತ್ತ** | **45576.05** | **43659.49** | (+)**4.39** |

| | | |
|---|---|---|
| 18 | ಉಳಿತಾಯ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ವಿಮರ್ಶೆ | ಹಿಂದಿನ ವರ್ಷದ ಒಟ್ಟು ಠೇವಣಿಗಳಿಗೆ ಹೋಲಿಸಿದಾಗ ವರದಿ ವರ್ಷಾಂತ್ಯಕ್ಕೆ ಒಟ್ಟು ಠೇವಣಿಗಳಲ್ಲಿ ಶೇ.4.39 ರಷ್ಟು ಏರಿಕೆ ಆಗಿರುತ್ತದೆ. ಉಳಿತಾಯ ಖಾತೆಗಳ ಠೇವಣಿ ಶೇ.14.86 ರಷ್ಟು ಇಳಿಕೆ ಆಗಿರುತ್ತದೆ.<br>ವರದಿ ವರ್ಷಾಂತ್ಯಕ್ಕೆ ಇರುವ ಒಟ್ಟು ಠೇವಣಿಗಳಲ್ಲಿ ಉಳಿತಾಯ ಖಾತೆಗಳ ಠೇವಣಿ ಶೇ.23.63 ರಷ್ಟು, ಚಾಲ್ತಿ ಖಾತೆಗಳ ಠೇವಣಿ ಶೇ.0.67 ರಷ್ಟು ಮತ್ತು ಅವಧಿ ಠೇವಣಿಗಳು ಶೇ.75.70 ಇರುತ್ತದೆ. |

| | | |
|---|---|---|
| | | 31.03.2020ರ ವರ್ಷಾಂತ್ಯಕ್ಕೆ ಸಾಂಘಿಕ ಸಂಸ್ಥೆಗಳ ಠೇವಣಿ ಮೊತ್ತ ರೂ.746.27 ಲಕ್ಷಗಳಾಗಿದ್ದು, ಇದು ಒಟ್ಟು ಠೇವಣಿ ಮೊತ್ತದ ಶೇ.1.64 ರಷ್ಟಿರುತ್ತದೆ |
| 19 | ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಠೇವಣಿಗಳ ಮತ್ತು ಹೊರಗಿನಿಂದ ಪಡೆದ ಸಾಲಗಳ ಬಾಕಿಯು ನಿರ್ವಹಿಸಿರುವ ಠೇವಣಿ ಮತ್ತು ಸಾಲಗಳ ಖಾತೆಗಳಲ್ಲಿರುವ ಒಟ್ಟು ಮೊತ್ತಗಳಿಗೆ ತಾಳೆ ಇರುತ್ತದೆಯೇ? | ದಿನಾಂಕ 31.03.2020ರ ಅಂತ್ಯಕ್ಕೆ ಬ್ಯಾಂಕು ಹೊರಗಿನಿಂದ ಪಡೆದ ಸಾಲದ ಬಾಕಿ ಯಾವುದೂ ಇರುವುದಿಲ್ಲ ಮತ್ತು ನಿರ್ವಹಿಸಿರುವ ಠೇವಣಿಗಳಿಗೆ ಸಂಬಂಧ ಪಟ್ಟಂತೆ ಪ್ರತ್ಯೇಕ ಕುಳುವಾರು ಪಟ್ಟಿಗಳನ್ನು ಹಾಜರುಪಡಿಸಿದ್ದು, ಎಲ್ಲಾ ಖಾತೆಗಳ ಕುಳುವಾರು ಪಟ್ಟಿಗಳು ಆಸ್ತಿ–ಜವಾಬ್ದಾರಿ ತ:ಖ್ತೆಗೆ ತಾಳೆ ಇರುತ್ತದೆ. |
| 20 | ಸರ್ಕಾರದ ಅನುದಾನಗಳು ಮತ್ತು ಸಾಲಗಳು | ಸರ್ಕಾರದ ಅನುದಾನಗಳು ಮತ್ತು ಸಾಲಗಳು ಇರುವುದಿಲ್ಲ. |
| 21 | ಅನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು | ಅನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು ಇರುವುದಿಲ್ಲ. |
| 22 | ದ್ರವ್ಯಾಸ್ತಿಗಳ (ಫ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/ CRR ಗಳ ನಿರ್ವಹಣೆ– ಶಾಖೆಗಳ ವಾರದ NDTL ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ? | ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆ.ಬ್ಯಾಂಕಿಂಗ್ ರೆಗ್ಯೂಲೇಶನ್ ಅಧಿನಿಯಮ 1949ರ ಕಲಂ 18 ಮತ್ತು 24ರ ಪ್ರಕಾರ ಮೀಸಲಿರಿಸಿದ ನಗದು ಮತ್ತು ದ್ರವ್ಯಾಸ್ತಿ (Cash Reserve & Liquid Asset) ರಿಜಿಸ್ಟರ್‌ನ್ನು ಬ್ಯಾಂಕ್ ನಿರ್ವಹಿಸಿರುತ್ತದೆ. ವರ್ಷದ ಎಲ್ಲಾ ದಿನಗಳಲ್ಲಿ ಸಿ.ಆರ್.ಆರ್ ಮತ್ತು ಎಸ್.ಎಲ್.ಆರ್ ಮೊತ್ತಗಳು ಕನಿಷ್ಟ ಮಿತಿಗಿಂತ ಹೆಚ್ಚು ಇರುತ್ತದೆ. |
| 23 | ನಗದು<br>i) ಶಾಖೆಗಳಲ್ಲಿ ನಗದು ನಿರ್ವಹಣೆ ಮತ್ತು ಮೇಲ್ವಿಚಾರಣೆ ಬಗ್ಗೆ ಇರುವ ವ್ಯವಸ್ಥೆ | ಬ್ಯಾಂಕಿನ ಉಪನಿಯಮದ ಪ್ರಕಾರ ನಗದು ಶಿಲ್ಕು ಜವಾಬ್ದಾರಿ ಮತ್ತು ನಗದು ಮಿತಿಯನ್ನು ನಿಗದಿ ಪಡಿಸಲಾಗಿದೆ. ಬ್ಯಾಂಕಿನ ನಗದು ಶಿಲ್ಕನ್ನು ಕಾಲಕಾಲಕ್ಕೆ ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧಕರು ಪರಿಶೀಲಿಸಿದ್ದಾರೆ. |

| | | |
|---|---|---|
| | ii) ನಗದು ಶಿಲ್ಕಿಗೆ ವಿಮಾ ಸೌಲಭ್ಯ ಒದಗಿಸುವ ಬಗ್ಗೆ. (ಚಲಿಸುತ್ತಿರುವ ನಗದನ್ನು ಒಳಗೊಂಡು)<br><br>iii) ನಗದು ಶಿಲ್ಕಿನ ಭೌತಿಕ ಸ್ವಾಧೀನ – ನಗದು ಯಾರ ವಶದಲ್ಲಿರಬೇಕು ಎಂಬ ಬಗ್ಗೆ ರೂ ಸಲಾದ ನಿಯಮ. | ವರದಿ ಸಾಲಿಗೆ ಸಂಬಂಧಿಸಿದಂತೆ ಬ್ಲಾಂಕೆಟ್ ವಿಮೆ ಅಡಿಯಲ್ಲಿ ರೂ. 6.00 ಕೋಟಿಗಳಿಗೆ ವಿಮೆಯನ್ನು ಪಡೆಯಲಾಗಿರುತ್ತದೆ.<br><br>ಜಂಟಿ ಅಭಿರಕ್ಷೆಯಲ್ಲಿ ನಗದು ಶಿಲ್ಕು ಇರುವಂತೆ ನಿಯಮವಿದ್ದು, ಆ ಪ್ರಕಾರ ನಗದು ಶಿಲ್ಕು , ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ಇರುತ್ತದೆ. |
| 24 | Call money operation<br>ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿನ ನಡುವೆ ಕರೆ ಠೇವಣಿ ವ್ಯವಹಾರಗಳ ಬಗ್ಗೆ ಜಾರಿಯಲ್ಲಿರುವ ವ್ಯವಸ್ಥೆ. | ಸಾಮಾನ್ಯವಾಗಿ ಸಾಲ ಪತ್ರ / ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಹೂಡಿಕೆಗಳನ್ನು ಮುಕ್ತಾಯ ಮಾಡಿದಾಗ, ಬೇರೆ ಸಾಲ ಪತ್ರ / ಸರ್ಕಾರಿ ಭದ್ರತಾ ಪತ್ರಗಳನ್ನು ಖರೀದಿಸಲು ಅಥವಾ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ ಕರೆ ಠೇವಣಿಗಳ ವ್ಯವಹಾರಗಳನ್ನು ಮಾಡುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. |
| 25 | ಮೀಸಲು ನಿಧಿ ಮತ್ತು ಹೂಡಿಕೆಗಳು<br>(ಫಂಡ್ಸ್ ಮ್ಯಾನೇಜ್‌ಮೆಂಟ್) | |
| | ಎ) ನಿಧಿಗಳ ವಿವರಗಳು | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆ.<br>ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ರೀತಿಯಲ್ಲಿ ಮೀಸಲು ನಿಧಿಯನ್ನು ಸರ್ಕಾರಿ ಸಾಲಪತ್ರಗಳಲ್ಲಿ ವಿನಿಯೋಗಿಸಲಾಗಿದೆ. ಇತರೆ ನಿಧಿಗಳನ್ನು ಉಪನಿಯಮಗಳ ಪ್ರಕಾರ ನಿರ್ವಯಿಸಲಾಗಿದೆ. |
| | ಬಿ) ಹೂಡಿಕೆಗಳು | |
| | i) ಆರ್.ಬಿ.ಐ. ಮಾರ್ಗಸೂಚಿಗಳಂತೆ ಬ್ಯಾಂಕಿನ ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದಂತೆ ಜಾರಿಯುಲ್ಲಿರುವ ನಿಯಮ ಮತ್ತು ಅವುಗಳ ಪಾಲನೆ ಕುರಿತು. | ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಅನುಸಾರ ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಹೂಡಿಕೆಯಲ್ಲಿನ ಮೊತ್ತ ಹಿಂದಿನ 2ನೇ ಪಾಕ್ಷಿಕದ ಕೊನೆಯ ಶುಕ್ರವಾರದ NDTLದ ಕನಿಷ್ಠ ಶೇ. 18.25 |

| | | |
|---|---|---|
| | | (ದಿನಾಂಕ 31.03.2020 ಕ್ಕೆ ಅನ್ವಯಿಸಿದಂತೆ) ಇರಬೇಕಾಗಿದ್ದು, ಇದು ಶೇ. 21.65 ಇರುತ್ತದೆ. ಹಾಗೆಯೇ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಅನುಸಾರ HTM ವರ್ಗದಲ್ಲಿ SLR ಹೂಡಿಕೆಗಳನ್ನು ಹಿಂದಿನ 2ನೇ ಪಾಕ್ಷಿಕದ ಕೊನೆಯ ಶುಕ್ರವಾರದ NDTL ದ ಶೇ.25ಕ್ಕೆ ಮೀರಿರಬಾರದು. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ SLR ಹೂಡಿಕೆಗಳು HTM ವರ್ಗದಲ್ಲಿರುವ ಹೂಡಿಕೆಗಳಾಗಿದ್ದು ಇದು ಶೇ. 21.65 ಇದ್ದು, ಇದು ರಿಸರ್ವ್ ಬ್ಯಾಂಕ್ ನಿಗಧಿಪಡಿಸಿದ ಮಿತಿಯಲ್ಲಿರುವುದನ್ನು ಗಮನಿಸಲಾಗಿದೆ.<br>ಆರ್.ಬಿ.ಐ ನ ಮಾರ್ಗಸೂಚಿಗಳ ಪ್ರಕಾರ Non-SLR ಹೂಡಿಕೆಗಳು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ.10ಕ್ಕೆ ಮೀರದಂತೆ ಮತ್ತು ಕಳೆದ ಸಾಲಿನ ಅಂತ್ಯಗೊಂಡ ದಿನದ ಬಂಡವಾಳ ನಿಧಿಯ ಶೇ.15ಕ್ಕೆ ಮೀರದಂತೆ ಏಕ ಸಂಸ್ಥೆಯಲ್ಲಿ ಇರಬಹುದಾಗಿದ್ದು, ಬ್ಯಾಂಕಿನ ವರ್ಷಾಂತ್ಯದ Non-SLR ಹೂಡಿಕೆಗಳು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ. 6.41 ಇರುವುದನ್ನು ಗಮನಿಸಲಾಗಿದೆ ಆದರೆ ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್ಸ್‌ನಲ್ಲಿ ಗರಿಷ್ಠ ರೂ.436.69 ಲಕ್ಷಗಳ ಬದಲಾಗಿ ರೂ.2788.48 ಲಕ್ಷಗಳಷ್ಟು ಹೂಡಿಕೆ ಮಾಡಲಾಗಿದ್ದು, ಇದು ರೂ.2351.79 ಲಕ್ಷಗಳಷ್ಟು ಹೆಚ್ಚು ಇರುತ್ತದೆ ಮತ್ತು ಈ ಕಮರ್ಷಿಯಲ್ ಪೇಪರ್ಸ್‌ಗಳ ಮೇಲೆ ನವಂಬರ್ 2019 ರಿಂದ ಬಡ್ಡಿ ಬರದೇ ಇರುವುದರಿಂದ ಇದು ಅನುತ್ಪಾದಕ Non-SLR ಹೂಡಿಕೆಯಾಗಿರುತ್ತದೆ. ಆರ್.ಬಿ.ಐ ನ ಮಾರ್ಗಸೂಚಿಗಳ ಪಾಲನೆ ಮಾಡದೇ |

| | | |
|---|---|---|
| | | ಇರುವುದರಿಂದ ಈ ಅನುತ್ಪಾದಕ Non-SLR ಹೂಡಿಕೆಗೆ ಸಂಬಂಧಿಸಿದಂತೆ ರೂ.43.67 ಲಕ್ಷಗಳ ಬದಲಾಗಿ ರೂ.278.85 ಲಕ್ಷಗಳಷ್ಟು ಅಂದರೆ ರೂ. 235.18 ಲಕ್ಷಗಳಷ್ಟು ಹೆಚ್ಚು ಅವಕಾಶಕಲ್ಪಿಸಲಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ.1,57,77,623/- ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿ. ನ ಕಮರ್ಷಿಯಲ್ ಪೇಪರ್ಸ್‌ನಿಂದ 2017-18ನೇ ಸಾಲಿನಲ್ಲಿ ರೂ. 22,61,350/- 2018-19 ಸಾಲಿನಲ್ಲಿ 1,54,51,318/- ಮತ್ತು 2019-20ನೇ ಸಾಲಿನಲ್ಲಿ 23,79,700/- ಬಡ್ಡಿ ಆದಾಯ ಬಂದಿರುತ್ತದೆ. 2019 ನವೆಂಬರ್ ತಿಂಗಳ ನಂತರ ಸೆಬಿಯವರು ನಿರ್ಬಂಧ ವಿಧಿಸಿದ್ದರಿಂದ ಮತ್ತು ಕೋವಿಡ್-19ರ ಕಾರಣದಿಂದ ಹೂಡಿಕೆ ಮೊತ್ತ ವಾಪಸ್ ಬಂದಿರುವುದಿಲ್ಲ. ಹೂಡಿಕೆ ಮಾಡಿರುವ ಮೊತ್ತ ಮತ್ತು ಬಡ್ಡಿ ಹಿಂಪಡೆಯಲು ಕ್ರಮಕೈಗೊಳ್ಳಲಾಗಿದೆ.<br><br>ಆರ್.ಬಿ.ಐ.ನ ಮಾರ್ಗಸೂಚಿಗಳ ಪ್ರಕಾರ ಏಕ ಸಂಸ್ಥೆಯಲ್ಲಿ ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ.5ಕ್ಕೆ ಮೀರದಂತೆ ಬ್ಯಾಂಕು ಠೇವಣಿ ಮಾಡಬಹುದಾಗಿದ್ದು, ಬ್ಯಾಂಕಿನ ವರ್ಷಾಂತ್ಯದ ಠೇವಣಿಗಳು ಈ ಮಿತಿಯೊಳಗೆ ಇರುವುದನ್ನು ಗಮನಿಸಲಾಗಿದೆ. ಹಾಗೆಯೇ ಇತರೆ ಬ್ಯಾಂಕಿನಲ್ಲಿ ಇಡಬಹುದಾದ ಒಟ್ಟು ಠೇವಣಿಯು ಕಳೆದ ಸಾಲಿನ ಅಂತ್ಯಗೊಂಡ ದಿನದ ಒಟ್ಟು ಠೇವಣಿಯ ಶೇ.20ಕ್ಕೆ ಮೀರದಂತೆ ಬ್ಯಾಂಕು ಠೇವಣಿ ಮಾಡಬಹುದಾಗಿದ್ದು, ಬ್ಯಾಂಕಿನ ವರ್ಷಾಂತ್ಯದ ಠೇವಣಿಗಳು ಶೇ. 13.58 ಇದ್ದು, ಇದು ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿರುವುದನ್ನು ಗಮನಿಸಲಾಗಿದೆ. |

| | | |
|---|---|---|
| | ii) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿ ಮಾಡುವ ಕುರಿತು. | ಆಡಳಿತ ಮಂಡಳಿಯು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹೂಡಿಕೆಗಳ ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ವ್ಯವಹರಿಸಲು ಅಧಿಕಾರ ನೀಡಿರುತ್ತದೆ. ಮಾರಾಟ ಮತ್ತು ಖರೀದಿ ವ್ಯವಹಾರಗಳನ್ನು ಆಡಳಿತ ಮಂಡಳಿಯಲ್ಲಿ ದೃಢೀಕರಿಸುವ ಪದ್ಧತಿ ಜಾರಿಯಲ್ಲಿರುತ್ತದೆ. |
| | iii) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ | ಪ್ರತಿ ತ್ರೈಮಾಸಿಕ ಅಂತ್ಯಕ್ಕೆ ಎಸ್‌ಬಿಐ–ಡಿಎಫ್‌ಹೆಚ್‌ಐ ಮುಂಬೈ ಇವರು ನೀಡಲ್ಪಟ್ಟ ದೃಢೀಕರಣ ಪತ್ರ ಆಧರಿಸಿ ಸರ್ಕಾರಿ ಭದ್ರತಾ ಪತ್ರಗಳಲ್ಲಿನ ಹೂಡಿಕೆಗಳನ್ನು ತಾಳೆಮಾಡಿ ಕೊಳ್ಳಲಾತ್ತಿದೆ. ಅದಲ್ಲದೇ ಇತರೆ ಬ್ಯಾಂಕಿನಲ್ಲಿರುವ ಠೇವಣಿ ರಶೀದಿಗಳನ್ನು ಭೌತಿಕವಾಗಿ ಕಾಲಕಾಲಕ್ಕೆ ಪರಿಶೀಲಿಸಲಾಗುತ್ತಿದೆ. |
| | iv) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ | ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯಮಾಪನದ ಮಾದರಿಯಲ್ಲಿ ಯಾವುದೇ ಬದಲಾವಣೆ ಕಂಡುಬಂದಿರುವುದಿಲ್ಲ. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ SLR ಹೂಡಿಕೆಗಳು HTM ವರ್ಗದಲ್ಲಿರುವ ಹೂಡಿಕೆಗಳಾಗಿದ್ದು ಅವುಗಳಿಗೆ ಸಂಬಂಧಿಸಿ ದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅಮೋರ್ಟೈಸೇಷನ್ ಮಾಡಲಾಗಿರುವುದರಿಂದ SLR ಹೂಡಿಕೆಗಳಿಗೆ ಸಂಬಂಧಿಸಿದಂತೆ ಪುನಃ ಅವಕಾಶ ಕಲ್ಪಿಸುವ ಅಗತ್ಯ ಇರುವುದಿಲ್ಲ.<br>ವರದಿ ಸಾಲಿನ ಅಂತ್ಯಕ್ಕೆ ಇದ್ದ Non-SLR ಹೂಡಿಕೆಗಳು ಈ ಕೆಳಗಿನಂತಿರುತ್ತವೆ. |
| | | ವಿವರ |
| | | ಅಪೆಕ್ಸ್ ಬ್ಯಾಂಕಿನ ಷೇರುಗಳು<br>ರೂ. 10,00,000 |
| | | ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್‌ನಲ್ಲಿ ರೂ. 27,88,48,125 /– |

| | | |
|---|---|---|
| | | ಈ ಮೇಲಿನ Non-SLR ಹೂಡಿಕೆಗಳಲ್ಲಿ ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್‌ನ ಕಮರ್ಷಿಯಲ್ ಪೇಪರ್ಸ್‌ಗಳ ಮೊತ್ತ ರೂ. 27,88,48,125 /–ಗಳ ಮೇಲೆ ನವೆಂಬರ್ 2019 ರಿಂದ ಬಡ್ಡಿ ಬರದೇ ಇರುವುದರಿಂದ ಇದು ಅನುತ್ಪಾದಕ Non-SLR ಹೂಡಿಕೆಯಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ.1,57,77,623/– ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br>SLR ಹೂಡಿಕೆಗಳನ್ನು AFS ಮತ್ತು HTM ಗಳೆಂದು ಪ್ರತ್ಯೇಕಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ SLR ಹೂಡಿಕೆಗಳು HTM ವರ್ಗದಲ್ಲಿರುವ ಹೂಡಿಕೆಗಳಾಗಿದ್ದು, ಅವುಗಳಿಗೆ ಸಂಬಂಧಿಸಿದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವಸರ್ಕಾರಿ ಭದ್ರತಾ ಪತ್ರಗಳಿಗೆ ಅಮೋರ್ಟೈಸೇಷನ್ ಮಾಡಲಾಗಿರುತ್ತದೆ. |
| | v) ಆರ್.ಬಿ.ಐ. ಮಾರ್ಗ ಸೂಚಿ ಗಳನ್ವಯ Investment portfolio ರಚಿಸಿರುವ ಬಗ್ಗೆ ಮತ್ತು ಹೂಡಿಕೆಗಳ ಏರಿಳಿತಗಳ ಮೇಲೆ ಸವಕಳಿ ಅವಕಾಶ ಕಲ್ಪಿಸಿರುವ ಬಗ್ಗೆ. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಹೂಡಿಕೆಗಳ ಮಾರಾಟದಿಂದ ಬಂದ ಲಾಭದಿಂದ AFS ಮತ್ತು HFT ಗಳಲ್ಲಿರುವ ಹೂಡಿಕೆಗಳ ಕನಿಷ್ಟ ಶೇ.5 (ಗರಿಷ್ಟ ಶೇ. 10) ರಷ್ಟನ್ನು ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ನಿರ್ವಹಿಸ ಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ.1,57,77,623/– ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಅವಕಾಶವನ್ನು ಕಲ್ಪಿಸಿದ ನಂತರ ಬ್ಯಾಂಕು ರೂ. 20,95,626/–ಗಳಷ್ಟು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ಹೊಂದಿರುತ್ತದೆ. |
| | vi) Investment portfolio ದಲ್ಲಿ ಉಲ್ಲೇಖಿಸದೇ ಇರುವ ಹೂಡಿಕೆಗಳು ಮತ್ತು ಅವುಗಳ ನಗದೀಕರಣ ಬಗ್ಗೆ. | ಸಾಮಾನ್ಯವಾಗಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಿರುವ ಮೊತ್ತಗಳನ್ನು ಕಾಲ–ಕಾಲಕ್ಕೆ ನವೀಕರಣಗೊಳಿಸುವ ಅಥವಾ ಅವಧಿ ಮುಗಿದ ದಿನದಂತೆ ನಗದೀಕರಣ ಗೊಳಿಸಿಕೊಳ್ಳುವ ಪದ್ಧತಿಯು ಜಾರಿ ಯಲ್ಲಿರುತ್ತದೆ. |

| | | |
|---|---|---|
| | vii) SGL/BR ಪದ್ಧತಿ, ಸಾಲಾಂತ್ಯಕ್ಕೆ ಇರುವ SGL/BR ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ. | ಬ್ಯಾಂಕರ್ ರಸೀಟ್ಸ್ ಅಡಿಯಲ್ಲಿ ಯಾವುದೇ ವ್ಯವಹಾರ ನಡೆದಿರುವುದು ಕಂಡು ಬಂದಿಲ್ಲ, ಸರ್ಕಾರಿ ಭದ್ರತೆಗಳು ಡಿಮ್ಯಾಟ್ ರೂಪದಲ್ಲಿ ಇರುತ್ತವೆ. ದೃಢೀಕರಣ ಪತ್ರದ ಪ್ರಕಾರ ಭದ್ರತೆಗಳ ಹೂಡಿಕೆ ಮುಖ ಬೆಲೆಗೆ ತಾಳೆ ಇರುತ್ತದೆ. |
| | viii) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯುತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಬ್ಯಾಂಕಿನ ಸಮವರ್ತಿ / ಆಂತರಿಕ ಲೆಕ್ಕಪರಿಶೋಧಕರಿಂದ ಹೂಡಿಕೆಗಳ ನಿರ್ವಹಣೆ ಬಗ್ಗೆ ತ್ರೈಮಾಸಿಕ ವರದಿ ಪಡೆಯಬೇಕಾಗಿದ್ದು, ಆ ಪ್ರಕಾರವಾಗಿ ಆಂತರಿಕ ಲೆಕ್ಕ ಪರಿಶೋಧಕರಿಂದ ಹೂಡಿಕೆಗಳ ನಿರ್ವಹಣೆ ಬಗ್ಗೆ ತ್ರೈಮಾಸಿಕ ಆಧಾರದ ಮೇಲೆ ವರದಿಗಳನ್ನು ಪಡೆದಿರುತ್ತಾರೆ. |
| | ix) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯುತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಅನುತ್ಪಾದಕ ಹೂಡಿಕೆಗಳ ಮೇಲಿನ ಆದಾಯವನ್ನು ಸ್ವೀಕೃತಿಯ ಆಧಾರದ ಮೇಲೆ ಮತ್ತು ಬಡ್ಡಿಯ ದರ ನಿಗದಿಯಾದ ಮತ್ತು ಬಡ್ಡಿಯನ್ನು ಕಾಲ ಕಾಲಕ್ಕೆ ನೀಡುವ ಸರ್ಕಾರಿ ಸಾಲ ಪತ್ರ / ಸರ್ಕಾರಿ ಭದ್ರತಾ ಪತ್ರ ಇತ್ಯಾದಿಗಳ ಮೇಲಿನ ಬಡ್ಡಿಯನ್ನು ಅಕ್ರುಯಲ್ ಆಧಾರದ ಮೇಲೆ ಪರಿಗಣಿಸಲಾಗಿರುತ್ತದೆ. |
| | x) ಹೂಡಿಕೆಗಳ ಮೇಲೆ ಪ್ರಾಪ್ತಾಪವಾದ ಆದರೆ ಸ್ವೀಕೃತಿಯಾಗದೆ ಇರುವ ಆದಾಯವನ್ನು ಪರಿಗಣಿಸುವ ಬಗ್ಗೆ ಬ್ಯಾಂಕ್ ಅನು ಸರಿಸುತ್ತಿರುವ ನಿಯಮಗಳು | ಈ ಮೇಲೆ ವಿವರಿಸಿದ ಪದ್ದತಿಯನ್ನು ಅನುಸರಿಸಲಾಗಿರುತ್ತದೆ. |
| | xi) ಅವಧಿ ಪೂರ್ಣ ಹೂಡಿಕೆಗಳು ಮತ್ತು ಅವುಗಳನ್ನು ಸಕಾಲದಲ್ಲಿ ನಗದೀಕರಿಸುವ ಬಗ್ಗೆ. | ಅವಧಿ ಪೂರ್ಣಗೊಂಡ ಹೂಡಿಕೆಗಳನ್ನು ಸಕಾಲದಲ್ಲಿ ನಗದೀಕರಿಸಿಕೊಳ್ಳುವ ಪದ್ದತಿಯು ಜಾರಿಯಲ್ಲಿರುತ್ತದೆ. |

| | | |
|---|---|---|
| | xii) ಹೂಡಿಕೆಗಳ ಮೇಲೆ ಸರಾಸರಿ ಆದಾಯ<br><br>xiii) REPOಗಳ ಮೇಲೆ ಅನುಸರಿಸುತ್ತಿರುವ ನಿಯಮಗಳು | ಬ್ಯಾಂಕಿನ ಹೂಡಿಕೆಗಳ ಮೇಲಿನ ಸರಾಸರಿ ಆದಾಯ ಶೇ.5.95 ಆಗಿರುತ್ತದೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಬ್ಯಾಂಕು ಎಸ್.ಎಲ್.ಅರ್ ಮತ್ತು ನಾನ್ ಎಸ್.ಎಲ್.ಅರ್ ಹೂಡಿಕೆಗಳನ್ನು ಮಾಡುತ್ತಿದ್ದು, ರಿಪೋ ವ್ಯವಹಾರಗಳನ್ನು ಕೈಗೊಂಡಿರುವುದಿಲ್ಲ.<br><br>**ಅನುವರ್ತನೆ : ಕ್ರಮವಿಡಲಾಗಿದೆ.** |
| 26 | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:** | |
| | I. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ. | ಕಲಂ 58 ರ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿದ ರೀತಿಯಲ್ಲಿ ಮೀಸಲು ನಿಧಿಯನ್ನು ಸರ್ಕಾರಿ ಸಾಲಪತ್ರಗಳಲ್ಲಿ ವಿನಿಯೋಗಿಸಲಾಗಿರುತ್ತದೆ.<br><br>ಹಾಗೆಯೇ ಬ್ಯಾಂಕು ಉಳಿದ ನಿಧಿಗಳನ್ನು ಬ್ಯಾಂಕಿನ ಉಪನಿಯಮಗಳ ಪ್ರಕಾರ ನಿರ್ವಹಿಸಿರುವುದನ್ನು ಗಮನಿಸಲಾಗಿದೆ. |
| | II. SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ? | SLR ಹೂಡಿಕೆಗಳನ್ನು AFS ಮತ್ತು HTM ಗಳೆಂದು ಪ್ರತ್ಯೇಕಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಇದ್ದ ಎಲ್ಲಾ SLR ಹೂಡಿಕೆಗಳು HTM ವರ್ಗದಲ್ಲಿರುವ ಹೂಡಿಕೆಗಳಾಗಿದ್ದು, ಅವುಗಳಿಗೆ ಸಂಬಂಧಿಸಿದಂತೆ ಮುಖಬೆಲೆಗಿಂತ ಹೆಚ್ಚು ಬೆಲೆ ಇರುವ ಸರ್ಕಾರಿ ಭದ್ರತಾ ಪತ್ರಗಳಿಗೆ ಅಮೋರ್ಟೈಸೇಷನ್ ಮಾಡಲಾಗಿರುತ್ತದೆ. |
| | III. ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ? | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಹೂಡಿಕೆಗಳ ಮಾರಾಟದಿಂದ ಬಂದ ಲಾಭದಿಂದ AFS ಮತ್ತು HFT ಗಳಲ್ಲಿರುವ ಹೂಡಿಕೆಗಳ ಕನಿಷ್ಟ ಶೇ.5 |

| | | |
|---|---|---|
| | | (ಗರಿಷ್ಟ ಶೇ. 10) ರಷ್ಟನ್ನು ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ನಿರ್ವಹಿಸ ಬೇಕಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ.1,57,77,623/– ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಅವಕಾಶವನ್ನು ಕಲ್ಪಿಸಿದ ನಂತರ ಬ್ಯಾಂಕು ರೂ. 20,95,626/–ಗಳಷ್ಟು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ಹೊಂದಿರುತ್ತದೆ. |
| 27 | **ಸಾಲ ಮತ್ತು ಮುಂಗಡಗಳು:** | |
| | **ಮುಂಗಡಗಳು:** | |
| | **ಎ) ಸಾಲ ವಿತರಣೆ ನಿಯಮ:**<br>ಸಾಲ ವಿತರಣೆ ಬಗ್ಗೆ ಬ್ಯಾಂಕ್‌ನಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅನುಸರಣೆ ಯಲ್ಲಿರುವ ನಿಯಮಗಳು – ವಿವೇಕ ಪೂರ್ಣ ಮಾನದಂಡಗಳು, ಕೈಗಾರಿಕಾ ವಲಯಕ್ಕೆ ನಿಗದಿಪಡಿಸಿದ ಸಾಲದ ಮಿತಿ ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸುವ ಬಗ್ಗೆ, ಹತೋಟಿ ಮತ್ತು ಅನುಪಾಲನೆ ಬಗ್ಗೆ. | ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುತ್ತಿದ್ದು, ವೈಯಕ್ತಿಕ ಸಾಲಗಳ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಗರಿಷ್ಠ ಮಿತಿಯನ್ನು ಮೀರದಂತೆ ನಿಗದಿ ಪಡೆಸಲಾಗಿರುತ್ತದೆ.<br>ನಿಗದಿಗೊಳಿಸಿದ ಸಾಲದ ಮಿತಿ ಮತ್ತು ಸಾಲದ ಅವಧಿಯ ವಿವರಗಳನ್ನು ಗಣಕಯಂತ್ರದಲ್ಲಿ ನಿರ್ವಯಿಸಲಾಗಿರುತ್ತದೆ. |
| | **ಬಿ) ಸಾಲಗಳ ಮೌಲ್ಯಾಂಕನ (Credit Appraisal)**<br>ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆಯೇ? ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು / ಮಾಹಿತಿಗಳನ್ನು ಹೊಂದಲಾಗಿದೆಯೇ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆಯೇ? | ಸಾಮಾನ್ಯವಾಗಿ ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡುತ್ತಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗ ಸೂಚಿಯ ಪ್ರಕಾರ ಏಕ ಸಾಲಗಾರನಿಗೆ ಮತ್ತು ಗುಂಪು ಸಾಲಗಾರರಿಗೆ ಅನುಕ್ರಮವಾಗಿ ಬಂಡವಾಳ ನಿಧಿಯ ಶೇ. 15 ಮತ್ತು ಶೇ.40 ಮೀರದಂತೆ ನಿಗದಿ ಪಡಿಸಲಾಗಿರುತ್ತದೆ.<br>ಆಡಳಿತ ಮಂಡಳಿಯು ನಿಗದಿಗೊಳಿಸಿದ ಸಾಲದ ಮಿತಿ ಮತ್ತು ಸಾಲದ ಅವಧಿಯ ವಿವರಗಳನ್ನು ಗಣಕಯಂತ್ರದಲ್ಲಿ ನಿರ್ವಹಿಸಲಾ ಗಿರುತ್ತದೆ.<br>ಸಾಲಗಳ ಮೌಲ್ಯಾಂಕನದಲ್ಲಿ ಕಂಡು ಬಂದ |

| | | |
|---|---|---|
| | | ನ್ಯೂನ್ಯತೆಗಳನ್ನು ಕಂಡಿಕೆ "ಜಿ " ದಲ್ಲಿ ವಿವರಿಸಲಾಗಿದೆ. |
| | ಸಿ) ಸಾಲ ಮಂಜೂರಾತಿ/ ವಿತರಣೆ ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various level) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ? | ಠೇವಣಿಗಳ ಮೇಲಿನ ಮತ್ತು ಆಭರಣಗಳ ಮೇಲಿನ ಸಾಲಗಳನ್ನು ನೀಡಲು ಶಾಖೆಗಳ ವ್ಯವಸ್ಥಾಪಕರುಗಳಿಗೆ ಅಧಿಕಾರ ನೀಡಲಾಗಿದ್ದು, ತದನಂತರ ಶಾಖೆಗಳು ಮಂಜೂರು ಮಾಡಿದ ಸಾಲಗಳನ್ನು ಆಡಳಿತ ಮಂಡಳಿಯಲ್ಲಿ ದೃಢೀಕರಿಸಲಾಗುತ್ತದೆ.<br>ಉಳಿದ ಸಾಲಗಳನ್ನು ಸಾಲದ ಉಪಸಮಿತಿ ಮತ್ತು ಆಡಳಿತ ಮಂಡಳಿಯು ಮಂಜೂರು ಮಾಡಿರುತ್ತದೆ.<br>ಸಾಮಾನ್ಯವಾಗಿ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರವಷ್ಟೇ ಸಾಲವನ್ನು ವಿತರಿಸಲಾಗಿರುತ್ತದೆ.<br>ನಮಗೆ ಕಂಡು ಬಂದ ನ್ಯೂನ್ಯತೆಗಳನ್ನು ಕಂಡಿಕೆ "ಜಿ"ದಲ್ಲಿ ವಿವರಿಸಲಾಗಿದೆ. |
| | **ಡಿ) ದಾಖಲೀಕರಣ ಸಂಗ್ರಹಣೆ (Documentation)** | |
| | ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ.(documentation of consortium advances) | ಸಾಮಾನ್ಯವಾಗಿ ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುತ್ತಾರೆ.<br>ನಮಗೆ ಕಂಡು ಬಂದ ನ್ಯೂನ್ಯತೆಗಳನ್ನು ಕಂಡಿಕೆ "ಜಿ" ದಲ್ಲಿ ವಿವರಿಸಲಾಗಿದೆ.<br>ಜಂಟಿ/ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ, (Documentation of consortium advances)ಈ ಶೀರ್ಷಿಕೆಯಡಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ. |
| | **ಇ) ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:**<br>i) ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ ಹಾಗೂ ಅವುಗಳ ಒಪ್ಪಿಕೊಳ್ಳುವಿಕೆ. | 1. ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ ಪಡೆಯುವ ನೀತಿಯು ಜಾರಿಯಲ್ಲಿರದಿರುವುದರಿಂದ ಕಾಲಕಾಲಕ್ಕೆ ಶಿಲ್ಕು ದೃಢೀಕರಣ ಪಡೆದಿರುವುದಿಲ್ಲ. ಕೆಲವು |

| | | |
|---|---|---|
| | | ಸಾಲಗಳ ಬಾಕಿ ಶಿಲ್ಕನ್ನು ವಾರ್ಷಿಕ ಆಧಾರದ ಮೇಲೆ ಪಡೆಯುಲಾಗುತ್ತಿರುತ್ತದೆ. |
| | ii) ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ-ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿಯಾಗುತ್ತಿರುವ ಬಗ್ಗೆ. | 2. ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | iii) ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ. | 3. ಸಾಲಗಾರರಿಗೆ ದುಡಿಯುವ ಬಂಡವಾಳಕ್ಕೆ ರೂ.10ಲಕ್ಷಕ್ಕಿಂತ ಹೆಚ್ಚಿನ ಸಾಲ ಮಂಜೂರು ಮಾಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | iv)ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ. | 4. ಈ ಮೇಲಿನ ಯಾವುದೇ ಮಾಹಿತಿಗಳು ಅನ್ವಯಿಸದಿರುವುದರಿಂದ ಅದಕ್ಕೆ ಸಂಬಂಧಿಸಿದ ಯಾವುದೇ ಅನುಸರಣಾ ಪದ್ಧತಿಯು ಜಾರಿಯಲ್ಲಿರುವುದಿಲ್ಲ. |
| | v) ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ. | 5. ಈ ಶೀರ್ಷಿಕೆಯಡಿಯಲ್ಲಿ ಯಾವುದೇ ಪ್ರಕರಣಗಳಿರುವುದಿಲ್ಲ. |
| | vi) ನಿಯತಕಾಲಿಕವಾಗಿ ದಾಸ್ತಾನು ಪರಿಶೋಧನೆ ನಿರ್ವಹಿಸುತ್ತಿರುವ ಬಗ್ಗೆ. | 6. ದಾಸ್ತಾನು ಆಧಾರದ ಮೇಲೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ. ಆದ್ದರಿಂದ ಈ ಶೀರ್ಷಿಕೆ ಅನ್ವಯಿಸುವುದಿಲ್ಲ. |
| | vii) ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ | 7. ಅನ್ವಯಿಸುವುದಿಲ್ಲ. |

| | | |
|---|---|---|
| | viii) ಕ್ರೆಡಿಟ್ ರೇಟಿಂಗ್ ನೀಡುವಾಗ ಪಾಲಿಸುತ್ತಿರುವ ಮಾನದಂಡಗಳು | 8. ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಅನುಸಾರ ಬ್ಯಾಂಕು ಎಲ್ಲಾ ನಾಲ್ಕು ಕ್ರೆಡಿಟ್ ಇನ್ಫಾರ್ಮೇಷನ್ ಕಂಪನಿಗಳ ಸದಸ್ಯತ್ವವನ್ನು ಪಡೆದಿದ್ದು, ಆ ಕ್ರೆಡಿಟ್ ಇನ್ಫಾರ್ಮೇಷನ್ ಕಂಪನಿಯ ವರದಿಗಳಲ್ಲಿನ ಆಂಕಗಳ ಆಧಾರದ ಮೇಲೆ ಸಾಲಗಾರನ ಮರುಪಾವತಿ ಸಾಮರ್ಥ್ಯವನ್ನು ಪರಿಗಣಿಸ ಲಾಗುವುದು.<br>ಬ್ಯಾಂಕು ಪ್ರತ್ಯೇಕವಾಗಿ ಕ್ರೆಡಿಟ್ ರೇಟಿಂಗ್ ಕೊಡುವ ವ್ಯವಸ್ಥೆ ಇರುವುದಿಲ್ಲ. |
| | ix) ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI) | 9.ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಎನ್. .ಎ. ಮಾರ್ಗ ಸೂಚಿಗಳನ್ವಯ ವರ್ಗೀಕರಣಗೊಳಿಸ ಲಾಗುತ್ತಿದೆ. ಆದ್ದರಿಂದ ಆರ್.ಬಿ.ಐ. ಮಾರ್ಗಸೂಚಿಗಳನ್ವಯ ಸಾಲದ ಸ್ವಾಸ್ತ್ಯದ ಸಂಹಿತೆಯ ಪಾಲನೆ ಅವಶ್ಯಕತೆ ಇರುವುದಿಲ್ಲ. |
| | x) ಲೀಸಿಂಗ್, ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್ ಕಾರ್ಡ್ ವ್ಯವಹಾರಗಳ ಸುಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆ. | 10. ಲೀಸಿಂಗ್, ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್ ಕಾರ್ಡ್ ವ್ಯವಹಾರಗಳು ಇರುವುದಿಲ್ಲ. |
| | xi) ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ. | 11.ಯಾವುದೇ ಸಾಲಗಳು ಸಾಲಗಳ ಗರಿಷ್ಠ ಮಿತಿಯನ್ನು ಮೀರಿರುವುದಿಲ್ಲ. |
| | xii) ಸೌಲಭ್ಯಗಳ ನವೀಕರಣ | 12.ಸಾಮಾನ್ಯವಾಗಿ ಸಾಲಗಳ ನವೀಕರಣವನ್ನು ಉಪನಿಯಮಗಳ ಪ್ರಕಾರ ನವೀಕರಿಸ ಲಾಗುತ್ತಿರುವುದನ್ನು ಗಮನಿಸಲಾಗಿದೆ. |

| | | |
|---|---|---|
| | xiii) ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ. | 13. ಸಾಲದ ಸ್ವರೂಪ ಮತ್ತು ಸಾಲದ ಗರಿಷ್ಠ ಮಿತಿಯನ್ನು ಬ್ಯಾಂಕಿನ ಉಪ ನಿಯಮಗಳಲ್ಲಿ ಅಳವಡಿಸಿಕೊಂಡಿದ್ದು, ಆ ಪ್ರಕಾರವೇ ಸದಸ್ಯರಿಗೆ ಸಾಲ ನೀಡಲಾಗಿರುತ್ತದೆ. |
| | **(ಎಫ್) ಕರಡು ಮತ್ತು ಸಂಶಯಾಸ್ಪದ ಸಾಲಗಳು:**<br>i) ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿರುವ ವ್ಯವಸ್ಥೆಗಳು ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸಿ ಅನುಸರಿಸುತ್ತಿರುವ ಬಗ್ಗೆ ಹಾಗೂ ಈ ಕುರಿತು ಆರ್.ಬಿ.ಐ. ಮಾರ್ಗಸೂಚಿಗಳ ಪಾಲನೆ ಬಗ್ಗೆ. | 1. ಸುಸ್ತಿ ಸಾಲದ ಮಾಹಿತಿಯ ಆಧಾರದ ಮೇಲೆ ಶಾಖೆಗಳು ಸಾಲಗಾರರಿಂದ ವಸೂಲಾತಿಗೆ ಕ್ರಮವಿಟ್ಟಿರುತ್ತವೆ ಮತ್ತು ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಎಲ್ಲಾ ಶಾಖೆಗಳು ಕೈಗೊಂಡ ಕ್ರಮದ ಬಗ್ಗೆ ಉಪಸಮಿತಿಯಲ್ಲಿ ಚರ್ಚಿಸಲಾಗುತ್ತದೆ |
| | ii) ಬ್ಯಾಂಕ್ ವಿತರಿಸಿದ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲ ವಸೂಲಾತಿ ಬಗ್ಗೆ. | 2. ಕ್ರೆಡಿಟ್ ಕಾರ್ಡ್ ಸಾಲದ ವ್ಯವಹಾರಗಳು ಇರುವುದಿಲ್ಲ. |
| | iii) ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ | 3. ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದ್ದರೂ, ನಮ್ಮ ಗಮನಕ್ಕೆ ಬಂದ ಪ್ರಕಾರ ಓವರ್ ಡ್ರಾಫ್ಟ್ ಖಾತೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ "ಔಟ್ ಆಫ್ ಆರ್ಡರ್" ಆಧಾರದ ಮೇಲೆ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲಾಗುತ್ತಿಲ್ಲ. ಇದನ್ನು ಸರಿಪಡಿಸಿಕೊಳ್ಳಲು ಕ್ರಮ ಅಗತ್ಯ.<br>**ಅನುವರ್ತನೆ : ಸರಿಪಡಿಸಿಕೊಳ್ಳಲಾಗುವುದು.**<br>ನಮ್ಮ ಲೆಕ್ಕ ಪರಿಶೋಧನೆಯಲ್ಲಿ ಕೆಲವು ಓ.ಡಿ. ಖಾತೆಗಳನ್ನು ಅನುತ್ಪಾದಕ ಓ.ಡಿ. ಖಾತೆಗಳೆಂದು ವರ್ಗೀಕರಿಸಲಾಗಿದ್ದು, ಅಂತಹ ಖಾತೆಗಳಲ್ಲಿ ವಸೂಲಾಗದ ಬಡ್ಡಿ ಮೊತ್ತವನ್ನು ಆದಾಯವೆಂದು ಪರಿಗಣಿಸದೇ ವಾಪಸ್ ಹಾಕಬೇಕಿದ್ದು, ಸದರಿ ಖಾತೆಗಳಿಗೆ ಬಡ್ಡಿ ವಾಪಾಸ್ಸಾತಿ ಹಾಕಲು ತಂತ್ರಾಂಶದಲ್ಲಿ |

| | | |
|---|---|---|
| | | ಅವಕಾಶ ಇಲ್ಲದೇ ಇರುವುದರಿಂದ ಆ ಒಟ್ಟು ಮೊತ್ತ ರೂ.15,36,492.30 ಗಳನ್ನು "ಬಡ್ಡಿ ವಾಪಾಸ್ಸಾತಿ– ಅನುತ್ಪಾದಕ ಓ.ಡಿ. ಖಾತೆಗಳು" ಅಡಿಯಲ್ಲಿ ತೋರಿಸಲಾಗಿರುತ್ತದೆ ಮತ್ತು ಈ ಮೊತ್ತವನ್ನು ಓ.ಡಿ.ಸಾಲಗಳ ಕುಳುವಾರು ಪಟ್ಟಿಯಲ್ಲಿ ಕಳೆದು ನಿವ್ವಳ ಓ.ಡಿ. ಸಾಲವನ್ನು ಆಸ್ತಿ–ಜವಾಬ್ದಾರಿ ತ:ಖ್ತೆಗೆ ಪರಿಗಣಿಸಲಾ ಗಿರುತ್ತದೆ.<br>ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು, ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ. |
| | iv) ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ | 4. ನಮ್ಮ ಗಮನಕ್ಕೆ ಬಂದ ಪ್ರಕಾರ ಓವರ್ ಡ್ರಾಫ್ಟ್ ಖಾತೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ "ಔಟ್ ಆಫ್ ಆರ್ಡರ್" ಆಧಾರದ ಮೇಲೆ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲಾಗುತ್ತಿಲ್ಲ. ಇದನ್ನು ಸರಿಪಡಿಸಿ ಕೊಳ್ಳಲು ಕ್ರಮ ಅಗತ್ಯ.<br>**ಅನುವರ್ತನೆ : ಸರಿಪಡಿಸಕೊಳ್ಳಲಾಗುವುದು.**<br>ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಅವಶ್ಯವಿದ್ದ ಅವಕಾಶ ಕಲ್ಪಿಸಲಾಗಿದ್ದು, ಆ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆಯಿರುವುದಿಲ್ಲ.<br>ಅನುತ್ಪಾದಕ ಆಸ್ತಿಗಳ ಪ್ರಮಾಣ ಮತ್ತು ಕಲ್ಪಿಸಿದ ಅವಕಾಶಗಳ ವಿವರಗಳ ಪಟ್ಟಿಯನ್ನು ಈ ವರದಿಗೆ ಲಗತ್ತಿಸಲಾಗಿರುತ್ತದೆ. |
| | v) ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ. | 5. ಸಾಲದ ಮೇಲಿನ ಬಡ್ಡಿಯನ್ನು ಕೇವಲ ಸ್ವೀಕೃತಿ ಆಧಾರದ ಮೇಲೆ ಮಾತ್ರ ಜಮಾ ತೆಗೆದುಕೊಳ್ಳಲಾಗುತ್ತಿದೆ. ಅಂದರೆ ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮ ಜಾರಿಯಲ್ಲಿರುವುದಿಲ್ಲ. |

| | | |
|---|---|---|
| | vi) ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು DICGC/ECGC ಯನ್ನೊಳಗೊಂಡಂತೆ. | 6. ಬ್ಯಾಂಕಿನಲ್ಲಿ ಸಾಲ ಮಂಜೂರು ಮಾಡುವ ಮುನ್ನ ಬ್ಯಾಂಕಿನ ಅಭಿಯಂತರರಿಂದ ಆಸ್ತಿಯ ಮೌಲ್ಯ ಮಾಪನ ಮಾಡುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ವರದಿ ಸಾಲಿನಲ್ಲಿ ಯಾವುದೇ ಪುನರುಜ್ಜೀಕರಣ ಪ್ರಕರಣಗಳು ಇರುವುದಿಲ್ಲವೆಂದೂ ಮತ್ತು ಯಾವುದೇ ಸಾಲಗಳು DICGC/ECGC ಅಡಿಯಲ್ಲಿ ಇರುವುದಿಲ್ಲವೆಂದೂ ಬ್ಯಾಂಕಿನವರು ತಿಳಿಸಿರುತ್ತಾರೆ. |
| | vii) ಪುನ: ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ | 7. ಪುನ:ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮ ಇರುವುದಿಲ್ಲ. |
| | viii) ಸಾಲ ವಸೂಲಾತಿ ಮೊಬಲಗನ್ನು ಸಾಲದ ಅಸಲಿಗೆ, ಬಡ್ಡಿಗೆ ಹೊಂದಾಣಿಕೆ ಮಾಡುವ ಬಗ್ಗೆ ಇರುವ ವ್ಯವಸ್ಥೆ. | 8. ಸಾಮಾನ್ಯವಾಗಿ ಸಾಲ ವಸೂಲಾತಿ ಮೊಬಲಗನ್ನು ಮೊದಲು ಸಾಲದ ಬಡ್ಡಿಗೆ ನಂತರ ಉಳಿದ ಮೊಬಲಗನ್ನು ಅಸಲಿಗೆ ಹೊಂದಾಣಿಕೆ ಮಾಡುವ ವ್ಯವಸ್ಥೆ ಇರುತ್ತದೆ. |
| | ix) ರಾಜಿ ಸಂಧಾನದ ಮೂಲಕ ಏಕಕಾಲದಲ್ಲಿ ಸಾಲಗಳನ್ನು ಇತ್ಯರ್ಥ ಗೊಳಿಸಿರುವ ಪ್ರಕರಣಗಳು – ರೂ.1.00ಕೋಟಿಗೂ ಮೀರಿದ ಇಂತಹ ಪ್ರಕರಣಗಳು ಮತ್ತು ಆರ್.ಬಿ.ಐ. ನಿಗದಿಗೊಳಿಸಿರುವ ಮಿತಿಗಿಂತ ಹೆಚ್ಚಿನ ಮೊಬಲಗು ವಿನಾಯಿತಿ ನೀಡಿರುವ ಪ್ರಕರಣಗಳ ಬಗ್ಗೆ. | 9. ವರದಿ ಸಾಲಿನಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| | x) ಸಕ್ಷಮ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು | 10. ಸಾಲ ಮತ್ತು ಮುಂಗಡಗಳಿಂದ ಬಂದ ಬಡ್ಡಿ ಖಾತೆಗೆ ಖರ್ಚು ಹಾಕಿ ಈ ಕೆಳಗಿನ ಸಾಲಗಾರರ ಬಡ್ಡಿ ಮನ್ನಾ ಮಾಡಿರುವುದನ್ನು ನಮ್ಮ ಲೆಕ್ಕಪರಿಶೋಧನೆಯಲ್ಲಿ ಗಮನಿಸ ಲಾಗಿರುತ್ತದೆ. ಆದರೆ ಈ ರೀತಿಯ ಮನ್ನಾ ಉಚಿತ ಪ್ರಾಧಿಕಾರದಡಿ ಅಂಗೀಕಾರವಾದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ. |

| | | |
|---|---|---|
| | | ಜಯನಗರ ಶಾಖೆ :ಸಾಲ ಖಾತೆ ಸಂ. 4667 ಶ್ರೀಮತಿ ಅನು ವಿ. ರೂ.29,284/–<br><br>ಜಯನಗರ ಶಾಖೆ: ಸಾಲ ಖಾತೆ ಸಂ. 28132 ಶ್ರೀ ವೆಂಕಟೇಶ್ ರೂ.68,536/–<br><br>ವಿಜಯನಗರ ಶಾಖೆ: ಸಾಲ ಖಾತೆ ಸಂ. 2180 ಶೀ ಹನುಮಂತರಾಯಪ್ಪ ರೂ.1,986/–<br><br>ಒಟ್ಟು ಖರ್ಚು ಹಾಕಿದ ಮೊತ್ತ ರೂ.99,806/– ಆಗಿರುತ್ತದೆ.<br><br>**ಅನುವರ್ತನೆ : ಕ್ರಮವಿಡಲಾಗುವುದು.** |
| | xi) ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ. | 11. ಪ್ರತಿ ಮಾಹೆ ಸಾಲ ವಲಾತಿ ಉಪಸಮಿತಿಯಲ್ಲಿ ಹಮ್ಮಿಕೊಂಡ ಯೋಜನೆ ಮತ್ತು ವಿಧಿ ವಿಧಾನಗಳನುಸಾರ ಸಾಧಿಸಲ್ಪಟ್ಟ ಪ್ರಗತಿಯನ್ನು ಆಡಳಿತ ಮಂಡಳಿಯಲ್ಲಿ ವಿಮರ್ಶಿಸಲಾಗುತ್ತಿರುವುದನ್ನು ಗಮನಿಸಿದೆ. ಮುಂದುವರೆದು ನಮ್ಮ ಗಮನಕ್ಕೆ ಬಂದ ಪ್ರಕಾರ :–<br><br>ಬಿ.ಇ.ಎಸ್. ಕಾಲೇಜ್ ಶಾಖೆಯ ಅಡಮಾನ ಸಾಲದ ಖಾತೆ ಸಂಖ್ಯೆ: 08403000312 ಶ್ರೀ. ಎಸ್.ಸುರೇಶ್ ಇವರ ಸ್ವತ್ತನ್ನು ಹರಾಜು ಮಾಡಿ ರೂ.72.00 ಲಕ್ಷಗಳನ್ನು ವಸೂಲಿ ಮಾಡಿಕೊಳ್ಳಲಾಗಿದೆ. ಉಳಿದ ಬಾಕಿ ಮೊತ್ತ (ದಿನಾಂಕ 30.10.2019ಕ್ಕೆ) ರೂ.14,70,498/– ಗಳ ವಸೂಲಾತಿಗಾಗಿ ಕಾನೂನು ಕ್ರಮ ತೆಗೆದುಕೊಳ್ಳಲು ಬಾಕಿ ಇರುತ್ತದೆ.<br><br>**ಅನುವರ್ತನೆ : ಕಾನೂನು ಕ್ರಮ ಜರುಗಿಸಲಾಗುತ್ತಿದೆ.**<br><br>ದಾವಾ ಪ್ರಕರಣಗಳ ಸಂಖ್ಯೆ :35<br><br>ದಾವಾ ಮೊತ್ತ: ರೂ.2196.84 ಲಕ್ಷಗಳು |

<table>
<tr><td></td><td>xii) ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಇಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನ ನಿಯಮಗಳು.</td><td>12. ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಅಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನಲ್ಲಿ ಪ್ರತ್ಯೇಕ ನಿಯಮಗಳನ್ನು ರೂ ಸಿಕೊಳ್ಳಲು ಕ್ರಮ ಅಗತ್ಯ.<br><br>ಮುಂದುವರೆದು, ನಮ್ಮ ಅಭಿಪ್ರಾಯದಲ್ಲಿ ಸಂಶಯಾತ್ಮಕ ಆಸ್ತಿಗಳಾಗಿ ವರ್ಗೀಕರಿಸಲ್ಪಟ್ಟ ಸಾಲ ಖಾತೆಗಳಿಗೆ ಸಂಬಂಧಪಟ್ಟಂತೆ ಸಾಲಗಾರರು ನೀಡಿದ ದಾಖಲಾತಿಗಳ ನೈಜತೆಯನ್ನು ಪುನರ್ ಪರಿಶೀಲಿಸುವ ಮತ್ತು ಆ ಖಾತೆಗಳು ವಂಚನೆ ಪ್ರಕರಣಗಳಾಗಿರದೇ ಇರುವುದನ್ನು ಖಚಿತಪಡಿಸಿಕೊಳ್ಳುವ ವ್ಯವಸ್ಥೆ ಜಾರಿಗೊಳಿಸುವುದು ಕೂಡ ಅವಶ್ಯ.<br><br>ಅನುವರ್ತನೆ : ಕ್ರಮವಿಡಲಾಗುವುದು</td></tr>
<tr><td></td><td colspan="2">ಜಿ) ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:<br>ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.<br><br>ಸಾಲ ಖಾತೆಗಳಲ್ಲಿ ನಮಗೆ ಕಂಡು ಬಂದ ನ್ಯೂನ್ಯತೆಗಳು ಈ ಕೆಳಗಿನಂತಿರುತ್ತವೆ:</td></tr>
<tr><td></td><td colspan="2">ಜಯನಗರ ಶಾಖೆ:<br><br>ಅಡಮಾನ ಸಾಲ ಖಾತೆ ಸಂಖ್ಯೆ. 02403945769 ಶ್ರೀಮತಿ ನಸೀಮುನ್ನಿಸಾ ಮತ್ತು ಸೈಯದ್ ಉಮರ್ ಆಸೀಮ್ (ರೂ.2.50 ಕೋಟಿಗಳು) :<br><br>(ಅ) ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯದ ಶೇ.60 ರಂತೆ, ರೂ.1.74 ಕೋಟಿಗಳ ಸಾಲ ಮಂಜೂರಾತಿಯ ಬದಲು ಬ್ಯಾಂಕು ಸಾಲ ಮಂಜೂರು ಮಾಡುವಾಗ ಆದಾಯ ತೆರಿಗೆ ರಿಟರ್ನ್ಸ್‌ಗಳಲ್ಲಿ ತೋರಿಸಿರುವ ಆದಾಯವನ್ನು ಗಣನೆಗೆ ತೆಗೆದುಕೊಳ್ಳದೇ, ಸ್ವಘೋಷಿತ ಆದಾಯ ಪತ್ರದ ಆದಾಯವನ್ನು (ಮುಂದೆ ಬರಬಹುದಾದ ಬಾಡಿಗೆ ಆದಾಯನ್ನು ಒಳಗೊಂಡು) ಗಣನೆಗೆ ತೆಗೆದುಕೊಂಡು ರೂ.2.50 ಕೋಟಿಗಳ ಸಾಲ ಮಂಜೂರಾತಿ ಮಾಡಲಾಗಿರುತ್ತದೆ. ಈ ಸಾಲ ಖಾತೆಯು ವರ್ಷಾಂತ್ಯಕ್ಕೆ ಅನುತ್ಪಾದಕ ಸಾಲವಾಗಿರುತ್ತದೆ.<br><br>ಅನುವರ್ತನೆ : ಸಾಲದ ವಸೂಲಾತಿಗೆ ಕ್ರಮಕೈಗೊಳ್ಳಲಾಗಿದೆ.</td></tr>
</table>

| | |
|---|---|
| | (ಆ) ಕಾನೂನು ಸಲಹೆಗಾರರ ವರದಿಯ ಪ್ರಕಾರ ಚೋಳಮಂಡಳಂ ಫೈನಾನ್ಸ್ ಕಂಪನಿಯವರಿಗೆ ಅಡಮಾನ ಮಾಡಿದ ವಿವರ ಸಾಲಗಾರರು ಸಲ್ಲಿಸಿರುವ ಇ.ಸಿ.ಯಲ್ಲಿ ಇರದೇ ಇರುವುದರಿಂದ, ಅಡಮಾನ ವಿವರ ಹೊಂದಿರುವ ಇ.ಸಿ.ಯನ್ನು ಪಡೆಯಲು ಸೂಚಿಸಿದ್ದು, ಅಡಮಾನ ವಿವರ ಹೊಂದಿರುವ ಇ.ಸಿ.ಯನ್ನು ಪಡೆದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.<br>**ಅನುವರ್ತನೆ : ಕಾನೂನು ಸಲಹೆಗಾರರು ತಮ್ಮ ವರದಿಯಲ್ಲಿ ಸ್ವತ್ತು ಅಡಮಾನ ನೋಂದಣಿಯಾಗಿದ್ದರೆ, ಅಡಮಾನ ನಮೂದಾಗಿರುವ ಇ.ಸಿ.ಯನ್ನು ಪಡೆಯಲು ಸೂಚಿಸಿದ್ದು, ಈ ಸ್ವತ್ತು ಚೋಳಮಂಡಳಂ ಫೈನಾನ್ಸ್ ಕಂಪನಿಯವರಿಗೆ ಅಡಮಾನವಾಗಿಲ್ಲದ್ದರಿಂದ ಇ.ಸಿ.ಯನ್ನು ಪಡೆದಿರುವುದಿಲ್ಲ.**<br>(ಇ) ಚೋಳಮಂಡಳಂ ಫೈನಾನ್ಸ್ ಕಂಪನಿಯವರಿಂದ ಸಾಲ ಖಾತೆಯ "ಆಸ್ತಿ ವರ್ಗೀಕರಣದ" ಮಾಹಿತಿ ಪಡೆದಿರುವುದಿಲ್ಲ.<br>**ಅನುವರ್ತನೆ : ಚೋಳಮಂಡಳಂ ಫೈನಾನ್ಸ್ ಕಂಪನಿಯಲ್ಲಿ ಸಾಲ ಮುಕ್ತಾಯಗೊಳಿಸಿದ ನಂತರ ಸಾಲ ನೀಡಲಾಗಿದೆ.** |
| | **ಮತ್ತೀಕೆರೆ ಶಾಖೆ:**<br>(1) ಅಡಮಾನ ಸಾಲ ಖಾತೆ ಸಂಖ್ಯೆ. 03403016159 ಶ್ರೀ ಸುಧಾಕರ್ ಶ್ರೀನಿವಾಸನ್ (ರೂ. 70.00 ಲಕ್ಷಗಳು) :<br>(ಅ) ಸಾಲಗಾರರ ಹೆಸರಿಗೆ ವರ್ಗಾಯಿಸಿದ ಖಾತಾ ಸರ್ಟಿ..ಕೇಟ್ ಮತ್ತು ಖಾತಾ ಎಕ್ಸಾಟ್ರಕ್ಟ್ ಪಡೆಯಬೇಕಾಗಿರುತ್ತದೆ.<br>**ಅನುವರ್ತನೆ : ಪಡೆಯಲಾಗುವುದು.**<br>(ಆ) ಕಾನೂನು ಸಲಹೆಗಾರರ ವರದಿಯ ಪ್ರಕಾರ ಸ್ಥಿರಾಸ್ತಿಯ ಮಾರಾಟಗಾರರಾದ ಶ್ರೀಮತಿ ಎಸ್.ಭಾಗ್ಯಲಕ್ಷ್ಮಿಯವರ ಹೆಸರಿನಲ್ಲಿದ್ದ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br>**ಅನುವರ್ತನೆ : ಪಡೆಯಲಾಗಿದೆ.**<br>(ಇ) ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020–21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ<br>**ಅನುವರ್ತನೆ : ಪಡೆಯಲಾಗುವುದು.**<br>(2) ಅಡಮಾನ ಸಾಲ ಖಾತೆ ಸಂಖ್ಯೆ. 03403016167 ಶ್ರೀಮತಿ ಕೆ.ಎನ್.ಚಿತ್ರಾ (ರೂ. 70.00 ಲಕ್ಷಗಳು) : |

| | |
|---|---|
| | 2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.**<br><br>(3) ಅಡಮಾನ ಸಾಲ ಖಾತೆ ಸಂಖ್ಯೆ. 03403016162 ಶ್ರೀಮತಿ ಛಳಮ್ಮ ಕೆ. (ರೂ. 70.00 ಲಕ್ಷಗಳು) :<br><br>(ಅ) 2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.**<br><br>(ಆ) ಸ್ಥಿರಾಸ್ತಿಯ ಮೇಲೆ ವಿಮೆ ಮಾಡಿಸಿರುವುದಿಲ್ಲ.<br><br>**ಅನುವರ್ತನೆ : ವಿಮೆ ಮಾಡಿಸಲಾಗಿದೆ.**<br><br>(4) ಅಡಮಾನ ಸಾಲ ಖಾತೆ ಸಂಖ್ಯೆ. 03403016174 ಸೆಲಾಕ್ಸಿಸ್ (ಶ್ರೀಮತಿ ನವನೀತ ಎ.ಎಲ್ ಮತ್ತು ಉಮಾಶಂಕರ್ ಜಿ.ಎಮ್) (ರೂ. 1.60 ಕೋಟಿಗಳು) :<br><br>(ಅ) ಸಾಲದ ಎಲ್ಲಾ ದಾಖಲಾತಿಗಳಲ್ಲಿ ಶ್ರೀಮತಿ ನವನೀತ ಎ.ಎಲ್ ಮತ್ತು ಉಮಾಶಂಕರ್ ಜಿ.ಎಮ್ ರವರು ಜಂಟಿಯಾಗಿ ಸಹಿ ಮಾಡಿದ್ದು ಮತ್ತು ಶ್ರೀಮತಿ ನವನೀತರ ಏಕ ಮಾಲೀಕತ್ವ ಸಂಸ್ಥೆಯಾದ "ಸೆಲಾಕ್ಸಿಸ್" ಹೆಸರಿನಲ್ಲಿ ಸಾಲ ಖಾತೆ ತೆರೆಯಲು ಯಾವುದೇ ವಿನಂತಿ ಪತ್ರ ಇರದಿದ್ದರೂ, ಸಾಲ ಖಾತೆಯನ್ನು "ಸೆಲಾಕ್ಸಿಸ್" ಹೆಸರಿನಲ್ಲಿ ತೆರೆಯಲಾಗಿರುತ್ತದೆ.<br><br>**ಅನುವರ್ತನೆ : ಸಾಲದ ಖಾತೆಯನ್ನು "ಸೆಲಾಕ್ಸಿಸ್" ಬದಲಾಗಿ ನವನೀತ ಎ.ಎಲ್. ಮತ್ತು ಉಮಾಶಂಕರ್ ಜಿ.ಎಮ್. ಎಂದು ಸರಿಪಡಿಸಲಾಗಿದೆ.**<br><br>(ಆ) ಸ್ಥಿರಾಸ್ತಿ ಸಂಖ್ಯೆ 108, 3ನೇ ಅಡ್ಡರಸ್ತೆ ,11ನೇ ಮುಖ್ಯ ರಸ್ತೆ, ರಾಮಮೂರ್ತಿನಗರ ಇದರ ಬಾಡಿಗೆ ಆದಾಯಕ್ಕೆ ಪುರಾವೆಯಾಗಿ ಈ ಸ್ಥಿರಾಸ್ತಿಯ ಮಾಲೀಕತ್ವ ಸೂಚಿಸುವ ಖಾತಾ ಸರ್ಟಿ..ಕೇಟ್/ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.** |
| | **ಇಂದಿರಾನಗರ ಶಾಖೆ:**<br><br>(1)ಅಡಮಾನ ಸಾಲ ಖಾತೆ ಸಂಖ್ಯೆ. 07403005272 ಶ್ರೀಮತಿ ಮಂಜುಳಾ ಬಿ ಮತ್ತು ವೆಂಕಟಸ್ವಾಮಿ ಎಸ್. ಎಮ್ (ರೂ. 70.00 ಲಕ್ಷಗಳು) :<br><br>2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.** |

| | |
|---|---|
| | (2)ಅಡಮಾನ ಸಾಲ ಖಾತೆ ಸಂಖ್ಯೆ. 07403005275 ಶ್ರೀ ರವಿಕುಮಾರ ಜಿ. (ರೂ. 20.00 ಲಕ್ಷಗಳು) :<br><br>2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗಿದೆ.**<br><br>(3)**ಅಡಮಾನ ಸಾಲ ಖಾತೆ ಸಂಖ್ಯೆ.** 07403005279 ಶ್ರೀ ವಿಶ್ವನಾಥನ್ ಎಸ್.ಡಿ (ರೂ. 50.00 ಲಕ್ಷಗಳು) :<br><br>ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020–21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ.<br><br>**ಅನುವರ್ತನೆ : ಪಡೆಯಲಾಗುವುದು.**<br><br>(4)ಅಡಮಾನ ಸಾಲ ಖಾತೆ ಸಂಖ್ಯೆ. 07403005286 ಶ್ರೀಮತಿ ವಿಜಯಲಕ್ಷ್ಮಿ (ರೂ. 20.00 ಲಕ್ಷಗಳು) :<br><br>(ಅ) ಸಾಲಗಾರರ ಹೆಸರಿಗೆ ವರ್ಗಾಯಿಸಿದ ಖಾತಾ ಸರ್ಟಿಫಿಕೇಟ್ ಮತ್ತು ಖಾತಾ ಎಕ್ಸಾಟ್ರಕ್ಟ್ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.**<br><br>(ಆ) ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020–21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ.<br><br>**ಅನುವರ್ತನೆ : ಪಡೆಯಲಾಗಿದೆ.** |
| | **ಬೇಗೂರು ಶಾಖೆ:**<br><br>(1)ಅಡಮಾನ ಸಾಲ ಖಾತೆ ಸಂಖ್ಯೆ. 09403000021 ಶ್ರೀಮತಿ ಜಯಂತಿ ಎಮ್ (ರೂ. 45.00 ಲಕ್ಷಗಳು) :<br><br>(ಅ) ಸಾಲಗಾರರ ಹೆಸರಿಗೆ ವರ್ಗಾಯಿಸಿದ ಖಾತಾ ಸರ್ಟಿಫಿಕೇಟ್ ಮತ್ತು ಖಾತಾ ಎಕ್ಸಾಟ್ರಕ್ಟ್ ಪಡೆಯಬೇಕಾಗಿರುತ್ತದೆ.<br><br>**ಅನುವರ್ತನೆ : ಪಡೆಯಲಾಗುವುದು.**<br><br>(ಆ) ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020–21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ.<br><br>**ಅನುವರ್ತನೆ : ಪಡೆಯಲಾಗುವುದು.** |

| | |
|---|---|
| | (2)ಅಡಮಾನ ಸಾಲ ಖಾತೆ ಸಂಖ್ಯೆ. 09403000016 ಶ್ರೀಮತಿ ಪುಷ್ಪಾ ವಿ (ರೂ. 20.00 ಲಕ್ಷಗಳು) :<br>ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020-21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : ಪಡೆಯಲಾಗುವುದು.**<br>(3)ಅಡಮಾನ ಸಾಲ ಖಾತೆ ಸಂಖ್ಯೆ. 09403000020 ಶ್ರೀಮತಿ ಗೌತಮಿ ರಮೇಶ್ ಬಿ (ರೂ. 70.00 ಲಕ್ಷಗಳು) :<br>ನವೀಕರಿಸಿದ ಬಾಡಿಗೆ ಕರಾರು ಪತ್ರಗಳನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : ಪಡೆಯಲಾಗುವುದು.** |
| | **ಕೆಂಗೇರಿ ಶಾಖೆ:**<br>ಅಡಮಾನ ಸಾಲ ಖಾತೆ ಸಂಖ್ಯೆ. 05403003470 ಶ್ರೀನಿವಾಸ ರಾಮಾನುಜ ಬಿ.ವಿ. (ರೂ. 35.00 ಲಕ್ಷಗಳು) :<br>ಕಾನೂನು ಸಲಹೆಗಾರರ ವರದಿಯ ಪ್ರಕಾರ ಸ್ಥಿರಾಸ್ತಿಯ ದಿನಾಂಕ 11/11/2005ರ ಮೂಲ ವಿಭಾಗ ಪತ್ರವನ್ನು ಪಡೆಯಬೇಕಾಗಿರುತ್ತದೆ.<br>**ಅನುವರ್ತನೆ : ದೃಢೀಕರಿಸಿದ ಪ್ರತಿಯನ್ನು ಪಡೆಯಲಾಗಿದೆ.** |
| | **ಯಲಹಂಕ ಶಾಖೆ:**<br>(1)ಅಡಮಾನ ಸಾಲ ಖಾತೆ ಸಂಖ್ಯೆ. 06403005693 ಶ್ರೀ ಕೃಷ್ಣಮೂರ್ತಿ ಎಮ್ (ರೂ. 40.00 ಲಕ್ಷಗಳು) :<br>ಸ್ಥಿರಾಸ್ತಿಯ ಮೇಲೆ ಕೇವಲ ರೂ.22.00 ಲಕ್ಷಗಳಿಗೆ ವಿಮೆ ಮಾಡಿಸಿದ್ದು, ಇನ್ನೂ ರೂ.24.00 ಲಕ್ಷಗಳಿಗೆ ವಿಮೆ ಮಾಡಿಸಬೇಕಾಗಿರುತ್ತದೆ.<br>**ಅನುವರ್ತನೆ : ವಿಮೆ ಮಾಡಿಸಲಾಗಿದೆ.**<br>(2)ಅಡಮಾನ ಸಾಲ ಖಾತೆ ಸಂಖ್ಯೆ. 06403005688 ಶ್ರೀ ಪ್ರಕಾಶ್ ಬಿ.ಎಸ್ (ರೂ. 40.00 ಲಕ್ಷಗಳು) :<br>ಸಾಲಗಾರರ ಹೆಸರಿಗೆ ವರ್ಗಾಯಿಸಿದ 2020-21 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲು ಕ್ರಮ ಅಗತ್ಯ.<br>**ಅನುವರ್ತನೆ : 2020-21ನೇ ಸಾಲಿನ ಆಸ್ತಿ ತೆರಿಗೆಯನ್ನು ಮಾರಾಟಗಾರರಾದ ಶ್ರೀ ಮೋಹನರಾಜ್‌ರವರೇ ಪಾವತಿಸಿದ್ದು, ಶ್ರೀ ಬಿ.ಎಸ್. ಪ್ರಕಾಶ್‌ರವರಿಂದ ಮುಂದಿನ ಸಾಲಿನ ಆಸ್ತಿ-ತೆರಿಗೆ ರಶೀದಿಯನ್ನು ಪಡೆಯಲಾಗುವುದು.** |

(3)ಅಡಮಾನ ಸಾಲ ಖಾತೆ ಸಂಖ್ಯೆ. 06403005685 ಶ್ರೀಮತಿ ವನಮಾಲ ಎಲ್.ಕೆ (ರೂ.70.00 ಲಕ್ಷಗಳು) :

2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.

**ಅನುವರ್ತನೆ : ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲಾಗುವುದು.**

(4)ಅಡಮಾನ ಸಾಲ ಖಾತೆ ಸಂಖ್ಯೆ. 06403005685 ಶ್ರೀಮತಿ ಕಾಂತಮ್ಮ ಎಸ್ ಮತ್ತು ಇತರರು (ರೂ.70.00 ಲಕ್ಷಗಳು) :

(ಅ) 2019–20 ರ ಆಸ್ತಿ ತೆರಿಗೆ ಪಾವತಿ ರಶೀದಿ ಪಡೆಯಬೇಕಾಗಿರುತ್ತದೆ.

**ಅನುವರ್ತನೆ : ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲಾಗುವುದು.**

(ಆ) ಕಟ್ಟಡ ನಿರ್ಮಿಸಲು ನೀಡಿದ ಮಂಜೂರಾತಿ ನಕ್ಷೆಯ ಅವಧಿ 06/03/2019ಕ್ಕೆ ಅಂತ್ಯಗೊಂಡಿದ್ದು, ಕಟ್ಟಡ ನಿರ್ಮಿಸಲು ವಿಸ್ತರಣೆ ಪಡೆದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

**ಅನುವರ್ತನೆ : ಪಡೆಯಲಾಗುವುದು.**

(5)ಅಡಮಾನ ಸಾಲ ಖಾತೆ ಸಂಖ್ಯೆ.06403005696 ಶ್ರೀ ವಿಜಯಕುಮಾರ್ ವಿ ಮತ್ತು ಶ್ರೀವಾಣಿ (ರೂ.1.50 ಕೋಟಿಗಳು) :

(ಅ) ಫ್ಲಾಟ್ ನಂ.203ರ ಮೂಲ ವಿಮೆ ಪಾಲಿಸಿಯನ್ನು ಪಡೆಯಬೇಕಾಗಿರುತ್ತದೆ.

**ಅನುವರ್ತನೆ : ಪಡೆಯಲಾಗಿದೆ.**

(ಆ) ಫ್ಲಾಟ್ ನಂ. 103 ಮತ್ತು 203 ಇವುಗಳ ಮೂಲ ಖಾತಾ ಸರ್ಟಿಫಿಕೇಟ್ ಪಡೆಯಬೇಕಾಗಿರುತ್ತದೆ.

**ಅನುವರ್ತನೆ : ಪಡೆಯಲಾಗಿದೆ.**

**ವಿಜಯನಗರ ಶಾಖೆ:**

(1)ಅಡಮಾನ ಸಾಲ ಖಾತೆ ಸಂಖ್ಯೆ. 04403006879 ಶ್ರೀ ರಮೇಶ್ ಬಿ.ವಿ. (ರೂ.40.00 ಲಕ್ಷಗಳು) :

(ಅ) ಕಾನೂನು ಸಲಹೆಗಾರರ ವರದಿಯ ಪ್ರಕಾರ ಸಾಲಗಾರರ ಹೆಸರಿಗೆ ವರ್ಗಾಯಿಸಿದ 2019–20 ರ ಆಸ್ತಿ ತೆರಿಗೆ ರಶೀದಿಯನ್ನು ಪಡೆಯಬೇಕಾಗಿರುತ್ತದೆ.

**ಅನುವರ್ತನೆ : ಆಸ್ತಿ ತೆರಿಗೆ ರಶೀದಿಯನ್ನು ಪಡೆಯಲಾಗುವುದು.**

(ಆ) ಸ್ಥಿರಾಸ್ತಿ ಮೌಲ್ಯಮಾಪಕರ ವರದಿಯಲ್ಲಿ ಒಂದನೇ ಮಹಡಿಯು " ಸ್ಟಾರ್ ಡೆಂಟಲ್ ಸೆಂಟರ್ ಪ್ರೈವೇಟ್ ಲಿ." ಹೆಸರಿನಲ್ಲಿರುತ್ತದೆಂದು ತಿಳಿಸಲಾಗಿದ್ದು, ಈ ವಿಷಯದ ಬಗ್ಗೆ ಕಚೇರಿ ಟಿಪ್ಪಣಿ ಅಥವಾ ಇನ್ನಿತರ ಕಡೆಯಲ್ಲಿ ಚರ್ಚಿಸಲಾಗಿರುವುದಿಲ್ಲ.

(2)ಅಡಮಾನ ಸಾಲ ಖಾತೆ ಸಂಖ್ಯೆ. 04403006880 ಶ್ರೀಮತಿ ಆಶಾ ಕೆ.ಎಸ್. (ರೂ.55.00 ಲಕ್ಷಗಳು) :

ಕಾನೂನು ಸಲಹೆಗಾರರ ವರದಿಯ ಪ್ರಕಾರ 15.03.1980ರ ಜಿ. .ಎ. ತೋರಿಸುತ್ತಿರುವ ಇ.ಸಿ.ಯನ್ನು ಪಡೆಯಲು ಸೂಚಿಸಿದ್ದು, ಬ್ಯಾಂಕು ತದನಂತರ ಪಡೆದ ಇ.ಸಿ.ಯಲ್ಲಿ ಜಿ. .ಎ. ವ್ಯವಹಾರ ಬಂದಿರದೇ ಇರುವುದರಿಂದ, ಕಾನೂನು ಸಲಹೆಗಾರರಿಂದ ಪುನಃ ಅಭಿಪ್ರಾಯ ಪಡೆಯುವುದು ಅವಶ್ಯ.

**ಅನುವರ್ತನೆ : ಕ್ರಮವಿಡಲಾಗುವುದು.**

**ದಿನಾಂಕ: 31–03–2020 ರ ಅಂತ್ಯಕ್ಕೆ ಬಾಕಿ ಬರಬೇಕಾದ ಸಾಲ ಮತ್ತು ಮುಂಗಡಗಳು**

| **ಸಾಲಗಳ ಸ್ವರೂಪ:** | **ವರ್ಷಾಂತ್ಯಕ್ಕೆ ಬಾಕಿ (ರೂ. ಲಕ್ಷಗಳಲ್ಲಿ)** |
|---|---|
| ಆಭರಣ ಸಾಲ | 163.72 |
| ಓವರ್ ಡ್ರಾಫ್ಟ್ | 4593.77 |
| ಆಧಾರದ ಸಾಲ(ಸಂಬಳಾಧಾರಿತ) | 1.95 |
| ಆಧಾರವಿಲ್ಲದ ಸಾಲಗಳು | 570.31 |
| ವಾಹನ ಸಾಲ | 197.24 |
| ಖಾಯಂ ಠೇವಣಿಗಳ ಮೇಲಿನ ಸಾಲ | 295.63 |
| ಉದಯ ಭಾರತಿ ಠೇವಣಿಗಳ ಮೇಲಿನ ಸಾಲ | 149.57 |
| ಸಂಚಿತ ಠೇವಣಿಗಳ ಮೇಲಿನ ಸಾಲ | 11.70 |
| ಠೇವಣಿಗಳ ಮೇಲಿನ ಓ.ಡಿ. ಸಾಲ | 1.66 |
| ಅಡಮಾನ ಸಾಲ | 23673.80 |
| ಸಿಬ್ಬಂದಿ ಸಾಲ | 927.76 |
| **ಒಟ್ಟು** | 30587.11 |

| | | |
|---|---|---|
| 28 | ಸುಸ್ತಿ ಸಾಲಗಳ ವಿವರ | ವರದಿ ವರ್ಷಾಂತ್ಯಕ್ಕೆ ಸುಸ್ತಿ ಸಾಲದ ಮೊತ್ತ ರೂ. 1887.27 ಲಕ್ಷಗಳು ಇರುತ್ತದೆ. |
| | 1) ಶೇಕಡಾವಾರು ಸುಸ್ತಿ ಸಾಲಗಳ ಬಗ್ಗೆ ವಿಮರ್ಶೆ | ಸುಸ್ತಿ ಸಾಲವು ಒಟ್ಟು ಸಾಲದ ಶೇ. 6.17 ರಷ್ಟಿರುತ್ತದೆ. |

| 2) ದಿನಾಂಕ 31-03-2020 ಕ್ಕೆ ಇದ್ದಂತೆ ಸುಸ್ತಿ ಸಾಲಗಳ ವರ್ಗೀಕರಣ - ವರ್ಗಾವಾರು | | | | | | | |
|---|---|---|---|---|---|---|---|
| ಅವಧಿ | ಅಡಮಾನ ಸಾಲ | ಆಧಾರ ರಹಿತ ಸಾಲ | ಸಂಬಂಳಾ ಧಾರಿತ ಸಾಲ | ವಾಹನ ಸಾಲ | ಚಿನ್ನಾಭರಣಗಳ ಸಾಲ | ಓ.ಡಿ. ಸಾಲ | ಒಟ್ಟು |
| ಒಂದು ವರ್ಷದ ಒಳಗೆ | 157.70 | 13.88 | - | 1.71 | 6.39 | 1398.55 | 1578.23 |
| 1 ರಿಂದ 2 ವರ್ಷದೊಳಗೆ | 108.11 | 4.23 | - | - | - | - | 112.34 |
| 2 ರಿಂದ 3 ವರ್ಷದೊಳಗೆ | 62.00 | 4.49 | - | - | - | - | 66.49 |
| 3 ರಿಂದ 4 ವರ್ಷದೊಳಗೆ | 9.86 | 6.08 | 0.96 | - | - | - | 16.90 |
| 4 ರಿಂದ 5 ವರ್ಷದೊಳಗೆ | 59.31 | 10.12 | - | - | - | - | 69.43 |
| 5 ರಿಂದ 6 ವರ್ಷದೊಳಗೆ | 13.56 | - | - | - | - | - | 13.56 |
| 6 ವರ್ಷ ಮೇಲ್ಪಟ್ಟು | 30.32 | - | - | - | - | - | 30.32 |
| ಒಟ್ಟು ರೂ. | 440.86 | 38.80 | 0.96 | 1.71 | 6.39 | 1398.55 | 1887.27 |

| | | |
|---|---|---|
| | 3) ಎನ್. .ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್. .ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) | ನಿಗದಿಪಡಿಸಿದ ನಮೂನೆಯಲ್ಲಿ ಎನ್. .ಎ.ತ:ಖ್ತೆಯನ್ನು ದೃಢೀಕರಿಸಿ ವರದಿಗೆ ಲಗತ್ತಿಸಿದೆ. ಈ ತ:ಖ್ತೆಯ ಅನುಸಾರ ದಿ: 31.03.2020 ಕ್ಕೆ ಒಟ್ಟು ಅನುತ್ಪಾದಕ ಆಸ್ತಿಯು ವರ್ಷಾಂತ್ಯಕ್ಕೆ ರೂ. 4893.04 ಲಕ್ಷಗಳಾಗಿದ್ದು, ಅದು ಒಟ್ಟು ಸಾಲ ಮತ್ತು ಮುಂಗಡ ಮೊತ್ತಕ್ಕೆ ಶೇ. 16.00 ರಷ್ಟಿರುತ್ತದೆ. ನಿವ್ವಳ ಅನುತ್ಪಾದಕ ಆಸ್ತಿಯು ವರ್ಷಾಂತ್ಯಕ್ಕೆ ಶೇ. 12.67 ರಷ್ಟಿರುತ್ತದೆ.<br><br>ದಿ: 31.03.2020 ಕ್ಕೆ ಅನುತ್ಪಾದಕ ಸಾಲಗಳಿಗೆ ಕಲ್ಪಿಸಬೇಕಾದ ಅವಕಾಶದ ಮೊತ್ತ ರೂ. 1164.98 ಲಕ್ಷಗಳಾಗಿದ್ದು, ವರ್ಷಾಂತ್ಯಕ್ಕೆ ಸಂಶಯಾತ್ಮಕ ಮತ್ತು |

| | | |
|---|---|---|
| | | ಮುಳುಗುವ ಸಾಲದ ನಿಧಿಯಲ್ಲಿ ರೂ. 1164.98 ಲಕ್ಷಗಳು ಇರುತ್ತದೆ. ಆದ್ದರಿಂದ ಕರಡು ಮತ್ತು ಸಂಶಯಾಸ್ಪದ ಸಾಲಗಳಿಗೆ ಸಂಬಂಧಿಸಿದಂತೆ ಇರುವ ಅವಕಾಶದ ಮೊತ್ತದಲ್ಲಿ ಯಾವುದೇ ಕೊರತೆ ಯಿರುವುದಿಲ್ಲ. |
| 29 | ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕ್‌ನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದುತ್ತದೆಯೇ? | ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕ್‌ನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದಿರುತ್ತದೆ. |
| 30 | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು. | ಆಡಳಿತ ಮಂಡಳಿ ನಿರ್ದೇಶಕರು ಮತ್ತು ಅವರ ಸಂಬಂಧಿಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲವೆಂದು ಕಾರ್ಯದರ್ಶಿಯವರು ಭಾರತೀಯ ರಿಸರ್ವ್ ಬ್ಯಾಂಕಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ. |

| ಕ್ರ. ಸಂ. | ನಿರ್ದೇಶಕರ ಹೆಸರು | ಬಾಕಿ ಸಾಲದ ಮೊತ್ತ (ಅಸಲು) | ಸುಸ್ತಿ ಸಾಲದ ಬಗ್ಗೆ | | ಯಾವ ದಿನಾಂಕದಿಂದ ಸುಸ್ತಿಯಾಗಿದೆ | ಷರಾ |
|---|---|---|---|---|---|---|
| | | | ಅಸಲು | ಬಡ್ಡಿ | | |
| ಅನ್ವಯಿಸುವುದಿಲ್ಲ | | | | | | |

| | | |
|---|---|---|
| 31 | a) (i) ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ | ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣವು ರೂ.13083.89 ಲಕ್ಷಗಳಾಗಿರುತ್ತದೆ. |
| | (ii) ಸಾಲಾಖೈರಿಗೆ ನೀಡಿರುವ ಒಟ್ಟು ಮುಂಗಡದ ಶೇಕಡಾವಾರು ಪ್ರಮಾಣ | ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣವು ಒಟ್ಟು ಸಾಲದ ಶೇ.42.75 ರಷ್ಟಿರುತ್ತದೆ. |

| | |
|---|---|
| (iii) ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ. | ವರ್ಷಾಂತ್ಯಕ್ಕೆ ದುರ್ಬಲ ವರ್ಗದವರಿಗೆ ನೀಡಿರುವು ಬಾಕಿ ಸಾಲದ ಪ್ರಮಾಣವು ರೂ. 3564.67 ಲಕ್ಷಗಳಾಗಿರುತ್ತದೆ |
| (iv) ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ | ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣವು ಶೇ.27.24 ಆಗಿರುತ್ತದೆ. |
| ಆ) ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ ಇತ್ಯಾದಿಗಳ ಮೇಲೆ (ವ್ಯಾಖ್ಯಾನ) ವಿವರಣೆ | ವಿವರಣೆ ಈ ಕೆಳಗಿನಂತಿರುತ್ತದೆ. |

| ಕ್ರ. ಸಂ. | ಸಾಲದ ಸ್ವರೂಪ | ಸಾಲಗಳ ಅವಧಿ (ತಿಂಗಳು) | ಸಾಲದ ಗರಿಷ್ಠ ಮಿತಿ |
|---|---|---|---|
| 1 | ಆಧಾರವಿಲ್ಲದ ಸಾಲಗಳು | 50 | ರೂ. 2 ಲಕ್ಷ |
| 2 | ಚಿನ್ನಾಭರಣ ಸಾಲ | 12 | ರೂ. 10 ಲಕ್ಷ |
| 3 | ವಾಹನ ಸಾಲ | 60 | ರೂ. 40 ಲಕ್ಷ |
| 4 | ಓವರ್ ಡ್ರಾಫ್ಟ್ | 12 | ರೂ. 2 ಕೋಟಿ |
| **ಅಡಮಾನ ಸಾಲಗಳು** | | | |
| 5 | ವ್ಯಾಪಾರ ಅಭಿವೃದ್ದಿ ಸಾಲ | 120 | ರೂ. 3 ಕೋಟಿ |
| 6 | ಮನೆ ಕಟ್ಟಲು/ ಕೊಳ್ಳಲು | 180 | ರೂ. 70 ಲಕ್ಷ |
| 7 | ನಿವೇಶನ ಕೊಳ್ಳಲು | 180 | ರೂ. 40 ಲಕ್ಷ |
| 8 | ನಿವೇಶನ ಕೊಳ್ಳಲು ಜೊತೆಗೆ ಕಟ್ಟಡ ಕಟ್ಟಲು | 180 | ರೂ. 70 ಲಕ್ಷ |
| 9 | ಸಾಲ ತೀರಿಸಲು | 180 | ರೂ. 70 ಲಕ್ಷ |
| 10 | ಮದುವೆ ಉದ್ದೇಶಕ್ಕೆ | 180 | ರೂ. 25 ಲಕ್ಷ |
| 11 | ಮನೆ ರಿಪೇರಿ/ ನವೀಕರಣ | 180 | ರೂ. 5 ಲಕ್ಷ |
| 12 | ವಿದ್ಯಾಭ್ಯಾಸಕ್ಕೆ | 180 | ರೂ. 15 ಲಕ್ಷ |
| 13 | ಬಾಡಿಗೆ ರಿಯಾಯಿತಿ | 120 | ರೂ. 3 ಕೋಟಿ |

<table>
<tr><td></td><td colspan="2">ವರದಿ ಸಾಲಿನಲ್ಲಿ ಸಾಲದ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಏಕ ಸಾಲಗಾರನಿಗೆ ಮತ್ತು ಗುಂಪು ಸಾಲಗಾರರಿಗೆ ಅನುಕ್ರಮವಾಗಿ ಬಂಡವಾಳ ನಿಧಿಯ ಶೇ.15 ಮತ್ತು ಶೇ.40 ಮೀರದಂತೆ ಸಾಲಗಳನ್ನು ಮಂಜೂರು ಮಾಡಿರುವುದನ್ನು ಗಮನಿಸಲಾಗಿರುತ್ತದೆ. ಹಾಗೆಯೇ ಸಾಲ ನೀತಿಯಲ್ಲಿ ನಿಗದಿಪಡಿಸಿದ ಸಾಲದ ಗರಿಷ್ಟ ಅವಧಿಯನ್ನು ಮೀರಿ ಸಾಲಗಳನ್ನು ನೀಡಿರುವುದು ಕಂಡುಬಂದಿರುವುದಿಲ್ಲ.</td></tr>
<tr><td>32</td><td>ನಾನ್ ಬ್ಯಾಂಕಿಂಗ್ ಆಸ್ತಿಗಳು:<table><tr><th>ಜಮೀನು ಆಸ್ತಿ</th><th>ಮನೆ ನಂ.</th><th>ಖರೀದಿಯ ಮೌಲ್ಯ</th></tr><tr><td></td><td></td><td></td></tr></table></td><td>ಬ್ಯಾಂಕೇತರ ಆಸ್ತಿಗಳನ್ನು ಹೊಂದಿರುವುದಿಲ್ಲ</td></tr>
<tr><td>33</td><td>ಆಸ್ತಿ ಜವಾಬ್ದಾರಿ ನಿರ್ವಹಣೆ<br>(i) ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ. ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ.<br><br>(ii) ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ ಕುರಿತು ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆಯಾ ಗುತ್ತಿರುವ ಬಗ್ಗೆ.</td><td>ಆಸ್ತಿ ಜವಾಬ್ದಾರಿ ನಿರ್ವಹಣೆಯನ್ನು ಗಣಕೀಕೃತಗೋಳಿಸಲಾಗಿರುತ್ತದೆ. ಸಾಮಾನ್ಯವಾಗಿ ಆರ್.ಬಿ.ಐ. ಮಾರ್ಗ ಸೂಚಿಗಳನ್ನು ಪಾಲಿಸಲಾಗಿರುತ್ತದೆ.<br><br>ಪ್ರತ್ಯೇಕ ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿ ಇರುತ್ತದೆ. ಪ್ರತಿ ತ್ರೈಮಾಸಿಕ ಆಧಾರದ ಮೇಲೆ ಸಭೆ ಕರೆದು ದ್ರವ್ಯಾಸ್ಥಿ ನಿರ್ವಹಣೆಯಾಗುತ್ತಿರುವ ಬಗ್ಗೆ ಚರ್ಚಿಸಲಾಗಿರುತ್ತದೆ.</td></tr>
<tr><td>34</td><td>ಡೆಡ್‌ಸ್ಟಾಕು : ವಿವರಣೆ</td><td>ವರದಿ ವರ್ಷದಲ್ಲಿ ಯಾವುದೇ ಆಸ್ತಿಯನ್ನು ಡೆಡ್ ಸ್ಟಾಕ್ ಎಂದು ವರ್ಗೀಕರಿಸಿರುವುದಿಲ್ಲ.</td></tr>
<tr><td>35</td><td>ಕಟ್ಟಡ– ವಿವರಣೆ</td><td>ಬ್ಯಾಂಕಿನ ಕೇಂದ್ರ ಕಚೇರಿ, ಮತ್ತೀಕೆರೆ ಶಾಖೆ ಮತ್ತು ಯಲಹಂಕ ಶಾಖೆ ಇವುಗಳ ಕಟ್ಟಡ ಬ್ಯಾಂಕಿನ ಸ್ವಂತ ಕಟ್ಟಡಗಳಾಗಿರುತ್ತವೆ.</td></tr>
<tr><td>36</td><td colspan="2">ಬಿಲ್ಸ್, ಡಿಸ್ಕೌಂಟ್, ಕ್ಲಿಯರಿಂಗ್, ಡ್ರಾಫ್ಟ್ ಇತ್ಯಾದಿಗಳು</td></tr>
</table>

| ವಿವರ | ಮೊತ್ತ (ರೂ.ಗಳಲ್ಲಿ) |
|---|---|
| ಪಾವತಿಸಬೇಕಾಗಿರುವ ಪೇ ಆರ್ಡರ್ಸ್–ಅನ್‌ಕ್ಲೇಮ್ಡ್ : ಬ್ಯಾಂಕಿನ ಶಾಖೆಗಳಲ್ಲಿ ಬಹಳ ಹಿಂದೆ ನೀಡಿದ ಪೇ ಆರ್ಡರ್ಸ್‌ಗಳನ್ನು ಸಂಬಂಧಪಟ್ಟವರು ನಗದೀಕರಿಸದಿದ್ದರಿಂದ ಆ ಮೊತ್ತವು ಈ ಖಾತೆಗಳಲ್ಲಿ ಉಳಿದಿರುತ್ತದೆ. | 17,13,583.00 |
| ಪಾವತಿಸಬೇಕಾಗಿರುವ ಪೇ ಆರ್ಡರ್ಸ್: ಬ್ಯಾಂಕಿನ ಶಾಖೆಗಳಲ್ಲಿ ಪೇ ಆರ್ಡರ್ಸ್ ನೀಡಲಾಗುತ್ತಿದ್ದು, ವರದಿ ಸಾಲಿನ ಅಂತ್ಯಕ್ಕೆ ಪೇ ಆರ್ಡರ್‌ಗಳನ್ನು ಸಂಬಂಧಪಟ್ಟವರು ನಗದೀಕರಿಸದಿದ್ದರಿಂದ ಆ ಮೊತ್ತವು ಈ ಖಾತೆಗಳಲ್ಲಿ ಉಳಿದಿರುತ್ತದೆ. | 32,86,186.00 |
| ಕ್ಲಿಯರಿಂಗ್ ಅಮಾನತ್ತು: ವರದಿ ಸಾಲಿನ ಅಂತ್ಯಕ್ಕೆ ಚೆಕ್ ಇತ್ಯಾದಿಗಳ ಕ್ಲಿಯರಿಂಗ್ ಮೊತ್ತ ಇದಾಗಿರುತ್ತದೆ. | 6,97,218.00 |

| | | |
|---|---|---|
| 37 | ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು | ಸಾಲ ಮತ್ತು ಠೇವಣಿಗಳ ಮೇಲೆ ಬಡ್ಡಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಆಧಾರದನ್ವಯ ಮತ್ತು ಆಡಳಿತ ಮಂಡಳಿಯು ತೀರ್ಮಾನದಂತೆ ಮಾಡಲಾಗುತ್ತಿದೆ. |
| 38 | ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ? | ಶಾಖೆಗಳ ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ವಿವರಗಳನ್ನು ಪರಿಶೀಲಿಸಿದಾಗ ವರದಿ ವರ್ಷಾಂತ್ಯಕ್ಕೆ ಕೇಂದ್ರ ಕಚೇರಿ ಮತ್ತು ಶಾಖೆಗಳ ಹೊಂದಾಣಿಕೆ ಖಾತೆಗಳ ಮಧ್ಯೆ ವ್ಯತ್ಯಾಸ ಕಂಡುಬಂದಿರುವುದಿಲ್ಲ. |
| 39 | ಆಂತರಿಕ ಹತೋಟಿ<br>a) ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈ ಡಿಗಳ ಬಗ್ಗೆ | ಲೆಕ್ಕಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅವಶ್ಯವಿದ್ದ ಮಾರ್ಗ ಸೂಚಿಗಳನ್ನು ಕೇಂದ್ರ ಕಛೇರಿಯು ಎಲ್ಲಾ ಶಾಖೆಗಳಿಗೆ ಸುತ್ತೋಲೆಯ ಮುಖಾಂತರ ಕಳುಹಿಸಿಕೊಡುವ ಪದ್ಧತಿಯು ಜಾರಿಯಲ್ಲಿರುತ್ತದೆ. |

| | | |
|---|---|---|
| | b) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing)/ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ<br>(i) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ.<br>ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಎಲ್ಲಾ ಶಾಖೆಗಳನ್ನು ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದ್ದು, ಲೆಕ್ಕ ಪತ್ರಗಳ ಸರಿದೂಗಿಸುವಿಕೆಯನ್ನು ಕಾಲ ಕಾಲಕ್ಕೆ ಪರಾಮರ್ಶಿಸಲಾಗಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಎಲ್ಲಾ ಲೆಕ್ಕ ಪತ್ರಗಳನ್ನು ಸರಿದೂಗಿಸಲಾಗಿದೆ. |
| | **(ii)** ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ | ಸಾಮಾನ್ಯವಾಗಿ ಲೆಕ್ಕ ಪತ್ರಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ. ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅವುಗಳಿಗೆ ಸಂಬಂಧಿಸಿದಂತೆ ಸಮನ್ವಯ ಪಟ್ಟಿಯನ್ನು ತಯಾರಿಸುವ ಪದ್ಧತಿಯು ಜಾರಿಯಲ್ಲಿರುತ್ತದೆ. |
| | c) **ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ**<br>i) ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ. | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿರುತ್ತದೆ. |
| | ii) ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. | ಲೆಕ್ಕಪರಿಶೋಧನಾ ಸಂದರ್ಭದಲ್ಲಿ ಪರೀಕ್ಷಾರ್ಥವಾಗಿ ಪರಿಶೀಲಿಸಿದಾಗ ಯಾವುದೇ ಅಸಮಾನ್ಯ ಎಂಟ್ರಿಗಳನ್ನು ಹಾಕಿರುವುದು ಕಂಡುಬಂದಿರುವುದಿಲ್ಲ. |
| | iii) ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಪ್ರಧಾನ ಕಛೇರಿಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. |
| | iv) ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು | ಬ್ಯಾಂಕು ಗಣಕೀಕೃತ ತಂತ್ರಾಂಶವನ್ನು ಅಳವಡಿಸಿಕೊಂಡಿದ್ದು, ಸಮನ್ವಯಗಳನ್ನು ತಹಲ್‌ವರೆಗೆ ಮಾಡಿರುತ್ತಾರೆ. |

| | | |
|---|---|---|
| | (v) ಹಳೆಯ ಬಾಕಿಯಲ್ಲಿರುವ ನಮೂದುಗಳ ಬಗ್ಗೆ ಆರ್.ಬಿ.ಐ. ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ. | ಹಳೆಯ ಬಾಕಿಯಲ್ಲಿರುವ ನಮೂದುಗಳು ಕಂಡುಬಂದಿರುವುದಿಲ್ಲ. |
| | d) ಶಾಖೆಗಳ ಪರಿವೀಕ್ಷಣೆ:<br>i) ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ | ಬ್ಯಾಂಕಿನ ಹಾಲಿ ಅಧಿಕಾರಿಯನ್ನು ಆಂತರಿಕ ಲೆಕ್ಕ ಪರಿಶೋಧಕರನ್ನಾಗಿ ನೇಮಿಸುವುದರ ಮುಖಾಂತರ ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆ. ಆಂತರಿಕ ಲೆಕ್ಕ ಪರಿಶೋಧನಾ ವರದಿಗಳನ್ನು ಕಾಲ ಕಾಲಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ. |
| | ii) ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ | ಕೇಂದ್ರ ಕಛೇರಿಯು ಶಾಖೆಗಳಿಂದ ಅನುಪಾಲನಾ ವರದಿಯನ್ನು ಪಡೆದಿರುತ್ತದೆ. |
| | a) ಜಾಗರೂಕತೆ<br>i. ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | 1.ವಿಜಯನಗರ ಶಾಖೆಯಲ್ಲಿ ಸಾಲಗಾರರಾದ ಶ್ರೀ ಪ್ರಸನ್ನರವರ ಸಾಲದ ಖಾತೆಯ ಬಗ್ಗೆ :– 2018–19 ನೇ ಸಾಲಿನಲ್ಲಿ ನಡೆದ ಆಡಳಿತ ಮಂಡಳಿತ ಸಭೆಯಲ್ಲಿ ಶ್ರೀ ಪ್ರಸನ್ನರವರ ಸಾಲದ ಖಾತೆಗೆ ಸಂಬಂಧಿಸಿದಂತೆ ಅವರ ವಿರುದ್ದ ಎಫ್‌ಐಆರ್ ಸಲ್ಲಿಸಿ ಆ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೂ ಸಹ ತಿಳಿಸಲು ಕಾರ್ಯದರ್ಶಿಯವರಿಗೆ ಸೂಚಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ವರದಿ ಸಾಲಿನಲ್ಲಿ ಎಫ್‌ಐಆರ್ ಸಲ್ಲಿಸಿ ಆ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೂ ಸಹ ತಿಳಿಸಿರುತ್ತಾರೆ. ಈ ಖಾತೆಗೆ ಸಂಬಂಧಿಸಿದಂತೆ ಪೂರ್ತಿ |

| | | |
|---|---|---|
| | | ಬಾಕಿ ಮೊತ್ತ ರೂ.249.13 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮುಂದುವರೆದು, ಎಫ್ಐಆರ್ ಸಲ್ಲಿಸಲು ವಿಳಂಬಗೊಂಡಿದ್ದರಿಂದ ರಿಸರ್ವ್ ಬ್ಯಾಂಕಿಗೆ ವಂಚನೆಯ ಪ್ರಕರಣವನ್ನು ತಡವಾಗಿ ತಿಳಿಸಲಾಗಿರುತ್ತದೆಂದು ಬ್ಯಾಂಕಿನ ಕಾರ್ಯದರ್ಶಿಯವರು ನಮಗೆ ತಿಳಿಸಿರುತ್ತಾರೆ. |
| | ii. ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | 2.ವಿಜಯನಗರ ಶಾಖೆಯಲ್ಲಿ ಸಾಲಗಾರರಾದ ಶ್ರೀಮತಿ ರೂಪ ಕೆ. ಮತ್ತು ಅಮರೇಂದ್ರ ಎಮ್. ರವರ ಸಾಲದ ಖಾತೆಯ ಬಗ್ಗೆ :– ಜುಲೈ 2019 ರಲ್ಲಿ ಈ ಸಾಲಗಾರರು ಬ್ಯಾಂಕಿಗೆ ಅಡಮಾನ ಮಾಡಿದ ಸ್ಥಿರಾಸ್ತಿಯ ಮೇಲೆ ಬೇರೆ ಬ್ಯಾಂಕಿನಲ್ಲಿಯೂ ಸಹ ಸಾಲ ಪಡೆದಿರುವುದನ್ನು ಖಚಿತಪಡಿಸಿಕೊಂಡು ಅದನ್ನು ದಿನಾಂಕ 30.07.2019ರ ಆಡಳಿತ ಮಂಡಳಿತ ಸಭೆಯಲ್ಲಿ ಚರ್ಚಿಸಿ, ಸೆಪ್ಟಂಬರ್ 2019 ರಲ್ಲಿ ಎಫ್ಐಆರ್ ಸಲ್ಲಿಸಿ, ಆ ಮಾಹಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕಿಗೂ ಸಹ ತಿಳಿಸಿರುತ್ತಾರೆ. ವರದಿ ಸಾಲಿನ 2ನೇ ತ್ರೈಮಾಸಿಕ ಅವಧಿಯಲ್ಲಿ ವಂಚನೆ ಪ್ರಕರಣ ಬೆಳಕಿಗೆ ಬಂದಿರುವುದರಿಂದ ಈ ಖಾತೆಗೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಬಾಕಿ ಮೊತ್ತ ರೂ.297.43 ಲಕ್ಷಗಳಿಗೆ ತ್ರೈಮಾಸಿಕ ಆಧಾರದ ಮೇಲೆ ವರದಿ ಸಾಲಿನ 3 ತ್ರೈಮಾಸಿಕಗಳಿಗೆ ಅಂದರೆ ಶೇ. 75 ರಂತೆ ರೂ. 223.07 ಲಕ್ಷಗಳಷ್ಟು ಅವಕಾಶವನ್ನು 31.03.2020 ಕ್ಕೆ ಕಲ್ಪಿಸಲಾಗಿರುತ್ತದೆ. |

| | | |
|---|---|---|
| | | ನಮ್ಮ ಅಭಿಪ್ರಾಯದಲ್ಲಿ ವಂಚನೆ ಪ್ರಕರಣ ಬೆಳಕಿಗೆ ಬಂದ ತಕ್ಷಣ ಆ ಮಾಹಿತಿಯನ್ನು ರಿಸರ್ವ್ ಬ್ಯಾಂಕಿನ ಸಂಬಂಧಪಟ್ಟ ವಿಭಾಗಗಳಿಗೆ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ತಿಳಿಸುವುದು ಅತ್ಯಗತ್ಯ.<br><br>ವರದಿ ಸಾಲಿನಲ್ಲಿ ಯಾವುದೇ ಜಾಗ್ರತ ವರದಿಗಳು ಇರದೇ ಇರುವುದರಿಂದ ಅವುಗಳ ಮೇಲೆ ಕೈಗೊಳ್ಳಬೇಕಾದ ಅನುಸರಣಾ ಕ್ರಮ ಅನ್ವಯಿಸುವುದಿಲ್ಲ. |
| | iii. ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ | ಈ ಖಾತೆಗಳಿಗೆ ಸಂಬಂಧಪಟ್ಟಂತೆ ಕುಳುವಾರು ಪಟ್ಟಿಯನ್ನು ತಯಾರಿಸ ಲಾಗಿದೆ. ಇತರೆ ಜವಾಬ್ದಾರಿಗಳು ಮತ್ತು ಇತರೆ ಆಸ್ತಿಗಳು ಶೀರ್ಷಿಕೆಯಡಿಯಲ್ಲಿ ಇವುಗಳ ಬಗ್ಗೆ ವಿವರಿಸಲಾಗಿದೆ. |
| | vi. ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಸಾಮಾನ್ಯವಾಗಿ ಈ ಖಾತೆಗಳಲ್ಲಿನ ಜಮಾ-ಖರ್ಚುಗಳನ್ನು ಪರಿಶೀಲಿಸಿ ತೀರುವಳಿ ಮಾಡಿರುತ್ತಾರೆ, ನಮ್ಮ ಪರಿಕ್ಷಾರ್ಥ ಪರಿಶೀಲನೆಯಲ್ಲಿ ಅಸಾಮಾನ್ಯವಾದ ನಮೂದುಗಳು ಕಂಡುಬಂದಿರುವುದಿಲ್ಲ. |
| 40 | ಆಡಳಿತ / ಸಿಬ್ಬಂದಿ | **ಆಡಳಿತ:**<br><br>ದಿ:31.03.2020ಕ್ಕೆ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಒಟ್ಟು 18 ಜನ ನಿರ್ದೇಶಕರಿರುತ್ತಾರೆ.<br><br>**ಸಿಬ್ಬಂದಿ:**<br><br>ಸಂಘಕ್ಕೆ ಮಂಜೂರಾದ<br><br>ಸಿಬ್ಬಂದಿಗಳ ಸಂಖ್ಯೆ : 134 |

| | | |
|---|---|---|
| | | ಕಾರ್ಯ ನಿರ್ವಹಿಸುತ್ತಿರುವ<br>ಸಿಬ್ಬಂದಿಗಳ ಸಂಖ್ಯೆ : 98<br>2019–20ನೇ ಸಾಲಿನ ಸಿಬ್ಬಂದಿ ವೆಚ್ಚವು ದುಡಿಯುವ ಬಂಡವಾಳದ ಶೇ. 1.85 ಆಗಿರುತ್ತದೆ. |
| 41 | ಆಕಸ್ಮಿಕ ವೆಚ್ಚಗಳು | ವರದಿ ವರ್ಷಾಂತ್ಯಕ್ಕೆ ಯಾವುದೇ ಆಕಸ್ಮಿಕ ವೆಚ್ಚಗಳು ಇರುವುದಿಲ್ಲ. |
| 42 | ಬೋನಸ್ಸು/ ಎಕ್ಸ್‌ಗ್ರೇಷಿಯಾ ಇತ್ಯಾದಿ | ಬೋನಸ್ ಕಾಯಿದೆ ಅನ್ವಯಿಸುವುದಿಲ್ಲ. ಆದರೆ ಎಕ್ಸ್‌ಗ್ರೇಷಿಯಾ ನೀಡಲು ರೂ..10,92,699/– ಗಳ ಅವಕಾಶವನ್ನು ಕಲ್ಪಿಸಿಕೊಂಡಿರುತ್ತಾರೆ. |
| 43 | ಲಾಭ ವಿಲೇವಾರಿ | ಸಹಕಾರ ಸಂಘಗಳ ಕಾಯ್ದೆ, ಕಾನೂನು ಮತ್ತು ಉಪನಿಯಮದನುಸಾರ ಲಾಭ ವಿಲೇವಾರಿ ಮಾಡಿಕೊಳ್ಳಲಾಗಿದೆ |
| 44 | **ಡಿವಿಡೆಂಡ್:**<br>ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಶೇಕಡಾವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ? | ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಡಿವಿಡೆಂಡ್‌ನ್ನು ಘೋಷಿಸಲಾಗಿದೆ.<br>2018–19ನೇ ಸಾಲಿಗೆ ಶೇ.14 ರಂತೆ ಡಿವಿಡೆಂಡ್ ನೀಡಲಾಗಿರುತ್ತದೆ. |
| 45 | **ಸಭೆಗಳು**<br>a) ಕೊನೆಯ ಸರ್ವ ಸದಸ್ಯರ ಮಹಾ ಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂಧಿಸಿದ್ದು, ಎಂಬುದರ ಬಗ್ಗೆ<br>ಕೊನೆಯ ಸರ್ವ ಸದಸ್ಯರ ಸಭೆ ನಡೆದ ದಿನಾಂಕ 22–09–2019 ಆಗಿದ್ದು, ಅದು 201819ನೇ ಆರ್ಥಿಕ ಸಾಲಿಗೆ ಸಂಬಂಧಿಸಿದ್ದಾಗಿದೆ.<br>**b) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ**<br>ವರದಿ ಸಾಲಿನಲ್ಲಿ ನಡೆದ ಮಂಡಳಿಯ/ಸಮಿತಿಗಳ ವಿವರ ಈ ಕೆಳಗಿನಂತಿರುತ್ತದೆ:<br>ಆಡಳಿತ ಮಂಡಳಿಯ ಸಭೆಗಳು–17<br>ರಿಸೋರ್ಸಸ್ ಮತ್ತು ಮೆಂಬರ್‌ಶಿಪ್ ಸಮಿತಿ ಸಭೆಗಳು: 9 | |

| | |
|---|---|
| | ಸಾಲದ ಉಪಸಮಿತಿ ಸಭೆಗಳು – 25<br>ಲೆಕ್ಕಪರಿಶೋಧನಾ ಉಪಸಮಿತಿ ಸಭೆಗಳು – 19<br>ಹೂಡಿಕೆ ಉಪಸಮಿತಿ ಸಭೆಗಳು – 12<br>ವಸೂಲಾತಿ ಉಪಸಮಿತಿ ಸಭೆಗಳು – 22<br><br>**c)ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯ ನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯ ಬಗ್ಗೆ ಸಮಗ್ರ ವಿವರಣೆ.**<br><br>ಸಾಮಾನ್ಯವಾಗಿ ಬ್ಯಾಂಕಿನ ಆಡಳಿತ ಮಂಡಳಿಯವರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ಉಪನಿಯಮ ಹಾಗೂ ಕಾನೂನು ಅನ್ವಯ ಕಾರ್ಯನಿರ್ವಹಿಸಿದ್ದು, ಆಡಳಿತ ಮಂಡಳಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯು ಒಟ್ಟಾರೆಯಾಗಿ ತೃಪ್ತಿದಾಯಕವಾಗಿದ್ದರೂ, ನಾನ್–ಎಸ್ ಎಲ್ ಆರ್ ಹೂಡಿಕೆಯಲ್ಲಿ ಮತ್ತು ಸಾಲಗಳ ಮೌಲ್ಯಾಂಕನದಲ್ಲಿ ಜಾಗೂರುಕತೆಯ ಅವಶ್ಯಕತೆ ಕಂಡುಬಂದಿರುತ್ತದೆ. |

| | | |
|---|---|---|
| 46 | **ತನಿಖೆ / ಹಿಂದಿನ ತನಿಖೆಯ ದಿನಾಂಕ**<br>**a)** ಸಹಕಾರ ಇಲಾಖೆಯಿಂದ<br>b)ಆರ್.ಬಿ.ಐ ಯಿಂದ | **a) ಸಹಕಾರ ಇಲಾಖೆಯಿಂದ**<br>ವರದಿ ಸಾಲಿನಲ್ಲಿ ತನಿಖೆ ಆಗಿರುವುದಿಲ್ಲ.<br>**b) ಆರ್.ಬಿ.ಐ.ನಿಂದ :**<br>ವರದಿ ಸಾಲಿನಲ್ಲಿ ತನಿಖೆ ಆಗಿರುವುದಿಲ್ಲ. |

47 **<u>ಶಾಖೆಗಳ ಬಗ್ಗೆ ವಿವರಣೆ:</u>**

ಎ) ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ :

| ಕ್ರ.ಸಂ. | ಶಾಖೆ | ನಿವ್ವಳ ಲಾಭ/(ಹಾನಿ) (ರೂ.ಲಕ್ಷಗಳಲ್ಲಿ) | ಠೇವಣಿಗಳು (ರೂ.ಲಕ್ಷಗಳಲ್ಲಿ) | ಸಾಲಗಳು (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಜಯನಗರ | (12.30) | 19039.77 | 9864.86 |
| 2 | ಮತ್ತೀಕೆರೆ | 172.55 | 8951.57 | 8574.19 |
| 3 | ವಿಜಯನಗರ | (166.63) | 4454.97 | 3218.49 |
| 4 | ಇಂದಿರಾನಗರ | 17.49 | 3327.43 | 2021.42 |
| 5 | ಕೆಂಗೇರಿ | 27.70 | 1852.17 | 1740.19 |
| 6 | ಯಲಹಂಕ | 40.08 | 5027.64 | 3513.67 |
| 7 | ಬಿ.ಇ.ಎಸ್.ಕಾಲೇಜು | (29.14) | 2433.48 | 973.11 |
| 8 | ಬೇಗೂರು | (17.30) | 489.02 | 681.18 |
| | ಒಟ್ಟು | 32.45 | 45576.05 | 30587.11 |

| | | |
|---|---|---|
| | ಬಿ) ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ?<br>ಶಾಖೆಗಳ ನಿಯತಕಾಲಿಕೆಗಳನ್ನು ಕಾಲಕಾಲಕ್ಕೆ ಸರಿಯಾಗಿ ಸಲ್ಲಿಸಲಾಗಿರುವುದನ್ನು ಗಮನಿಸಲಾಗಿದೆ.<br>ಸಿ) ಹೊಂದಾಣಿಕೆ ಲೆಕ್ಕಗಳ ಬಗ್ಗೆ –"ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ"– ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ :<br>ಶಾಖೆಗಳ ಹೊಂದಾಣಿಕೆ ಲೆಕ್ಕಗಳನ್ನು ಮತ್ತು ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕಗಳೊಂದಿಗೆ ಪ್ರಧಾನ ಕಛೇರಿಯಲ್ಲಿ ಕಾಲಕಾಲಕ್ಕೆ ಸಮನ್ವಯ ಮಾಡಿಕೊಳ್ಳಲಾಗುತ್ತಿರುತ್ತದೆ. ವರದಿ ವರ್ಷಾಂತ್ಯಕ್ಕೆ ನಿವ್ವಳ ವ್ಯತ್ಯಾಸವಿರುವುದಿಲ್ಲ. | |
| | **ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computarisation)** | |
| | I) ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. | 1. ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿರುತ್ತದೆ. |
| | ii) ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ | 2. ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳು ಯಾವುದೂ ಕಂಡುಬಂದಿರುವುದಿಲ್ಲ |
| | iii) ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ | 3. ಎಲ್ಲಾ 8 ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಲಾಗಿರುತ್ತದೆ. |
| | iv) ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ (Backups / Offsite storage) | 4. ಎಕ್ಸ್‌ಟರ್ನಲ್ ಹಾರ್ಡ್ ಡಿಸ್ಕ್‌ನಲ್ಲಿ ಬ್ಯಾಕಪ್ ಮಾಹಿತಿಗಳನ್ನು ಸಂರಕ್ಷಿಸುವ ಪದ್ಧತಿ ಜಾರಿ0ಯುಲ್ಲಿರುತ್ತದೆ. |
| | v) E.D.P. ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ. | 5.ಆರ್.ಬಿ.ಐ ನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ ಶಾಸನ ಬದ್ದ ಲೆಕ್ಕಪರಿಶೋಧನೆಗೆ ಮುಂಚೆಯೇ ಮಾಹಿತಿ ತಂತ್ರಜ್ಞಾನ (ಇನ್‌ಫಾರ್ಮೇಷನ್ ಸಿಸ್ಟಮ್) ಆಡಿಟ್‌ನ್ನು ಮಾಡಿಸಬೇಕಾಗಿದ್ದು, ವರದಿ ಸಾಲಿಗೆ ಸಂಬಂಧಿಸಿದಂತೆ ಇನ್‌ಫಾರ್ಮೇಷನ್ ಸಿಸ್ಟಮ್ ಆಡಿಟ್‌ನ್ನು ಮಾಡಿಸಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ. |

| | | |
|---|---|---|
| | | **ಅನುವರ್ತನೆ : ಕೋವಿಡ್-19 ಪ್ರಯುಕ್ತ 2019-20ನೇ ಸಾಲಿನ ಐಎಸ್ ಆಡಿಟ್ ಮಾಡಿಸಲಾಗುವುದು. ಐಎಸ್ ಆಡಿಟ್ ಮಾಡಿಸಲು ಕ್ರಮಕೈಗೊಳ್ಳಲಾಗುವುದು** |
| | vi) ಇ-ಬ್ಯಾಂಕಿಂಗ್ : ಜಾರಿಯಲ್ಲಿರುವ ಮಾರ್ಗಸೂಚಿಗಳು, ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್‌ಡೇಟ್ ಮಾಡುವ ಬಗ್ಗೆ, ವಿಮರ್ಶೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ. | 6 ಇ-ಬ್ಯಾಂಕಿಂಗ್ ಸೌಲಭ್ಯ ವಿರುವುದಿಲ್ಲ |
| | vii) ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು, ಯಾವುದಾದರೂ ಇದ್ದಲ್ಲಿ. | ಬ್ಯಾಂಕಿನ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲು ಗಣಕಯಂತ್ರದ ತಂತ್ರಾಂಶವನ್ನು ಬಳಸಿಕೊಳ್ಳಲಾಗುತ್ತಿದ್ದರೂ, ನಮ್ಮ ಗಮನಕ್ಕೆ ಬಂದ ಪ್ರಕಾರ ಓವರ್ ಡ್ರಾಫ್ಟ್ ಖಾತೆಗಳಿಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ "ಔಟ್ ಆಫ್ ಆರ್ಡರ್" ಆಧಾರದ ಮೇಲೆ ಅನುತ್ಪಾದಕ ಆಸ್ತಿಗಳನ್ನು ಗುರುತಿಸಲಾಗುತ್ತಿಲ್ಲ. ಇದನ್ನು ಸರಿಪಡಿಸಿಕೊಳ್ಳಲು ಕ್ರಮ ಅಗತ್ಯ.<br>ಅನುವರ್ತನೆ : ಸರಿಪಡಿಸಲಾಗುವುದು. |
| 49 | **ಲಾಭ-ನಷ್ಟ ಮತ್ತು ಆಸ್ತಿ-ಜವಾಬ್ದಾರಿ ಬಗ್ಗೆ ವಿಶ್ಲೇಷಣೆ**<br>ಲಾಭದಾಯಕತ್ವ:<br>**a. ಹಿಂದಿನ ಸಾಲಿಗಿಂತ ವರದಿ ಸಾಲಿನಲ್ಲಿ ಜಮಾ-ಖರ್ಚಿನ ಪ್ರಮುಖ ಅಂಶಗಳಲ್ಲಿ ಆಗಿರತಕ್ಕ ಏರಿಳಿತಗಳ ಬಗ್ಗೆ ಮುಖ್ಯ ಅನುಪಾತಗಳೊಂದಿಗೆ ವಿಶ್ಲೇಷಣೆ.** | |

**ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಕ್ಕು ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆ ವಿಮರ್ಶೆ**

| ಕ್ರ. ಸಂ | | ಪ್ರಸಕ್ತ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಹಿಂದಿನ ಸಾಲಿನ ಮೊತ್ತ (ರೂ.ಲಕ್ಷಗಳಲ್ಲಿ) | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | ಹೆಚ್ಚು | ಕಡಿಮೆ |
|---|---|---|---|---|---|---|---|---|
| | ಒಟ್ಟು ಮಾರಾಟ | | – | | | – | – | – |
| 1 | ವ್ಯಾಪಾರಿ ಲಾಭ | | – | ಒಟ್ಟು ಮಾರಾಟ | | – | – | – |
| | ವ್ಯಾಪಾರಿ ನಷ್ಟ | | – | | | – | – | – |

| | | | | | | | | |
|---|---|---|---|---|---|---|---|---|
| 2 | ಒಟ್ಟು ಸರಾಸರಿ ಗುಂತಾವಣಿಗಳು | 16066.85 | 14910.61 | – | | – | – | – |
| | ಗುಂತಾವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿ | 955.24 | 1191.93 | ಒಟ್ಟು ಗುಂತಾ ವಣಿಗಳು | 5.95 | 7.99 | – | 2.04 |
| 3 | ಒಟ್ಟ ನೀಡಿದ ಸರಾಸರಿ ಸಾಲ | 31183.91 | 30959.00 | – | | - | - | - |
| | ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ | 3685.60 | 3388.39 | ಒಟ್ಟ ನೀಡಿದ ಸಾಲ | 11.82 | 10.94 | 0.88 | - |
| 4 | ದುಡಿಯುವ ಬಂಡವಾಳ | 50496.72 | 48452.80 | – | – | – | – | – |
| | ಇತರೆ ಆದಾಯ | 103.96 | 138.66 | ದುಡಿಯುವ ಬಂಡವಾಳ | 0.21 | 0.29 | – | 0.08 |
| | ಒಟ್ಟು ಪಡೆದ ಸಾಲ | – | – | – | – | – | – | – |
| 5 | ಸಾಲಗಳ ಮೇಲೆ ಪಾವತಿಸಿದ ಬಡ್ಡಿ | – | – | ಒಟ್ಟು ಪಡೆದ ಸಾಲ | – | – | – | – |
| 6 | ಒಟ್ಟು ಸರಾಸರಿ ಠೇವಣಿ | 44789.02 | 43659.49 | – | – | – | – | – |
| | ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ | 3083.69 | 2976.82 | ಒಟ್ಟು ಠೇವಣಿ | 6.88 | 6.82 | 0.06 | – |
| | ದುಡಿಯುವ ಬಂಡವಾಳ | 50496.72 | 48452.80 | – | – | – | – | – |
| 7 | ಸಿಬ್ಬಂದಿ ವೆಚ್ಚ | 933.39 | 877.75 | | 1.85 | 1.81 | 0.04 | – |
| 8 | ಆಡಳಿತ ವೆಚ್ಚ | 365.04 | 208.96 | | 0.72 | 0.43 | 0.29 | – |
| 9 | ಇತರೆ ವೆಚ್ಚ | 4.34 | 16.04 | | 0.01 | 0.03 | – | 0.02 |
| 10 | ಸವಕಳಿಗಳು | 27.30 | 33.64 | | 0.05 | 0.07 | – | 0.02 |
| 11 | ಅವಕಾಶಗಳು | 298.59 | 77.64 | | 0.59 | 0.16 | 0.43 | - |
| 12 | ನಿವ್ವಳ ಲಾಭ | 32.45 | 330.82 | | 0.06 | 0.68 | – | 0.62 |
| | ನಿವ್ವಳ ನಷ್ಟ | – | – | | – | – | – | – |

ವರದಿ ಸಾಲಿನಲ್ಲಿ ಪ್ರಮುಖವಾಗಿ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅನುತ್ಪಾದಕ ಆಸ್ತಿಗಳಿಗೆ ರೂ.205.23 ಲಕ್ಷಗಳಷ್ಟು ಅವಕಾಶ ಕಲ್ಪಿಸಿರುವುದರಿಂದ ಮತ್ತು ಕೋವಿಡ್-19 ರೆಗ್ಯೂಲೇಟರಿ ಪ್ಯಾಕೇಜ್ ಅನ್ವಯ ಸಾಲಗಾರರಿಗೆ ಮಾರ್ಚ್ 2020 ಕ್ಕೆ ಮೊರೋಟೋರಿಯಮ್‌ಗಳ ಸೌಲಭ್ಯವನ್ನು ವಿಸ್ತರಿಸಲಾಗಿದ್ದು, ಈ ಪ್ಯಾಕೇಜ್ ಅನ್ವಯ ಲಾಭ ಪಡೆದ ಖಾತೆಗಳಿಗೆ ಸಂಬಂಧಿಸಿದಂತೆ ರೂ.30.29 ಲಕ್ಷಗಳಷ್ಟು ಅವಕಾಶ ಕಲ್ಪಿಸಿರುವುದರಿಂದ ಮತ್ತು ಕಾರ್ವೆ ಸ್ಟಾಕ್ ಹೋಲ್ಡಿಂಗ್ ಲಿಮಿಟೆಡ್ ಕಮರ್ಷಿಯಲ್ ಪೇಪರ್ಸ್‌ಗಳ ರೂ. 2788.48 ಲಕ್ಷಗಳ ಮೇಲೆ ನವಂಬರ್ 2019 ರಿಂದ ಬಡ್ಡಿ ಬರದೇ ಇರುವುದರಿಂದ ವರದಿ ಸಾಲಿನ ಲಾಭದಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿರುತ್ತದೆ.

ಅದಲ್ಲದೇ ವರದಿ ಸಾಲಿನ ಅಂತ್ಯಕ್ಕೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಿಂದ, ಹೂಡಿಕೆ ಸವಕಳಿ ಮೀಸಲು ನಿಧಿಗೆ ರೂ. 1,57,77,623/- ಗಳನ್ನು ವರ್ಗಾಯಿಸಿ ಅಗತ್ಯವಿದ್ದ ಹೂಡಿಕೆಗಳಿಗೆ ಸಂಬಂಧಿಸಿದಂತೆ ಅವಕಾಶವನ್ನು ಕಲ್ಪಿಸಲಾಗಿರುವುದರಿಂದ ವರ್ಷಾಂತ್ಯಕ್ಕೆ ನಿವ್ವಳ ಲಾಭ ತೋರಿಸಲು ಸಾಧ್ಯವಾಗಿರುತ್ತದೆ.

ವರದಿ ಸಾಲಿನ ಪರೀಷ್ಕೃತ ಬಡ್ಡಿಯ ದರಗಳಿಂದಾಗಿ ಬಡ್ಡಿಯ ಆದಾಯ ಮತ್ತು ವೆಚ್ಚದಲ್ಲಿ ವ್ಯತ್ಯಾಸ ಉಂಟಾಗಿರುತ್ತದೆ. ಹಾಗೆಯೇ ಗುಂತಾವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿಯ ಪ್ರಮಾಣದಲ್ಲಿ ಇಳಿಕೆಯಾಗಿರುತ್ತದೆ. ಈ ಮೇಲಿನ ಪ್ರಮುಖ ಅಂಶಗಳು ಹಿಂದಿನ ಸಾಲಿನ ಮತ್ತು ವರದಿ ಸಾಲಿನ ಲಾಭ-ನಷ್ಟ ಗಳ ವ್ಯತ್ಯಾಸಕ್ಕೆ ಕಾರಣಗಳಾಗಿರುತ್ತವೆ.

b. ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯನೀತಿಯಲ್ಲಿನ ಬದಲಾವಣೆ ಯಿಂದಾಗಿ ವರದಿ ಸಾಲಿನ ಲಾಭ-ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ

ಕಳೆದ ಸಾಲಿಗೆ ಹೋಲಿಸಿದಲ್ಲಿ ಬ್ಯಾಂಕಿನ ಲೆಕ್ಕಗಳ ನಿರ್ವಹಣೆಯಲ್ಲಿ/ ಕಾರ್ಯನೀತಿಯಲ್ಲಿ ಬದಲಾವಣೆ ಆಗಿರುವುದಿಲ್ಲ.

(B) ಆಸ್ತಿ- ಜವಾಬ್ದಾರಿ ತ:ಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ.

ವರದಿ ಸಾಲಿಗೆ ಸಂಬಂಧಿಸಿದಂತೆ ಈ ಕೆಳಗಿನ ಅನುಪಾತಗಳನ್ನು ಗಮನಿಸಲಾಗಿದೆ.

| | |
|---|---|
| (1) ಠೇವಣಿಗಳ ಮೇಲಿನ ಸರಾಸರಿ ವೆಚ್ಚ | ಶೇ. 6.88 |
| (2) ಒಟ್ಟು ನಿಧಿಗಳ (ಪಡೆದ ಠೇವಣಿ + ಪಡೆದ ಸಾಲ) ಮೇಲಿನ ಸರಾಸರಿ ವೆಚ್ಚ | ಶೇ. 6.88 |
| (3) ಸಾಲಗಳ ಮೇಲಿನ ಸರಾಸರಿ ಆದಾಯ | ಶೇ.11.82 |
| (4) ಹೂಡಿಕೆಗಳ ಮೇಲಿನ ಸರಾಸರಿ ಆದಾಯ | ಶೇ.5.95 |
| (5) ಒಟ್ಟು ನಿಧಿಗಳ (ಕೊಟ್ಟ ಸಾಲ + ಹೂಡಿಕೆ) ಮೇಲಿನ ಸರಾಸರಿ ಆದಾಯ | ಶೇ. 9.82 |
| (6) ಮಾರ್ಜಿನ್ (5 - 2) | ಶೇ.2.94 |

| ವಿವರ | 31.03.2019ಕ್ಕೆ (ರೂ. ಲಕ್ಷಗಳಲ್ಲಿ) | 31.03.2020ಕ್ಕೆ (ರೂ. ಲಕ್ಷಗಳಲ್ಲಿ) | ಶೇಕಡಾವಾರು ಹೆಚ್ಚಳ(ಇಳಿಕೆ) |
|---|---|---|---|
| ಸಾಲಗಳು | 30959.00 | 30587.11 | (1.20%) |
| ಠೇವಣಿಗಳು | 43659.49 | 45576.05 | 4.39% |
| ಸಾಲ ಮತ್ತು ಠೇವಣಿಗಳ ಅನುಪಾತ | 70.91 | 67.11 | (3.80%) |

ಸಾಲ ಮತ್ತು ಠೇವಣಿಗಳ ಅನುಪಾತವು ಕಳೆದ ವರ್ಷಕ್ಕೆ ಹೋಲಿಸಿದಾಗ ಇಳಿಕೆಯಾಗಿದ್ದು, ನಮ್ಮ ಅಭಿಪ್ರಾಯದಲ್ಲಿ ಸದಸ್ಯರನ್ನು ಸಾಲದ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಸಾಲ ಮತ್ತು ಠೇವಣಿಗಳ ಅನುಪಾತವನ್ನು ಇನ್ನೂ ಹೆಚ್ಚಿಸಿಕೊಳ್ಳಲು ಕ್ರಮವಿಡುವುದು ಅಗತ್ಯ.

| | | |
|---|---|---|
| 50 | ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ (Systems & Control)<br>i) ಸಮವರ್ತಿ/ಆಂತರಿಕ ಲೆಕ್ಕಪರಿಶೋಧನೆ/ ಗಣಕಯಂತ್ರ ಮತ್ತು Software ಗಳ E.D.P. ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕ್ ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ. | ಬ್ಯಾಂಕಿನ ಹಾಲಿ ಅಧಿಕಾರಿಯನ್ನು ಆಂತರಿಕ ಲೆಕ್ಕ ಪರಿಶೋಧಕರನ್ನಾಗಿ ನೇಮಿಸುವುದರ ಮುಖಾಂತರ ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮ ವಿಡಲಾಗಿದೆ. ಆಂತರಿಕ ಲೆಕ್ಕ ಪರಿಶೋಧನಾ ವರದಿಗಳನ್ನು ಕಾಲ ಕಾಲಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ. ಆರ್.ಬಿ.ಐ ನ ಮಾರ್ಗಸೂಚಿಗಳ ಪ್ರಕಾರ ವಾರ್ಷಿಕ ಆಧಾರದ ಮೇಲೆ ಶಾಸನ ಬದ್ಧ ಲೆಕ್ಕಪರಿಶೋಧನೆಗೆ ಮುಂಚೆಯೇ ಮಾಹಿತಿ ತಂತ್ರ ಜ್ಞಾನ (ಇನ್‌ಫಾರ್ಮೇಷನ್ ಸಿಸ್ಟಮ್) ಆಡಿಟ್‌ನ್ನು ಮಾಡಿಸಬೇಕಾಗಿದ್ದು, ವರದಿ ಸಾಲಿಗೆ ಸಂಬಂಧಿಸಿದಂತೆ ಇನ್‌ಫಾರ್ಮೇ ಷನ್ ಸಿಸ್ಟಮ್ ಆಡಿಟ್‌ನ್ನು ಮಾಡಿಸಿರುವುದಿಲ್ಲ. ಈ ಬಗ್ಗೆ ಕ್ರಮ ಅಗತ್ಯ. |

| | | |
|---|---|---|
| | | **ಅನುವರ್ತನೆ : ಕೋವಿಡ್-19 ಪ್ರಯುಕ್ತ 2019-20ನೇ ಸಾಲಿನ ಐ.ಎಸ್. ಆಡಿಟ್ ಮಾಡಿಸಲಾಗಿರುವುದಿಲ್ಲ. ಕ್ರಮಕೈಗೊಳ್ಳಲಾಗುವುದು.** |
| | ii) ಎಂ.ಐ.ಎಸ್. ಅಸ್ಥಿತ್ವದಲ್ಲಿರುವ ಬಗ್ಗೆ. ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ. | ಎಲ್ಲಾ ಶಾಖೆಗಳಲ್ಲಿ ಕೋರ್ ಬ್ಯಾಂಕಿಂಗ್ ಸೇವೆಯನ್ನು ಅಳವಡಿಸಿಕೊಳ್ಳಲಾಗಿದ್ದು, ಕ್ರೋಢೀಕೃತ ಮಾಹಿತಿಯು ನಿಖರವಾಗಿ ದೊರೆಯುತ್ತದೆ. |
| | iii) ಆರ್.ಬಿ.ಐ. ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು. | ವಿವಿಧ ಸಮಿತಿಗಳು ಮತ್ತು ಆಡಳಿತ ಮಂಡಳಿಯು ಬ್ಯಾಂಕಿನ ಒಟ್ಟಾರೆ ವ್ಯವಹಾರಗಳ ಬಗ್ಗೆ ಚರ್ಚಿಸುವ ನಿಯಮ ಜಾರಿಯಲ್ಲಿರುತ್ತದೆ. |
| 51 | **ಇತರೆ ವಿಷಯಗಳು:**<br><br>i) ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ. | 1.ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ. |
| | ii) Under writing ಹಾಗೂ ನಿಷ್ಪನ್ನ (Derivatives) ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮಗಳು. | 2. ವರದಿ ಸಾಲಿನಲ್ಲಿ ಇಂತಹ ವ್ಯವಹಾರಗಳು/ ಪ್ರಕರಣಗಳು ಇರುವುದಿಲ್ಲ. |
| | iii) ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | 3. ಆದಾಯ ತೆರಿಗೆ, ಗ್ರಾಚ್ಯುಟಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸರಿಯಾದ ಪ್ರಮಾಣದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಬಡ್ಡಿ ತೆರಿಗೆ ಮತ್ತು ಂಚಣಿ ಈ ಬ್ಯಾಂಕಿಗೆ ಅನ್ವಯಿಸುವುದಿಲ್ಲ. |

| | | |
|---|---|---|
| | iv) ಬ್ಯಾಂಕಿನ ಆಸ್ತಿ–ಜವಾಬ್ದಾರಿ ತ:ಖ್ತೆ ಖಾತೆಗಳನ್ನು ಹೊರತುಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. | 4. ಇತರೆ ಕ್ಲೇಮ್‌ಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ. |
| | v) ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. | 5. ಕ್ರೋಢೀಕರಿಸುವಾಗ ಯಾವುದೇ ಗಮನಾರ್ಹ ಅಂಶಗಳು ಕಂಡು ಬಂದಿರುವುದಿಲ್ಲ. |
| | vi) ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ. | 6. ಎಲ್ಲಾ ಬ್ಯಾಂಕುಗಳಿಂದ ದೃಢೀಕರಣ ಪತ್ರಗಳನ್ನು ಪಡೆಯಲಾಗಿರುತ್ತದೆ. ಬ್ಯಾಂಕಿನ ಶಿಲ್ಕಿನಲ್ಲಿ ವ್ಯತ್ಯಾಸ ಇರುವ ಮೊತ್ತಕ್ಕೆ ಸಮನ್ವಯ ಪಟ್ಟಿ ತಯಾರಿಸಿ ತಾಳೆ ಮಾಡಲಾಗಿರುತ್ತದೆ. ಈ ಸಮನ್ವಯ ಪಟ್ಟಿಗಳಲ್ಲಿ ಯಾವುದೇ ಅಸಮಾನ್ಯ ನಮೂದುಗಳು ಕಂಡು ಬಂದಿರುವುದಿಲ್ಲ. |
| | vii) NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವಾರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ದತಿ ಬಗ್ಗೆ | 7. ಅನ್ವಯಿಸುವುದಿಲ್ಲ. |
| | viii) CRARನ ಬಗ್ಗೆ ವಿಶ್ಲೇಷಣೆ | 8.RBI ನಿರ್ದೇಶನಗಳ ಸಂಖ್ಯೆ POT.PCB.Cir/4509.116.00.01, dt: 24.04.2001ರ ರೀತಿ (ಹಾಗೂ RBI ನಿರ್ದೇಶನಗಳ ಸಂಖ್ಯೆ UBD. PCB.CIR. NO.26 dt: 01.11.2004 ಅನ್ವಯವಾಗುವಂತೆ ಪರಿಷ್ಕರಿಸಿ ಕೊಂಡ) ಸಂಸ್ಥೆಯ ಸ್ವಂತ ಬಂಡವಾಳ/ ಆಸ್ತಿಯು ಅಪಾಯದ ಪ್ರಭಾವ ವಿರುವ ಆಸ್ತಿಗಳಿಗೆ ಹೋಲಿಸಿದಾಗ ಶೇ.9ರ ಕನಿಷ್ಟ |

| | | |
|---|---|---|
| | | ವುಟ್ಟದ ಮೇಲಿರಬೇಕಿದ್ದು, ರಿಸರ್ವ್ ಬ್ಯಾಂಕಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್ ಪ್ರಕಾರ ದಿ. 31.03.2020ಕ್ಕೆ ಅದು ಶೇ.9.11ರಷ್ಟು ಇರುತ್ತದೆ. |
| | (i) ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ | ಅನ್ವಯಿಸುವುದಿಲ್ಲ |
| | (ii) ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ | ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಸರಾಸರಿ ವೆಚ್ಚವು (Cost of Deposits) ಶೇ. 6.88 ರಷ್ಟಿದ್ದು, ಸಾಲಗಳ ಮೇಲಿನ ಸರಾಸರಿ ಆದಾಯವು (Yield on Advances) ಶೇ 11.82 ರಷ್ಟಿರುತ್ತದೆ. ನಮ್ಮ ಅಭಿಪ್ರಾಯದಲ್ಲಿ ಈ ಅನುಪಾತವು ಸಮರ್ಪಕ ವಾಗಿರುತ್ತದೆ. |
| | (ix) ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಛಿಸುವ ಇತರೆ ವಿಷಯಗಳ ಬಗ್ಗೆ. | 9.ಸಲಹೆ–ಸೂಚನೆ ವುತ್ತು ಕ್ರಮವಿಡಬೇಕಾದ ಕಂಡಿಕೆಗಳ ವಿಭಾಗಗಳನ್ನು ಗಮನಿಸುವುದು ಮತ್ತು ಅನುಪಾಲನೆ ಮಾಡುವುದು ಅಗತ್ಯ. |
| 52 | **ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ:** | |
| | i) ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ. | ಅಧೀನ ಸಂಸ್ಥೆಗಳು ಇರುವುದಿಲ್ಲ. |
| | ii) ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ | ಅನ್ವಯಿಸುವುದಿಲ್ಲ. |

| | | |
|---|---|---|
| 53 | D.E.A. Fund Scheme 2014 ಜಾರಿಯಲ್ಲಿರುವ ಬಗ್ಗೆ<br><br>i) ಬ್ಯಾಂಕ್ ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದ ಠೇವಣಿಗಳನ್ನು D.E.A. Fund ಗೆ ವರ್ಗಾಯಿಸಿರುವ ಬಗ್ಗೆ. | 10 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ವಾರಸುದಾರರಿಲ್ಲದ ಠೇವಣಿಗಳನ್ನು ಮತ್ತು ಇತರೆ ಮೊತ್ತಗಳನ್ನು ಬ್ಯಾಂಕಿನ ಸಾಫ್ಟ್‌ವೇರ್ ಮುಖಾಂತರ ಗುರುತಿಸಿ ಅವುಗಳನ್ನು D.E.A. Fundಗೆ ವರ್ಗಾಯಿಸುತ್ತಿರುವುದಾಗಿ ನಮಗೆ ತಿಳಿಸಿರುತ್ತಾರೆ. ನಮ್ಮ ಅಭಿಪ್ರಾಯದಲ್ಲಿ ಬ್ಯಾಂಕಿನ ಸಾಫ್ಟ್‌ವೇರ್ ಇಂತಹ ಮೊತ್ತಗಳನ್ನು ಸರಿಯಾಗಿ ಗುರುತಿಸುತ್ತಿರುವ ಬಗ್ಗೆ ಐ.ಎಸ್ / ಇ.ಡಿ. ಆಡಿಟ್ ವರದಿಯಲ್ಲಿ ದೃಢೀಕರಿಸುವಂತೆ ಕ್ರಮವಿಡುವುದು ಅಗತ್ಯ.<br><br>**ಅನುವರ್ತನೆ : ಕ್ರಮವಿಡಲಾಗುವುದು.** |
| | ii) ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ. | 2. ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಲಾಗಿರುತ್ತದೆ. |
| | iii) ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ. | 3. ವರದಿ ಸಾಲಿನಲ್ಲಿ ಸಮನ್ವಯ ಪ್ರಮಾಣ ಪತ್ರ ನಮೂನೆ – III ನ್ನು ಸಲ್ಲಿಸಲಾಗಿರುತ್ತದೆ. |
| | iv) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್ ಹೊಂದಿರುವ ವ್ಯವಸ್ಥೆ | 4. ಬ್ಯಾಂಕಿನಲ್ಲಿ ದೂರು ಪುಸ್ತಕವನ್ನು ನಿರ್ವಹಿಸುತ್ತಿದ್ದು, ದೂರುಗಳನೇದರೂ ಬಂದರೆ ಅವುಗಳನ್ನು ಆಡಳಿತ ಮಂಡಳಿಯವರ ಮತ್ತು ಕಾರ್ಯ ನಿರ್ವಹಣಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಬ್ಯಾಂಕಿನವರು ತಿಳಿಸಿರುತ್ತಾರೆ. |

| | | |
|---|---|---|
| | v) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ | 5. ಸೂಕ್ತ ದಾಖಾಲಾತಿಗಳನ್ನು ಪಡೆದು ಮೊತ್ತವನ್ನು ಹಿಂದಿ ರುಗಿಸುವ ಪದ್ಧತಿಯು ಜಾರಿ ಯಲ್ಲಿರುತ್ತದೆ. |
| | vi) ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ. | 6. ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧಕರು ಈ ದಾಖಲೆ ಗಳನ್ನು ಪರಿಶೋಧಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. |
| 54 | **ಆಡಳಿತ ಮಂಡಳಿ:**<br>i) ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ, ಸಮಿತಿಗಳು, ಸಮಿತಿಗಳ ರಚನೆ, ಕಾರ್ಪೊರೇಟ್ ಗೌವರ್ನೆನ್ಸ್, ಆಡಳಿತ ಮಂಡಳಿಯಲ್ಲಿನ ವೃತ್ತಿ ಪರತೆ, ನಿಯತ ಕಾಲಿಕವಾಗಿ ಸಭೆ ನಡೆಸುವ ಬಗ್ಗೆ, ಸಭೆಯಲ್ಲಿ ಚರ್ಚೆಯಾದ ವಿಷಯಗಳು, ಗೈರು ಹಾಜರಾದ ನಿರ್ದೇಶಕರು, ನಿರ್ದೇಶಕರಿಂದ ಬೈಲಾ ಉಲ್ಲಂಘನೆ, ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ, ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು.)<br>ಬ್ಯಾಂಕಿನ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ 18 ಆಗಿರುತ್ತದೆ. ಒಂದು ಸ್ಥಾನವನ್ನು ಪರಿಶಿಷ್ಠ ಜಾತಿ, ಒಂದು ಸ್ಥಾನವನ್ನು ಪರಿಶಿಷ್ಟ ಪಂಗಡ, ಎರಡು ಸ್ಥಾನಗಳನ್ನು ಮಹಿಳಾ ವರ್ಗ, ಒಂದು ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಎ", ಒಂದು ಸ್ಥಾನವನ್ನು ಹಿಂದುಳಿದ ವರ್ಗ ಪ್ರವರ್ಗ "ಬಿ", ಈ ರೀತಿಯಾಗಿ ವಿವಿಧ ವರ್ಗಗಳಿಗೆ ಸೇರಿದ ಸದಸ್ಯರಿಗೆ ಮೀಸಲಿರಿಸಬೇಕಾಗಿದ್ದು, ಸರಿಯಾದ ಮೀಸಲಾತಿ ಸ್ಥಾನಗಳನ್ನೊಳಗೊಂಡಂತೆ ಒಟ್ಟು 18 ಸದಸ್ಯರು ಆಡಳಿತ ಮಂಡಳಿಯಲ್ಲಿ ಇರುತ್ತಾರೆ.<br>ಆಡಳಿತ ಮಂಡಳಿಯ ಸಭೆಗಳಲ್ಲಿ ಸಾಮಾನ್ಯವಾಗಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಗಿರುವುದನ್ನು ಗಮನಿಸಲಾಗಿದೆ.<br>1) ಲಾಭ-ನಷ್ಟದ ಬಗ್ಗೆ<br>2) ಬಡ್ಡಿ ದರ ನಿಗದಿಪಡಿಸಿದರ ಬಗ್ಗೆ<br>3) ಹೂಡಿಕೆ ವ್ಯವಹಾರದ ಬಗ್ಗೆ<br>4) ವಂಚನೆ ಪ್ರಕರಣಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ<br>5) ಅನುತ್ಪಾದಕ ಸಾಲಗಳ ಶೇಕಾಡವಾರು ಪ್ರಮಾಣ ಕಡಿಮೆ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ | |

6) ಸುಸ್ತಿ ಸಾಲಗಾರರ ಮೇಲೆ ಕ್ರಮ ಜರುಗಿಸುವ ಬಗ್ಗೆಮುಂತಾದವುಗಳು.

ವರದಿ ಸಾಲಿನಲ್ಲಿ ನಡೆದ ಮಂಡಳಿಯ/ಸಮಿತಿಗಳ ವಿವರ ಈ ಕೆಳಗಿನಂತಿರುತ್ತದೆ:

ಆಡಳಿತ ಮಂಡಳಿಯ ಸಭೆಗಳು–17

ರಿಸೋರ್ಸಸ್ ಮತ್ತು ಮೆಂಬರ್‌ಶಿಪ್ ಸಮಿತಿ ಸಭೆಗಳು: 9

ಸಾಲದ ಉಪಸಮಿತಿ ಸಭೆಗಳು – 25

ಲೆಕ್ಕಪರಿಶೋಧನಾ ಉಪಸಮಿತಿ ಸಭೆಗಳು – 19

ಹೂಡಿಕೆ ಉಪಸಮಿತಿ ಸಭೆಗಳು – 12

ವಸೂಲಾತಿ ಉಪಸಮಿತಿ ಸಭೆಗಳು – 22

ಆಡಳಿತ ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳ ನಡಾವಳಿಗಳನ್ನು ಪ್ರತ್ಯೇಕವಾದ ರಜಿಸ್ಟ ರ್‌ಗಳಲ್ಲಿದಾಖಲಿಸಲಾಗಿರುತ್ತದೆ.

ಸಾಮಾನ್ಯವಾಗಿ ಬ್ಯಾಂಕಿನ ಆಡಳಿತ ಮಂಡಳಿಯವರು ಉಪನಿಯಮ ಹಾಗೂ ಕಾನೂನು ಅನ್ವಯ ಕಾರ್ಯನಿರ್ವಹಿಸಿದ್ದು, ಅವರ ಕಾರ್ಯಕ್ಷಮತೆಯು ಒಟ್ಟಾರೆಯಾಗಿ ತೃ_ತಿಕರವಾಗಿದ್ದರೂ, ನಾನ್–ಎಸ್ ಎಲ್ ಆರ್ ಹೂಡಿಕೆಯಲ್ಲಿ ಮತ್ತು ಸಾಲಗಳ ಮೌಲ್ಯಾಂಕನದಲ್ಲಿ ಜಾಗೂರುಕತೆಯ ಅವಶ್ಯಕತೆ ಕಂಡುಬಂದಿರುತ್ತದೆ.

**ii) ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ನೇಮಕಾತಿ, ವಿದ್ಯಾರ್ಹತೆ ಮತ್ತು ಬ್ಯಾಂಕ್ ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ.**

ಬ್ಯಾಂಕಿನ ಉಪನಿಯಮಗಳ ಪ್ರಕಾರ ಎಮ್.ಕಾಂ. ಸ್ನಾತಕೋತ್ತರ ಪದವಿ ವಿದ್ಯಾರ್ಹತೆ0ಯನ್ನು ಹೊಂದಿದವರನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನಾಗಿ ನೇಮಿಸಲಾಗಿರುತ್ತದೆ. ಅವರು ಸಾಮಾನ್ಯವಾಗಿ ಆಡಳಿತ ಮಂಡಳಿ ತೀರ್ಮಾನದಂತೆ ಮತ್ತು ಉಪನಿಯಮ ಹಾಗೂ ಕಾನೂನು ಅನ್ವಯ ಕಾರ್ಯ ನಿರ್ವಹಿಸಿರುತ್ತಾರೆ. ನಮ್ಮ ಅಭಿಪ್ರಾಯದಲ್ಲಿ ಅವರು ಬ್ಯಾಂಕ್ ನಡೆಸುವ ಸಾಮರ್ಥ್ಯ ಹೊಂದಿರುತ್ತಾರೆ ಆದರೆ ಅವರ ಕಾರ್ಯಕ್ಷಮತೆಯು ಒಟ್ಟಾರೆಯಾಗಿ ತೃ_ತಿಕರವಾಗಿದ್ದರೂ, ನಾನ್–ಎಸ್ ಎಲ್ ಆರ್ ಹೂಡಿಕೆಯಲ್ಲಿ ಮತ್ತು ಸಾಲಗಳ ಮೌಲ್ಯಾಂಕನದಲ್ಲಿ ಜಾಗೂರುಕತೆಯ ಅವಶ್ಯಕತೆ ಕಂಡುಬಂದಿರುತ್ತದೆ.

**iii) 2ನೇ ಹಂತದ ಸಿಬ್ಬಂದಿಗಳ ಕಾರ್ಯನಿರ್ವಹಣೆ, ನೇಮಕಾತಿ, ತರಬೇತಿ, ಜವಾಬ್ದಾರಿ ನಿಗದಿಪಡಿಸುವಿಕೆ, ರೊಟೇಷನ್ ಬಗ್ಗೆ ವಿಮರ್ಶೆ.**

ಎಲ್ಲಾ ಸಿಬ್ಬಂದಿಗಳನ್ನು ಬ್ಯಾಂಕಿನ ಸಿಬ್ಬಂದಿ ನಿಯಮಾವಳಿಗಳು ಹಾಗೂ ಉಪನಿಯಮಗಳ ಪ್ರಕಾರ ಆಯ್ಕೆ ಮಾಡಿಕೊಳ್ಳಲಾಗಿದ್ದು, ಆಯಾ ಹುದ್ದೆಗೆ ಅವಶ್ಯಕ ತರಬೇತಿಯನ್ನು ನೀಡಲಾಗಿರುತ್ತದೆ. ಆಯಾ ಹುದ್ದೆಗೆ ಅನುಗುಣವಾಗಿ ಜವಾಬ್ದಾರಿ ನಿಗದಿಪಡಿಸಲಾಗಿದೆ. ಕಾಲ ಕಾಲಕ್ಕೆ ರೊಟೇಷನ್ ಮಾಡುವ ಪದ್ದತಿ ಜಾರಿಯಲ್ಲಿರುತ್ತದೆ.

| | | |
|---|---|---|
| 55 | ಲೆಕ್ಕಪರಿಶೋಧಕರ ಸಲಹೆ / ಸೂಚನೆಗಳು | ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 36, ಪುಟ ಸಂಖ್ಯೆ 70 ನೋಡುವುದು. |
| 56 | ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು | ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 37, ಪುಟ ಸಂಖ್ಯೆ72 ನೋಡುವುದು. |
| 57 | ಲೆಕ್ಕಪರಿಶೋಧನಾ ವರ್ಗೀಕರಣ:<br>ಎ) ಹಿಂದಿನ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ "ಎ" ದರ್ಜೆ<br>ಬಿ) ವರದಿ ಸಾಲಿಗೆ ಲೆಕ್ಕಪರಿಶೋಧನಾ ವರ್ಗೀಕರಣ "ಸಿ" ದರ್ಜೆ<br>(ವರ್ಗೀಕರಣ ಪಟ್ಟಿ ಲಗತ್ತಿಸಿದೆ)<br>ಟಿಪ್ಪಣಿ: 2019–20ನೇ ಸಾಲಿನಿಂದ ಲೆಕ್ಕಪರಿಶೋಧನಾ ವರ್ಗೀಕರಣದ ಮಾನದಂಡಗಳನ್ನು CAMELS RATING ಪ್ರಕಾರ ಮಾಡ ಬೇಕಾಗಿದ್ದು, ವರದಿ ಸಾಲಿನಲ್ಲಿ ಪ್ರಮುಖವಾಗಿ ಅನುತ್ಪಾದಕ ಆಸ್ತಿಗಳಲ್ಲಿನ ಏರಿಕೆ, ಆ ಅನುತ್ಪಾದಕ ಆಸ್ತಿಗಳ ಮೇಲೆ ಕಲ್ಪಿಸಿದ ಅವಕಾಶಗಳಲ್ಲಿನ ಏರಿಕೆ, ಕಮರ್ಷಿಯಲ್ ಪೇಪರ್ಸ್‌ಗಳ ಮೇಲೆ ನವಂಬರ್ 2019 ರಿಂದ ಬಡ್ಡಿ ಬರದೇ ಇರುವುದು ಮತ್ತು ಈ ಹೂಡಿಕೆ ಅನುತ್ಪಾದಕ Non-SLR ಹೂಡಿಕೆಯಾಗಿರುವುದು ಮತ್ತು ಈ ಅಂಶಗಳಿಂದಾಗಿ ಬ್ಯಾಂಕಿನ ಲಾಭ ಗಳಿಕೆಯಲ್ಲಿ ಗಣನೀಯ ಇಳಿಕೆಯಾಗಿರುವುದು "ಸಿ"ವರ್ಗೀಕರಣಕ್ಕೆ ಪ್ರಮುಖ ಕಾರಣಗಳಾಗಿರುತ್ತವೆ. | |

ಪಂಪಣ್ಣ ಮತ್ತು ಕಂಪನಿ,
ಸನ್ನದು ಲೆಕ್ಕಪರಿಶೋಧಕರ ಪರವಾಗಿ,
ಸಂಸ್ಥೆಯ ನೋಂದಣಿ ಸಂಖ್ಯೆ 010225S
ಸಹಿ/–
(ಪಂಪಣ್ಣ) ಮಾಲೀಕರು
ಸದಸ್ಯತ್ವದ ಸಂಖ್ಯೆ : 207100

ದಿನಾಂಕ : 20.11.2020
ಸ್ಥಳ :ಬೆಂಗಳೂರು

**ಅಡಕಗಳು:**

1) ಜಮಾ–ಖರ್ಚು ತ:ಖ್ತೆ : ಲಗತ್ತಿಸಿದೆ.
2) ಲಾಭ–ನಷ್ಟ ತ:ಖ್ತೆ : ಲಗತ್ತಿಸಿದೆ.
3) ಆಸ್ತಿ–ಜವಾಬ್ದಾರಿ ತ:ಖ್ತೆ : ಲಗತ್ತಿಸಿದೆ.
4) ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ : ಲಗತ್ತಿಸಿದೆ.
5) ಕುಳುವಾರು ಪಟ್ಟಿಗಳು : ಲಗತ್ತಿಸಿದೆ.
6) ಎನ್. .ಎ ತ:ಖ್ತೆ : ಲಗತ್ತಿಸಿದೆ.
7) ವರ್ಗೀಕರಣ ತ:ಖ್ತೆ, ಅನುಬಂಧ–2 ಲೆಕ್ಕಪರಿಶೋಧನಾ ವರ್ಗೀಕರಣ : ಲಗತ್ತಿಸಿದೆ.